ಮಾನವಿಕ ಕರ್ನಾಟಕ

ಸಂಪುಟ ೩೨ ಸಂಚಿಕೆ ೩



ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಮಾನವಿಕ ಕರ್ಣಾಟಕ

ಸಂಪುಟ ೩೭ – ಸಂಚಿಕೆ ೩

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
೨೦೦೯

manavika karnataka : A Kannada Quarterly of the University of Mysore, Volume 37, No. 3, Edited by Prof. Aravindamalagatti, Prof. V.N. Sheshagiri Rao and Prof. R. Ramakrishna, Published by the Director, Prasaranga, University of Mysore, Manasagangotri, Mysore - 570 006 Pp vii+113

ಪ್ರಧಾನ ಸಂಪಾದಕರು

ಪ್ರೊ. ಸಿ. ನಾಗಣ್ಣ

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ

ಮೈಸೂರು ೫೭೦ ೦೦೬

ಸಂಪಾದಕರು

ಪ್ರೊ. ವಿ.ಎನ್. ಶೇಷಗಿರಿರಾವ್

ಪ್ರೊ. ಅರವಿಂದ ಮಾಲಗತ್ತಿ

ಪ್ರೊ. ಆರ್. ರಾಮಕೃಷ್ಣ

ಪ್ರಕಾಶಕರು ಮತ್ತು ಮುದ್ರಕರು

ಪ್ರೊ. ಸಿ. ನಾಗಣ್ಣ

ನಿರ್ದೇಶಕರು

ಪ್ರಸಾರಾಂಗ ಮತ್ತು ವಿಶ್ವವಿದ್ಯಾನಿಲಯ ಮುದ್ರಣಾಲಯ

ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬

ಪ್ರಕಾಶಕರ ಮಾತು

ಗ್ರಂಥಗಳ ಮೂಲಕ ಪಡೆಯುವ ಜ್ಞಾನ ಒಂದು ಬಗೆಯದಾದರೆ ನಿಯತಕಾಲಿಕೆಗಳ ಮೂಲಕ ಗಳಿಸುವ ಜ್ಞಾನ ಇನ್ನೊಂದು ಬಗೆಯದಾಗಿರುತ್ತದೆ. ಹಲವು ಗ್ರಂಥಗಳನ್ನು ಪರಾಮರ್ಶಿಸಿ ಮಥಿತ ತಿಳುವಳಿಕೆಯನ್ನು ನಿಯತಕಾಲಿಕೆಗಳಲ್ಲಿ ಪ್ರಬಂಧಗಳ ರೂಪದಲ್ಲಿ ಕಾಣಿಸುವುದು ಹಲವು ಜ್ಞಾನಶಿಸ್ತುಗಳನ್ನು ದಕ್ಕಿಸಿಕೊಳ್ಳುವ ಮಾರ್ಗವಾಗಿದೆ. "ಮಾನವಿಕ ಕರ್ಣಾಟಕ" ಅನೇಕ ಶಿಸ್ತುಗಳ ಸಂಗಮವೆನ್ನಬಹುದು. ಹಾಗಾಗಿ ಈ ಸಂಗಮದಲ್ಲಿ ಸ್ಥಾನ ಪಡೆಯುವ ಪ್ರಬಂಧಗಳು ಜ್ಞಾತಿ ವಿಷಯಗಳ ಜಿಜ್ಞಾಸುಗಳನ್ನೂ ತಲುಪುತ್ತವೆ. ಈ ವಿಶಾಲ ವೇದಿಕೆಯಲ್ಲಿ ಅವಕಾಶ ಪಡೆಯಲು ವಿಶೇಷವಾಗಿ ಎಳೆಯ ತಲೆಮಾರಿನ ವಿದ್ವಾಂಸರು ಹಾಗೂ ಸಂಶೋಧಕರು ಉತ್ಸುಕರಾಗಿದ್ದಾರೆ. ಪಿಎಚ್.ಡಿ. ನಿಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಮೊದಲು ಇಲ್ಲಿನ ನಿಯತಕಾಲಿಕೆಗಳಲ್ಲಿ ಕನಿಷ್ಠ ಒಂದು ಪ್ರಬಂಧವಾದರೂ ಪ್ರಕಟವಾಗಿರಬೇಕು ಎಂಬ ನಿಯಮವನ್ನು ಮಾನ್ಯ ಕುಲಸಚಿವರು ಹೊರಡಿಸಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಪ್ರಬಂಧಗಳ ಪ್ರಕಟಣೆಗೆ ಮುಂದೆ ಬರುತ್ತಿದ್ದಾರೆ. "ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು" ಎಂಬ ಲೋಕಜ್ಞಾನದ ಹಿನ್ನೆಲೆಯಲ್ಲಿ ಹೊಸಬರ ಬರೆಹದ ಜೊತೆ ಜೊತೆಗೆ ಪರಿಣತರ ಬರಹಗಳನ್ನೂ ಸಂಯೋಗಗೊಳಿಸುವುದು ಯುಕ್ತವೆಂದು ತಿಳಿದು ಆ ಮಾರ್ಗವನ್ನನುಸರಿಸಲು ಪ್ರಯತ್ನಿಸಿದೆ.

ನಿಯತಕಾಲಿಕೆಗಳು ವಿಳಂಬವಾಗಬಾರದು ಎಂದು ಸನ್ಮಾನ್ಯ ಕುಲಪತಿಗಳಾದ ಪ್ರೊ.ವಿ.ಜಿ. ತಳವಾರ್ ಅವರು ತುಂಬಾ ಕಾಳಜಿ ವಹಿಸಿ ನಮ್ಮನ್ನೆಲ್ಲಾ ಜಾಗೃತಗೊಳಿಸಿದ್ದಾರೆ. ಅವರಿಗೆ ನನ್ನ ನಮನಗಳು. ಮಾನ್ಯ ಕುಲಸಚಿವರಾದ ಪ್ರೊ. ಪಿ. ಎಸ್. ನಾಯಕ್ ಅವರ ಮಾರ್ಗದರ್ಶನಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳು. "ಮಾನವಿಕ ಕರ್ಣಾಟಕ"ದ ಸಂಪಾದಕರಾದ ಪ್ರೊ. ಅರವಿಂದ ಮಾಲಗತ್ತಿ, ಪ್ರೊ. ವಿ. ಎನ್. ಶೇಷಗಿರಿರಾವ್ ಹಾಗೂ ಪ್ರೊ. ಆರ್. ರಾಮಕೃಷ್ಣ ಅವರ ಸಹಕಾರಕ್ಕಾಗಿ ನನ್ನ ಕೃತಜ್ಞತೆಗಳು. ನಿಯತಕಾಲಿಕೆಗಳ ಅಕ್ಷರ ವಿನ್ಯಾಸದಲ್ಲಿ ನಿರತರಾಗಿರುವ ಶ್ರೀಮತಿ ಮೀನಾವತಿ ಅವರಿಗೆ, ಕರಡು ಪರಿಶೀಲಕರಾದ ಶ್ರೀಮತಿ ಟಿ. ಕಮಲಮ್ಮ ಅವರಿಗೆ, ಪ್ರಸಾರಾಂಗ ಹಾಗೂ ಮುದ್ರಣಾಲಯದ ಎಲ್ಲ ಸಿಬ್ಬಂದಿ ವರ್ಗದವರಿಗೆ ನಾನು ಆಭಾರಿಯಾಗಿದ್ದೇನೆ.

ಪ್ರೊ. ಸಿ. ನಾಗಣ್ಣ

ಸಂಪಾದಕರ ಮಾತು

ಈ ಸಂಪುಟದಲ್ಲಿ ಒಟ್ಟು ಹನ್ನೆರಡು ಲೇಖನಗಳಿವೆ; ನೂರ ಹದಿಮೂರು ಪುಟಗಳಿಂದ ಅದು ಮೈದುಂಬಿಕೊಂಡಿದೆ.

ಶ್ರೀ ಎಸ್. ಶಿವರಾಮು ಅವರದು, ವೈಷ್ಣವಧರ್ಮವನ್ನು ಕುರಿತ ಲೇಖನ; ಈ ಸಂಪುಟದಲ್ಲಿ ಮೊದಲನೆಯದು. ಹೊಯ್ಸಳರಾದ ವಿಷ್ಣುವರ್ಧನ ಹಾಗೂ ಆತನ ಅನಂತರ ಬಂದ ರಾಜಮನೆತನಗಳು ವೈಷ್ಣವ ಧರ್ಮಕ್ಕೆ ನೀಡಿದ ಕೊಡುಗೆಗಳನ್ನು ಈ ಲೇಖನ ಅಚ್ಚುಕಟ್ಟಾಗಿ ಚಿತ್ರಿಸುತ್ತದೆ.

ಎರಡನೆಯ ಲೇಖನವೆ ಶ್ರೀ ಜೆ. ಲೋಹಿತ್ ಅವರ, "ಡೊಂಕುಬಾಲದ ನಾಯಕರೆ......!" ಇದು ಮನುಷ್ಯನ ನೆಚ್ಚಿನ ಬಂಟನಾದ ನಾಯಿಯನ್ನು ಕುರಿತದ್ದು. ಅದರ ವಾಸನಾ ಪ್ರಜ್ಞೆ, ಬುದ್ಧಿಶಕ್ತಿಯನ್ನು ಈ ಲೇಖನ ಎಳೆಎಳೆಯಾಗಿ ಬಿಡಿಸಿ ನಮ್ಮ ಮುಂದೆ ಇಡುತ್ತದೆ. ವಿವಿಧ ಜಾತಿಯ ನಾಯಿಗಳು, ಅವುಗಳ ನಾಮಕರಣ ಪ್ರಕರಣಗಳು, ವಿವಿಧ ಕವಿಗಳ ಕವನಗಳ ಮೂಲಕ, ತಿಳಿಹಾಸ್ಯದಿಂದ ಈ ಲೇಖನ ನಮ್ಮ ಮನಸ್ಸನ್ನು ರಂಜಿಸುತ್ತದೆ. ನಾಯಿ, ಹೇಗೆ ನಾಣ್ಣುಡಿಗಳ ಮೂಲಕ ವ್ಯಕ್ತವಾಗಿದೆ ಎಂಬುದನ್ನು ಸುವಿಸ್ತಾರವಾಗಿ ಇಲ್ಲಿ ಚರ್ಚಿಸಲಾಗಿದೆ.

ಮೂರನೆಯ ಲೇಖನ ಶ್ರೀ ಲೋಕೇಶ್ ಸಿ.ಇ. ಅವರ ಹೊಯ್ಸಳ ದೇವಾಲಯಗಳಲ್ಲಿ ಕಥಾಸಕ ಶಿಲ್ಪಗಳು – ಒಂದು ಅವಲೋಕನ. ಕಥನಾ ನಿರೂಪಣ ಶಿಲ್ಪಗಳು ಹೇಗೆ ದೇವಾಲಯಗಳ ಅವಿಭಾಜ್ಯ ಅಂಗವಾಗಿವೆ ಎಂಬುದನ್ನು ಈ ಲೇಖನ ಸೋದಾಹರಣೆಗಳ ದ್ವಾರಾ ಸುಂದರವಾಗಿ ಚಿತ್ರಿಸುತ್ತದೆ.

ನಾಲ್ಕನೆಯ ಲೇಖನ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ್ದು; ಪತ್ರಿಕೋದ್ಯಮದಲ್ಲಿ ಗಾಂಧೀಜಿ ಎಂಬ ಪುಟ್ಟ ಸ್ವಾರಸ್ಯಕರವಾದ ಲೇಖನ ಶ್ರೀ ಸಿ.ಕೆ. ಪುಟ್ಟಸ್ವಾಮಿಯವರಿಂದ. ಗಾಂಧೀ ಪತ್ರಿಕೋದ್ಯಮ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ಬಗ್ಗೆ ಲೇಖಕರು ಸೂಚಿಸುತ್ತಾರೆ.

ಐದನೆಯ ಲೇಖನ ವಿಜ್ಞಾನವನ್ನು ಕುರಿತದ್ದು; ಅದು ಹೇಗೆ ಒಂದು ವಿಶಿಷ್ಟ ಮನೋಭಾವವನ್ನು ತರ್ಕಬದ್ಧವಾಗಿ ರೂಪಿಸುತ್ತದೆ ಎಂಬುದು ; ಲೇಖಕರು ಶ್ರೀ ಪಿ. ಅರುಳಪ್ಪ, ನಿಜವನ್ನು ಹೇಳುವ ಧೈರ್ಯವನ್ನು ವಿಜ್ಞಾನ ಮಾಡುತ್ತದೆ; ಅದೊಂದು ಶಕ್ತಿ ಎನ್ನುತ್ತಾರೆ ಲೇಖಕರು. ಸತ್ಯವನ್ನು ಹುಡುಕುವುದೇ ಅದರ ಪರಮ ಉದ್ದೇಶ.

ಆರನೆಯ ಲೇಖನ, ಭಾರತದ ಕೆಲವು ದೇವಾಲಯಗಳಲ್ಲಿ ಕಂಡುಬರುವ ಮಿಥುನ ಶಿಲ್ಪಗಳ ಬಗ್ಗೆ ಮಿಥುನ ಶಿಲ್ಪದ ಉಗಮ ಮತ್ತು ವಿಕಾಸವನ್ನು ಈ

ಲೇಖನದ ಬರಹಗಾರರಾದ ಶ್ರೀ ಎ. ಶ್ರೀಧರಮೂರ್ತಿ, ಸಂಕೇತಗಳ ಮೂಲಕ ಮಾರ್ಮಿಕವಾಗಿ ಚಿತ್ರಿಸುತ್ತಾರೆ. ಪದೇ ಪದೇ ಓದಿಸಿಕೊಳ್ಳುವುದು, ಈ ಲೇಖನದ ಜೀವಾಳ.

ಏಳನೆಯ ಲೇಖನವೇ ಸಾವಯವ ಕೃಷಿಗೆ, ಕೃಷಿ ಅಭಿವೃದ್ಧಿಗೆ ಸಂಬಂಧಿಸಿದ್ದು; ವಿ.ಜಿ. ಸಿದ್ದರಾಜು ಮತ್ತು ಎಂ. ಇಂದಿರಾ ಎಂಬ ಲೇಖಕ ದ್ವಯರಿಂದ ಭಾರತದ ಕೃಷಿ ಉತ್ಪಾದನೆ ಸಾವಯವ ಕೃಷಿಯತ್ತ ಬದಲಾಗುತ್ತಿರುವುದು, ಪರಿಸರ, ಸಾವಯವ ಕೃಷಿಯ ಉದ್ದೇಶ ಹಾಗೂ ಪ್ರಯೋಜನಗಳನ್ನು, ಈ ಲೇಖನ ಪರಿಣಾಮಕಾರಿಯಾಗಿ ವಿಶ್ಲೇಷಿಸುತ್ತದೆ.

ಎಂಟನೆಯ ಲೇಖನ ಶಿಕ್ಷಣಕ್ಕೆ ಸಂಬಂಧಿಸಿದ್ದು; ಅದರಲ್ಲಿ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತನ್ನು ನೀಡುವಂಥಾದ್ದು ; ಲೇಖಕರು ಜಿ. ರತ್ನಮ್ಮ. ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದರೂ ಮಹಿಳೆಯ ಸ್ಥಿತಿಗತಿಗಳು ಹೆಚ್ಚು ಕಡಿಮೆ ಹಿಂದಿನಂತೆಯೇ ಇವೆ; ಅಂತಹ ಹೇಳಿಕೊಳ್ಳುವ ಬದಲಾವಣೆಗಳೇನೂ ಆಗಿಲ್ಲ ಎಂದು ಲೇಖನ ಸೂಚಿಸುತ್ತದೆ. ಸ್ತ್ರೀ ಶಿಕ್ಷಣದ ಸಮಸ್ಯೆಗಳು ಮತ್ತು ಅವುಗಳ ಪರಿಹಾರೋಪಾಯಗಳನ್ನು ಇಲ್ಲಿ ದಾಖಲಿಸಲಾಗಿದೆ.

ಒಂಬತ್ತನೆಯ ಲೇಖನ ಪಶ್ಚಿಮ ಏಷ್ಯಾದ ಅಲ್ಪಸಂಖ್ಯಾತರನ್ನು ಕುರಿತದ್ದು; ಲೇಖಕರು ಶ್ರೀ ಶಿವಾನಂದ. ಅಲ್ಲಿ ವಿವಿಧ ಜನಾಂಗಗಳು ಸಹಬಾಳ್ವೆ ನಡೆಸುತ್ತಿವೆ. ಇಸ್ಲಾಂ ಒಂದು ಪ್ರಜಾಪ್ರಭುತ್ವವೆಂದು ಅಲ್ಲಿನ ಅಲ್ಪಸಂಖ್ಯಾತರು ತಿಳಿದಿದ್ದಾರೆಂದು ಲೇಖಕರು ಅಭಿಪ್ರಾಯಪಡುತ್ತಾರೆ.

ಹತ್ತನೆಯ ಲೇಖನ, ಎಸ್. ನಾಗರಾಜು ಅವರಿಂದ, ಬಿ. ಬಸವಲಿಂಗಪ್ಪನವರಿಗೆ ಸಂಬಂಧಿಸಿದ್ದು. ಅವರನ್ನು ಲೇಖಕರು ಬದ್ಧತೆಯ ನಾಯಕ ಎಂದು ಕರೆಯುತ್ತಾರೆ; ಕಾರಣ ಅವರು ದಲಿತ ನೀತಿಯ ಪರವಾಗಿ ಎಲ್ಲಾ ಸಂದರ್ಭಗಳಲ್ಲೂ ನಿಂತವರು. ಅವರಲ್ಲಿ ದಲಿತೋದ್ಧಾರದ ಕಾತರವಿತ್ತು. ಅವರು ಪರಿಸರವಾದಿಗಳೂ ಸಹ. ಬೌದ್ಧ ಧರ್ಮದ ಬಗ್ಗೆ ಒಲವು ಮೂಡಿಸಿಕೊಂಡ ಅವರು, ಜನರನ್ನು ಅಜ್ಞಾನದಿಂದ, ಮೂಢನಂಬಿಕೆಗಳಿಂದ ಪಾರುಮಾಡುವಲ್ಲಿ ಶ್ರಮಿಸಿದರು.

ಹನ್ನೊಂದನೆಯ ಲೇಖನ 'ಜಲಿಯನ್‌ವಾಲಾಬಾಗ್ ಹತ್ಯಾಕಾಂಡ'ವನ್ನು ಕುರಿತದ್ದು, ಶ್ರೀ ಎಂ. ವೆಂಕಟಸ್ವಾಮಿಯವರಿಂದ. ಜನರಲ್ ಡೈಯರನು ಭಾರತದ ಸ್ವಾತಂತ್ರ್ಯ ಚಟುವಟಿಕೆಗಳನ್ನು ಹತ್ತಿಕ್ಕಲು ಅನುಸರಿಸಿದ ದಮನೀಯ ಕ್ರೌರ್ಯ ವ್ಯವಸ್ಥೆಯನ್ನು ಲೇಖಕರು ಇಲ್ಲಿ ಚೆನ್ನಾಗಿ ವಿಶ್ಲೇಷಿಸಿದ್ದಾರೆ.

ಹನ್ನೆರಡನೆಯ ಮತ್ತು ಕಡೆಯ ಲೇಖನ 'ಅನುದಿನವೂ ಹೊಸತಿನೆಡೆಗೆ' ಮತ್ತು 'ಪಾಪವನ್ನು ದ್ವೇಷಿಸುವ, ಪಾಪಿಯನ್ನಲ್ಲ' ಎಂಬ ಎರಡು ಚಿಂತನೆಗಳು ವಿ. ಎನ್.

ಶೇಷಗಿರಿರಾವ್ ಅವರಿಂದ. ಜೀವನದಲ್ಲಿ ಬದಲಾವಣೆ, ಹೊಸತನ ಆವಶ್ಯಕ. ಇಲ್ಲವಾದರೆ ಜೀವನ ನೀರಸವಾಗುತ್ತದೆ. ಅಜ್ಞಾನ, ಅವಿವೇಕ, ರೋಗರುಜಿನಗಳನ್ನು ದ್ವೇಷಿಸಬೇಕೇ ಹೊರತು, ಅಜ್ಞಾನಿಯನ್ನಲ್ಲ, ರೋಗಿಯನ್ನಲ್ಲ ಎಂದು ಈ ಲೇಖನ ಸಾರುತ್ತದೆ.

ಒಟ್ಟಿನಲ್ಲಿ, ಈ ಸಂಪುಟದಲ್ಲಿ ಶಿಲ್ಪಕಲೆ, ಪ್ರೀತಿ, ನೀತಿ, ತಿಳಿಹಾಸ್ಯ, ಪತ್ರಿಕೋದ್ಯಮ, ವಿಜ್ಞಾನ, ಕೃಷಿ, ಶಿಕ್ಷಣ, ಅಲ್ಪಸಂಖ್ಯಾತರು, ತತ್ತ್ವಬದ್ಧತೆ, ಕ್ರೌರ್ಯದ ಪರಮಾವಧಿ ಮುಂತಾದ ಜ್ವಲಂತ ಪರಿಕಲ್ಪನೆಗಳು ಹೊಚ್ಚಹೊಸದಾಗಿ ಮೂಡಿಬಂದಿವೆ.

ಪ್ರೊ. ವಿ.ಎನ್. ಶೇಷಗಿರಿರಾವ್
ಪ್ರೊ. ಅರವಿಂದ ಮಾಲಗತ್ತಿ
ಪ್ರೊ. ಆರ್. ರಾಮಕೃಷ್ಣ

ಪರಿವಿಡಿ

೧. ಹೊಯ್ಸಳರ ಕಾಲದಲ್ಲಿ ಶ್ರೀವೈಷ್ಣವ ಧರ್ಮಕ್ಕೆ ನೀಡಿದ ಕೊಡುಗೆ ಹಾಗೂ ಪೋಷಣೆ

– ಒಂದು ಐತಿಹಾಸಿಕ ಅವಲೋಕನ

–ಡಾ. ಎಸ್. ಶಿವರಾಮು

ವೈಷ್ಣವಧರ್ಮವು ಹಲವು ರಾಜಮನೆತನಗಳ ಹಾಗೂ ಹಲವು ಸಾಮ್ರಾಟರ ನೆರವಿನಿಂದ ಒಂದು ಪ್ರಬಲ ಧರ್ಮವಾಗಿ ಪ್ರವರ್ಧಮಾನಕ್ಕೆ ಬಂದಿತು. ಈ ಧರ್ಮವು ರಾಜ ಮಾನ್ಯರು, ವರ್ತಕರು ಹಾಗೂ ಜನಸಾಮಾನ್ಯರನ್ನು ತನ್ನತ್ತ ಸೆಳೆಯುತ್ತಾ ಮುಂದುವರೆಯಿತು. ಹೊಯ್ಸಳರ ಕಾಲದಲ್ಲಿ ವಿಷ್ಣುವರ್ಧನ ಮತ್ತು ಅವನ ನಂತರ ಈ ಧರ್ಮವು ಹೊಯ್ಸಳರ ಬೆಂಬಲವನ್ನು ಶ್ರೀ ರಾಮಾನುಜಾಚಾರ್ಯರ ಪ್ರಭಾವದಿಂದ ಪಡೆಯಿತು. ವಿಷ್ಣುವರ್ಧನನು ಶ್ರೀವೈಷ್ಣವ ಧರ್ಮೀಯನಾಗಿದ್ದು ಹಲವು ವೈಷ್ಣವ ದೇವಾಲಯಗಳನ್ನು ನಿರ್ಮಾಣ ಮಾಡಿದನು. ಅಲ್ಲದೇ ಅವುಗಳಿಗೆ ಉದಾರವಾಗಿ ದಾನದತ್ತಿಗಳನ್ನು ನೀಡಿದನು. ಅವನು ಕಟ್ಟಿಸಿದ ದೇವಾಲಯಗಳಲ್ಲಿ ತಲಕಾಡಿನ ಕೀರ್ತಿನಾರಾಯಣ, ಬೇಲೂರಿನ ವಿಜಯ ನಾರಾಯಣ ಮತ್ತು ಇತರ ದೇವಾಲಯಗಳು ಮುಖ್ಯವಾದವು. ವಿಷ್ಣುವರ್ಧನನು ಧಾರ್ಮಿಕ ಸಹಿಷ್ಣುವಾಗಿದ್ದು ಯಾವುದೇ ಧರ್ಮದ ವಿಚಾರದಲ್ಲೂ ಪಕ್ಷಪಾತ ತೋರಿಸಲಿಲ್ಲ ಎಂದು ಪ್ರೊ. ಎಸ್.ಕೆ. ಅಯ್ಯಂಗಾರ್‌ರವರು ಅಭಿಪ್ರಾಯಪಟ್ಟಿದ್ದಾರೆ. ವಿಷ್ಣುವರ್ಧನನ ನೆರವಿನಿಂದ ರಾಮಾನುಜರು ಮೇಲುಕೋಟೆಯಲ್ಲಿ ಯತಿರಾಜ ಮಠವನ್ನು ಸ್ಥಾಪಿಸಿದರು.[೧] ಇದರ ಮೇಲ್ವಿಚಾರಣೆಗಾಗಿ ಕಾವೇರಿ ತೀರದಲ್ಲಿರುವ ಶ್ರೀರಂಗಪಟ್ಟಣದ ಅಷ್ಟಗ್ರಾಮಗಳನ್ನು ಈ ಮಠಕ್ಕೆ ಅನುದಾನ ಕೊಡಲಾಯಿತು.

ಈ ಕಾಲದಲ್ಲಿ ವೈಷ್ಣವಧರ್ಮಕ್ಕೆ ದೊರೆತ ಪ್ರೋತ್ಸಾಹವನ್ನು ಹಲವಾರು ದಾಖಲೆಗಳಿಂದ ತಿಳಿಯಬಹುದಾಗಿದೆ. ಅಲ್ಲದೇ ವಿಷ್ಣುದೇವಾಲಯಗಳಿಗೆ ದಾನ ದತ್ತಿಗಳನ್ನೂ ಕೊಡಲಾಯಿತೆಂದು ತಿಳಿಸುತ್ತದೆ. ಶ್ರೀವೈಷ್ಣವರ ರಕ್ಷಣೆಗೆ ಮೈಸೂರು ಜಿಲ್ಲೆಯ ತಲಕಾಡಿನ ಬಳಿ ಮಾಲಂಗಿ ಗ್ರಾಮವನ್ನು ಜಿನನಾಥಪುರದ ದೇವರಿಗಾಗಿ ಹಾಗೂ ಹೂತೋಟವನ್ನು ನೋಡಿಕೊಳ್ಳಲು ಒಬ್ಬ ಸೇವಕನಿಗೆ ದಾನ ಕೊಡಲಾಯಿತೆಂದೂ ಒಂದು ದಾಖಲೆಯು ಸ್ಪಷ್ಟಪಡಿಸುತ್ತದೆ.[೨] ೧೦೨೪ರಲ್ಲಿ ರಾಜೇಂದ್ರ ಚತುರ್ವೇದಿ ಮಂಗಲದ ಅಪ್ರಮೇಯ ದೇವರಿಗೆ ಬೆಂಗಳೂರು ಜಿಲ್ಲೆಯ ದೊಡ್ಡ ಮಳೂರಿನ ಗ್ರಾಮಸ್ಥರು ಅನುದಾನ ಮಾಡಿದರೆಂದು ತಿಳಿಸುತ್ತದೆ.[೩] ಬನ್ನಿಯೂರು ಅಥವಾ ಜಿನನಾಥ ಚತುರ್ವೇದಿ ಮಂಗಲದ ೧೭೦೦ ಬ್ರಾಹ್ಮಣರು ವಿಷ್ಣುದೇವರಿಗೆ ದಾನ ಮಾಡಿದರೆಂದು ಹೊಯ್ಸಳ ನರಸಿಂಹನ ಒಂದು ದಾಖಲೆಯು ತಿಳಿಸುತ್ತದೆ.[೪] ಪುರಾಣಿಕ ಜನಾರ್ಧನಭಟ್ಟನು ಅನಂತಿಯಲ್ಲಿ ನಾರಾಯಣ ದೇವಾಲಯವನ್ನು ಕಟ್ಟಿದ್ದು ಇದಕ್ಕೆ ದೊರೆಯು ಹಣದ ಅನುದಾನ ಮಾಡಿದನೆಂದೂ ಹೊಯ್ಸಳ ವಿಷ್ಣುವರ್ಧನನ ಕಾಲದ ಒಂದು ದಾಖಲೆಯು ವಿವರಣೆಯನ್ನು ನೀಡುತ್ತದೆ.[೫]

ಬಳ್ಳಾರಿ ಜಿಲ್ಲೆಯ ಜನ್ನ ತಂಬೂಲದ ಒಂದು ದಾಖಲೆಯು ಕೇಶವ ದೇವಾಲಯಕ್ಕೆ ಭೂ ದಾನ ಮಾಡಿದರೆಂದೂ ಅಲ್ಲದೆ ವ್ಯಾಪಾರಿವರ್ಗದವರು ಸಹಾ ವಂತಿಗೆಯನ್ನು ನೀಡಿದರೆಂದು ತಿಳಿಸುತ್ತದೆ.[೬] ದಾನಿಗಳನ್ನು ಗೌರವಿಸುತ್ತಿದ್ದುದಕ್ಕೆ ಈ ಕಾಲದಲ್ಲಿ ಹಲವಾರು ನಿದರ್ಶನಗಳು ನಮಗೆ ದೊರೆಯುತ್ತದೆ. ತಲಕಾಡಿನ ಕೀರ್ತಿನಾರಾಯಣ ದೇವಾಲಯದ ಒಬ್ಬ ಸೇವಕಿಯು ಒಂದು ಚಿನ್ನದ ದೇವಿಯ ಮೂರ್ತಿಯನ್ನು ದೇವರ ಎದೆಯ ಮೇಲೆ ಸ್ಥಾಪಿಸಲು ದಾನ ಮಾಡಿದಕ್ಕಾಗಿ ಅವಳಿಗೆ ದೇವಾಲಯದಲ್ಲಿ ಗೌರವವನ್ನು ನೀಡಲಾಯಿತು. ಯಾದವ ನಾರಾಯಣ ಚತುರ್ವೇದಿ ಮಂಗಲದಲ್ಲಿ ವಿಟ್ಟಿರುಂದ ಪೆರುಮಾಳ್ ದೇವರಿಗೆ ಕುಟ್ಟಡಿದಂಡ ನಾಯಕನು ಭೂದೇವಿ ಮತ್ತು ಲಕ್ಷ್ಮೀಸಮೇತ ಜಮೀನುಗಳನ್ನು ದಾನ ಮಾಡಿದನೆಂದು ಹೊಯ್ಸಳ ನರಸಿಂಹನ ಕಾಲದ ಶ್ರೀರಂಗಪಟ್ಟಣದ ಒಂದು ದಾಖಲೆಯು ತಿಳಿಸುತ್ತದೆ.[೭] ೧೧೬೦ರಲ್ಲಿ ಮೇಲಿನ ಅಗ್ರಹಾರದ ನಾರಾಯಣ ದೇವರಿಗೆ ಒಂದು ಅನುದಾನವನ್ನು ನೀಡಲಾಯಿತು.[೮] ತರ್ದವಾದಿಯನ್ನು ಹೊಯ್ಸಳ ದೊರೆ ನರಸಿಂಹನು ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಕೇಶವದೇವರಿಗೆ ದಾನವಾಗಿ ನೀಡಿದನು. ಇವನ ಮಂತ್ರಿ ಹಾಗೂ ಸೇನಾಧಿಪತಿಯಾಗಿದ್ದ ಬಿಟ್ಟಿಯಣ್ಣನು ಈ ದೇವರಿಗೆ ಆ ಊರಿನ ಕೆಲವು

ಮನೆಗಳನ್ನೂ ಕೆಲವು ತೆರಿಗೆಗಳನ್ನೂ ದಾನ ಮಾಡಿದನು.[೯] ಹೆಗ್ಗಡೆ ಬೂಚಿರಾಜನು ದೊರೆಯಿಂದ ಹಳ್ಳೇಯ ಕೆರೆಯನ್ನು ದತ್ತಿಯಾಗಿ ಪಡೆದು ಆ ಗ್ರಾಮಕ್ಕೆ ಸೋಮನಾಥಪುರವೆಂದು ಹೆಸರಿಟ್ಟು ಅಲ್ಲಿ ಕೇಶವ ದೇವಾಲಯವನ್ನು ಕಟ್ಟಿಸಿ ಕೆಲವು ಭೂದತ್ತಿಯನ್ನು ನೀಡಿದನು. ಅಲ್ಲದೇ ಮತ್ತೊಬ್ಬ ಅಧಿಕಾರಿಯು ದೇವಾಲಯದಲ್ಲಿ ನಿತ್ಯದೀಪಕ್ಕಾಗಿ ಒಂದು ಎತ್ತಿನ ಗಾಣವನ್ನು ದಾನ ನೀಡಿದನು ಎಂದು ಹಾಸನ ಜಿಲ್ಲೆಯ ಅರಸೀಕೆರೆಯ ದಾಖಲೆಯು ತಿಳಿಸುತ್ತದೆ.[೧೦] ಕಳಿಂಗಘಟ್ಟ ಅಗ್ರಹಾರದ ಹೆಬ್ಬಾರುವ ದೇಶೀಯ ದಂಡನಾಯಕ ದೇವಪ್ಪ ಅದೇ ವರ್ಷ ಒಂದು ಬಾವಿಯನ್ನು ತೆಗೆಸಿ ದೇವರ ಪೂಜಾದಿಗಳಿಗಾಗಿ ಭೂಮಿಯನ್ನು ದಾನವಾಗಿ ನೀಡಿದನು.[೧೧] ರಾಣಿ ಸೋಮಲಾದೇವಿಯ ಅರಮನೆಯ ಸೇನಾಧಿಪತಿಯು ಕಟ್ಟಿಸಿದ ಚನ್ನಕೇಶವ ದೇವಾಲಯಕ್ಕೆ ೫೦೦ ಮಹಾಜನರು ಅನುದಾನ ಕೊಟ್ಟರೆಂದು ರಾಜನ ಕಾಲದ ಒಂದು ದಾಖಲೆಯು ವಿವರಣೆ ನೀಡುತ್ತದೆ. ಮಹಾಪ್ರಧಾನ ಹರಿಹರನು ಹೊಯ್ಸಳರ ಮಂತ್ರಿಯಾಗಿದ್ದು ಲಕ್ಷ್ಮೀಪತಿ ದೇವಾಲಯವನ್ನು ೧೧೭೩ರಲ್ಲಿ ಅಂದರೆ ದೊರೆ ವೀರ ಬಲ್ಲಾಳನ ಪಟ್ಟಾಭಿಷೇಕದ ಸಮಯದಲ್ಲಿ ಅರಸೀಕೆರೆಯ ಚನ್ನಕೇಶವ ದೇವರಿಗೆ ಭೂಮಿಗಳನ್ನು ದಾನ ಮಾಡಿದನೆಂದು ತಿಳಿಯುತ್ತದೆ.[೧೨]

ತಿರುಮಲೆ ಎಂಬ ಶ್ರೀವೈಷ್ಣವನು ಶ್ರೀವೈಷ್ಣವರ ಅನ್ನದಾನಕ್ಕಾಗಿ ಹಾಗೂ ನರಸಿಂಹ ದೇವರಿಗಾಗಿ ಹಲವು ದಾನಗಳನ್ನು ಮಾಡಿದನು. ಈ ಘಟನೆಗೆ ಒಂಬತ್ತುನಾಡಿನ ಪ್ರಜೆಗಳು ಹೊಣೆಗಾರರೆಂದು ಬೇಲೂರಿನಲ್ಲಿ ೧೧೭೩ರ ದಾಖಲೆಯು ತಿಳಿಸುತ್ತದೆ.[೧೩] ಪ್ರಸನ್ನ ಚನ್ನಕೇಶವ ದೇವಾಲಯವನ್ನು ಶಿವಮೊಗ್ಗ ಜಿಲ್ಲೆಯ ತರೀಕೆರೆಯ ಪ್ರಭು ಮತ್ತು ಅವನ ಮಡದಿಯು ೧೧೮೦ರಲ್ಲಿ ನಿರ್ಮಿಸಿ ಅಲ್ಲಿ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಸಿದರು ಮತ್ತು ೧೦೨ ಮಹಾ ಜನರು ನಾನಾ ಬಗೆಯ ಅನುದಾನಗಳನ್ನು ದೇವರಿಗೆ ನೀಡಿದರು. ದೊರೆಯು ಒಂದು ಸ್ಥಿರವಾದ ಹಣವನ್ನು ನಿಗದಿಯಾಗಿ ದೇವಾಲಯಕ್ಕೆ ದಾನವಿತ್ತನು.[೧೪] ವೈಷ್ಣವ ಆಚರಣೆಯಲ್ಲಿ ತಮಿಳು ಪ್ರಬಂಧಗಳು ಅಥವಾ ತಿರುವಾಯಿ ಮಾಳಿಯನ್ನು ವಿಷ್ಣು ದೇವಾಲಯಗಳಲ್ಲಿ ಸ್ತುತಿಸುವುದು ಒಂದು ರೂಢಿಯಾಗಿತ್ತು. ಉತ್ತಮನಂಬಿ ತಿರುನಾರಾಯಣದಾಸನೆಂಬುವವನು ಈ ರೀತಿಯ ಗಾಯಕನಾಗಿದ್ದನೆಂದು ೨ನೇ ವೀರಬಲ್ಲಾಳನ ಕಾಲದ ದಾಖಲೆಯು ತಿಳಿಸುತ್ತದೆ.[೧೫]

ಹೊಯ್ಸಳರ ಕಾಲದಲ್ಲಿ ಧಾರ್ಮಿಕ ಚಟುವಟಿಕೆಗಳು ಜನರಿಂದ ಉತ್ತೇಜಿತಗೊಳ್ಳುತ್ತಿದ್ದು ಹಲವಾರು ಬಾರಿ ಧಾರ್ಮಿಕ ಕಾರ್ಯಕ್ರಮಗಳು ಜನರಿಂದಲೇ ನಿರ್ವಹಿಸಲ್ಪಡುತ್ತಿದ್ದವು ಎಂಬುದನ್ನು ಕಾಲಚೂರಿ ಸೋವಿದೇವನ ಕಾಲದ ಒಂದು ದಾಖಲೆಯು ವಿವರಿಸುತ್ತದೆ. ಮೂಲ ದೇವರಾದ ಜಲಶಯನ ನಾರಾಯಣದೇವರಿಗೆ ಮೂಳಿಗರು ೮ ಹಿಟ್ಟುಗಳು ಪಂಚಮ ಮಠಸ್ಥಾನ ೬೦ ನಿವಾಸಿಗಳು, ಎಲ್ಲಾ ಬಣಜುಗಳು ಮತ್ತವರ ವರ್ಗದವರು ಜಮೀನು, ತೋಟ, ಗಾಣ ಇತ್ಯಾದಿಗಳನ್ನು ನಾರಾಯಣದೇವರು ಮತ್ತು ೧೨ ನಾರಾಯಣ ದೇವರುಗಳ ಮಧ್ಯೆ ದಾನ ಮಾಡಿದರು. ಈ ದಾನವನ್ನು ರಾಜನ ಇಚ್ಛೆಯಂತೆ ಐದುಜನ ಮಂತ್ರಿಗಳ ಸಮ್ಮತಿಪಡೆದು ದಾನ ಮಾಡಿದರೆಂದು ತಿಳಿಯುತ್ತದೆ.[೧೬] ಅಮ್ಮಳೆಯಲ್ಲಿ ೨ನೇ ವೀರಬಲ್ಲಾಳ ಕೇಶವ ದೇವರನ್ನು ಪ್ರತಿಷ್ಠೆ ಮಾಡಿಸಿದ. ಹೊಯ್ಸಳ ೨ನೇ ವೀರ ಬಲ್ಲಾಳನು ಕಡೂರು ಜಿಲ್ಲೆಯ ನಲ್ಲೂರನ್ನು ಆ ದೇವರ ಪೂಜಾದಿ ಕಾರ್ಯಗಳಿಗಾಗಿ ದಾನ ಮಾಡಿದನು.[೧೭] ಟಿ. ನರಸೀಪುರದ ಒಂದು ಶಾಸನವು ಆಲಗೋಡು ಗ್ರಾಮದಲ್ಲಿ ಅಭಯವಲ್ಲಭ ದೇವರ ದೇವಾಲಯದಲ್ಲಿ (ವಿಷ್ಣು) ಸ್ವಲ್ಪ ಜಮೀನುಗಳನ್ನು ದಾನವಿತ್ತರೆಂದು ತಿಳಿಸುತ್ತದೆ.[೧೮]

ಎರಡನೆಯ ಬಲ್ಲಾಳನ ಕಾಲದಲ್ಲಿ ಹೊಯ್ಸಳ ರಾಜ್ಯದಲ್ಲಿ ಪರಿಪೂರ್ಣವಾದ ಧಾರ್ಮಿಕ ಸಾಮರಸ್ಯವಿತ್ತು. ಶ್ರೀವೈಷ್ಣವ ಪಂಥದ ಪ್ರಸಾರವು ಅಬಾಧಿತವಾಗಿ ಮುಂದುವರಿದಿತ್ತು. ತೊಣ್ಣೂರಿನ ಲಕ್ಷ್ಮೀನಾರಾಯಣ ದೇವಸ್ಥಾನದ ಮಂಟಪ ನಿರ್ಮಾಣಕ್ಕೆ ಈರಮ್ಮಪಿರಾನ್ ಉದಾರವಾಗಿ ದಾನ ನೀಡಿದ್ದನ್ನು ಶಾಸನವೊಂದು ತಿಳಿಸುವುದು. ಈ ಎರಡನೆಯ ಬಲ್ಲಾಳನು ಶೈವನಾಗಿದ್ದರೂ ಅನೇಕ ದಾನದತ್ತಿಗಳನ್ನು ಶ್ರೀವೈಷ್ಣವರಿಗೆ ನೀಡುವ ಮೂಲಕ ತನ್ನ ಔದಾರ್ಯ ಮೆರೆದಿದ್ದನ್ನು ಕಾಣಬಹುದು. ಕ್ರಿ.ಶ. ೧೧೭೫ರಲ್ಲಿ ಬೇಲೂರಿನ ಕೀರ್ತಿ ನಾರಾಯಣ ದೇವಸ್ಥಾನಕ್ಕಾಗಿ ಕೊಳವೊಂದನ್ನು ನಿರ್ಮಿಸಿದನು ಹಾಗೂ ಬೇಲೂರಿನ ವೀರನಾರಾಯಣ ದೇವರ ಸೇವೆಯಲ್ಲಿದ್ದ ಬ್ರಾಹ್ಮಣರ ಮತ್ತು ಗೋವುಗಳ ಬಳಕೆಗಾಗಿ ಕೊಟ್ಟಾರವೊಂದನ್ನು ನಿರ್ಮಿಸಿದನು. ಈತನು ಚನ್ನಕೇಶವ ದೇವಾಲಯದ ಅಭಿವೃದ್ಧಿಗಾಗಿ ದೇಣಿಗೆಗಳನ್ನು ನೀಡಿದನು.[೧೯]

ಎರಡನೆಯ ನರಸಿಂಹನ ಆಳ್ವಿಕೆಯಲ್ಲೂ ಶ್ರೀವೈಷ್ಣವ ಪಂಥಕ್ಕೆ ರಾಜಾಶ್ರಯವು ನಿರಂತರ ಮುಂದುವರಿಯಿತು. ಈತನಿಗೆ ಶ್ರೀವೈಷ್ಣವ ಪಂಥದಲ್ಲಿ ಒಲವಿದ್ದುದು ಅವನ ಕಾಲದ ದಾಖಲೆಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೨೨೩ರ ಶಾಸನವೊಂದು

ಅವನು ವಿಷ್ಣು ಸಮುದ್ರದಲ್ಲಿ ಹಿಮಗಿರಿ ಲಕ್ಷ್ಮೀನಾರಾಯಣ ದೇವಸ್ಥಾನಕ್ಕೆ ದಾನ ನೀಡಿದ್ದನ್ನು ದಾಖಲಿಸುತ್ತದೆ.[೨೦] ಕ್ರಿಶ. ೧೨೨೪ರ ಶಾಸನವೊಂದರ ಪ್ರಕಾರ ಇಮ್ಮಡಿ ನರಸಿಂಹನ ಸಾಮಂತ ಕಚ್ಚಿದೇವನು ಬೇಲೂರಿನಲ್ಲಿ ಸಿಂಧೇಶ್ವರ ಲಕ್ಷ್ಮೀನಾರಾಯಣ ಮತ್ತು ಗೋಪಾಲ ದೇವರುಗಳನ್ನು ಸಂಸ್ಥಾಪಿಸಿ ಅವುಗಳಿಗೆ ದಾನ ನೀಡಿದನೆಂದು ತಿಳಿಸುತ್ತದೆ.[೨೧]

ಹಾಸನ ಜಿಲ್ಲೆಯ ಹುಲ್ಲೆಯ ಕೆರೆಯ ಚೆನ್ನಕೇಶವ ದೇವರಿಗೆ ಏಕಾದಶಿ ದಿನ ಹಸಿರು ದೀಪಕ್ಕಾಗಿ ಮತ್ತು ಹೋಮಕ್ಕಾಗಿ ಹೆಗ್ಗಡೆ ಚನ್ನನು ಮೂಲಧನವನ್ನು ಸ್ಥಾಪಿಸಿದನು.[೨೨] ಧಾರವಾಡ ಜಿಲ್ಲೆಯ ಹೊನ್ನಟಿಯ ಕೇಶವ ದೇವಾಲಯಕ್ಕೆ ಹೊಯ್ಸಳ ಸೇನಾಧಿಪತಿ ದೇವಣ್ಣನು ಒಂದು ಎಣ್ಣೆ ಗಾಣವನ್ನು, ಒಂದು ಮನೆಯ ನಿವೇಶನವನ್ನು ದಾನವಾಗಿ ನೀಡಿದನೆಂದು ತಿಳಿಯುತ್ತದೆ.[೨೩] ಬೇಲೂರಿನ ವಿಜಯನಾರಾಯಣ ದೇವಾಲಯದ ಆವರಣದಲ್ಲಿ ವೀರಬಲ್ಲಾಳನು ಒಂದು ಕೊಳವನ್ನೂ, ಮಂಟಪವನ್ನೂ, ಪ್ರಾಕಾರವನ್ನೂ, ಅಡುಗೆ ಮನೆಯನ್ನೂ, ಒಂದು ಕಿಟಕಿಯನ್ನೂ, ಭದ್ರವಾದ ಬಾಗಿಲುವಾಡಗಳನ್ನೂ, ನಿಲುವನ್ನು ನಿರ್ಮಿಸಿದನೆಂದು ತಿಳಿಯುತ್ತದೆ.[೨೪]

ಮೂರನೆಯ ಬಲ್ಲಾಳನೂ ಕೂಡ ಶ್ರೀವೈಷ್ಣವ ದೇವಾಲಯಗಳಿಗೆ ಅನೇಕ ದಾನದತ್ತಿಗಳನ್ನು ನೀಡಿದನು. ಕ್ರಿಶ. ೧೩೧೦ರ ಶಾಸನವೊಂದು ಸ್ವಸ್ತಿಪುರದ ಇಮ್ಮಡಿರಾವುತ ರಾಯನು ತೆರಕಣಾಂಬಿಯ ಶ್ರೀವೈಷ್ಣವರಿಗೆ ಗ್ರಾಮವೊಂದನ್ನು ಉಂಬಳಿಯಾಗಿ ನೀಡಿದ್ದರ ಬಗೆಗೆ ತಿಳಿಸುತ್ತದೆ. ಕ್ರಿಶ. ೧೩೧೨ರ ಶಾಸನವೊಂದು ಮಾಧವ ಡಣ್ಣಾಯಕನು ಮೇಲುಕೋಟೆಯ ಕಲ್ಲು ಮಂಟಪವೊಂದಕ್ಕೆ ದೇಣಿಗೆ ನೀಡಿದ್ದನ್ನು ಹೇಳುತ್ತದೆ. ಮೂರನೆಯ ಬಲ್ಲಾಳನ ಆಳ್ವಿಕೆಯ ಮತ್ತೊಂದು ಶಾಸನದಲ್ಲಿ ನಾಗಮಂಗಲದ ವ್ಯಕ್ತಿಯೊಬ್ಬನು ಮೇಲುಕೋಟೆಯ ಶ್ರೀನಾರಾಯಣ ದೇವಾಲಯಕ್ಕೆ ದೇಣಿಗೆ ಕೊಟ್ಟ ಬಗ್ಗೆ ತಿಳಿಸುತ್ತದೆ.[೨೫] ವೈಷ್ಣವ ಧರ್ಮದ ಇತಿಹಾಸದಲ್ಲಿ ೧೩ನೇ ಶತಮಾನ ಬಹಳ ಮಹತ್ವವಾದದ್ದು. ಏಕೆಂದರೆ ಈ ಶತಮಾನದಲ್ಲಿ ವೈಷ್ಣವ ಧರ್ಮದ ಪೋಷಣೆ ಮತ್ತಷ್ಟು ಮುಂದುವರಿಯಿತು. ವಿಷ್ಣು ದೇವಾಲಯಗಳ ಆಡಳಿತ ವ್ಯವಸ್ಥೆ ಸಂರಕ್ಷಣೆ, ಪೂಜಾದಿಗಳಿಗಾಗಿ ಹಲವಾರು ದಾನದತ್ತಿಗಳನ್ನು ನೀಡಲಾಯಿತೆಂದು ಈ ಕಾಲದ ಅನೇಕ ದಾಖಲೆಗಳು ವಿವರಣೆ ನೀಡುತ್ತವೆ.

ಹೊಯ್ಸಳದೊರೆ ವೀರಬಲ್ಲಾಳನು ಪ್ರಕಾಂಡ ಪಂಡಿತನಾಗಿದ್ದ. ಅಚಲ ಪ್ರಕಾಶನೆಂಬ ಅದ್ವೈತ ಸನ್ಯಾಸಿಯನ್ನು ಪ್ರಶಂಸಿಸಿ, ಗೌರವಿಸಿ, ಆ ವ್ಯಕ್ತಿಗೆ ರಾಜನೇ

ಅಲ್ಲದೇ ಹಲವು ಮಹಾ ಜನರು ಕೆಲವು ಹಿಸ್ಸೆಗಳನ್ನೂ, ಅಧಿಕಾರಿಗಳು ಕೆಲವು ವರಮಾನಗಳನ್ನೂ ಮತ್ತು ಶ್ರೀಕರಣರು ಕೆಲವು ವರಮಾನಗಳನ್ನೂ ಅನುದಾನ ಮಾಡಿದ ವಿಷಯದ ವಿವರಣೆಯನ್ನು ಹಾಸನ ಜಿಲ್ಲೆಯ ಶಾಂತಿ ಗ್ರಾಮದಲ್ಲಿ ದೊರೆತಿರುವ ಒಂದು ದಾಖಲೆಯು ತಿಳಿಸುತ್ತದೆ.[೨೬] ಹೊಯ್ಸಳ ವೀರಬಲ್ಲಾಳನ ರಾಣಿ ಪದ್ಮಲ ಮಹಾದೇವಿ ಅವನ ಪುತ್ರರಾದ ನರಸಿಂಹ ಮತ್ತು ಸೇನಾಧಿಪತಿ ದೇವಣ ಮತ್ತು ಇತರರು ನಾರಾಯಣ ದೇವರಿಗೆ ೧೨೧೦ರಲ್ಲಿ ದಾನ ಮಾಡಿದರೆಂದು ತಿಳಿಯುತ್ತದೆ.[೨೭] ಪದ್ಮನಾರಾಯಣ ದೇವರ ಎದುರಿನಲ್ಲಿ ಅದೇ ವರ್ಷ ರಾಜನ ಪೋಷಾಕು ಮುಖ್ಯಾಧಿಕಾರಿಯು ಒಂದು ಕೊಳವನ್ನು ನಿರ್ಮಿಸಿ ಕೆಲವು ಭೂದತ್ತಿಗಳನ್ನು ನೀಡಿದನೆಂದು ತಿಳಿಯುತ್ತದೆ.[೨೮]

ಹೊಯ್ಸಳರ ಕಾಲದಲ್ಲಿ ರಾಜಮನೆತನದವರೇ ಅಲ್ಲದೇ ಹಲವು ಸಾಮಾನ್ಯ ವರ್ಗದವರು ಸಹಾ ಹಲವಾರು ರೀತಿಯಲ್ಲಿ ವೈಷ್ಣವ ಧರ್ಮದ ಪೋಷಣೆಗೆ ನೆರವಾಗಿದ್ದಾರೆ. ಅವರಲ್ಲಿ ಬಳ್ಳಾರಿಜಿಲ್ಲೆಯ ಮಗೋಲದ ಕೆಲವು ವ್ಯಕ್ತಿಗಳು ೧೨೧೫ರಲ್ಲಿ ಆ ಗ್ರಾಮದಲ್ಲಿ ಗೋಪಾಲ ದೇವರ ಗುಡಿಯನ್ನು ಕಟ್ಟಿಸಿದಲ್ಲದೇ ಹಲವು ರಾಜಪ್ರತಿನಿಧಿಗಳೊಡನೆ ಭೂದತ್ತಿಯನ್ನು ನೀಡಿದರು. ಮನೆಗಳನ್ನೂ ನೀಡಿದಲ್ಲದೆ ಒಬ್ಬ ವ್ಯಕ್ತಿ ದೇವಾಲಯದ ಪ್ರಾಂಗಣದ ಹೂದೋಟಾಭಿವೃದ್ಧಿಗಾಗಿ ಸ್ವಲ್ಪ ಧನಸಹಾಯ ಮಾಡಿದನೆಂದು ತಿಳಿಯುತ್ತದೆ.[೨೯] ಪ್ರಸನ್ನಮಾಧವ ದೇವಾಲಯವನ್ನು ಹೊಯ್ಸಳ ಚಕ್ರವರ್ತಿಯ ಪತ್ನಿ ಬೈಚಲಾ ಮಹಾದೇವಿಯು ೧೨೧೮ರಲ್ಲಿ ಕಟ್ಟಿಸಿ ಅಲ್ಲಿಯ ಪೂಜಾ ಕೈಂಕರ್ಯಗಳಿಗೆ ಜಮೀನುಗಳನ್ನು ದಾನ ಮಾಡಿದಳೆಂದು ಒಂದು ಶಾಸನವು ತಿಳಿಸುತ್ತದೆ.[೩೦] ಮೇಲುಕೋಟೆಯ ತಿರುನಾರಾಯಣ ದೇವರಿಗೆ ಹೊಯ್ಸಳ ಸೇನಾಧಿಕಾರಿಗಳಿಂದ ಮಾದಪ್ಪ ಮತ್ತು ಕೇತಪ್ಪ ಎಂಬಿಬ್ಬರು ಭತ್ತದ ಗದ್ದೆಗಳನ್ನು ದಾನ ಮಾಡಿದರು.[೩೧]

ಹೊಯ್ಸಳರ ಕಾಲದಲ್ಲಿ ನಾನಾ ವರ್ಗಗಳ ಜನರು ಹಲವಾರು ಧಾರ್ಮಿಕ ಚಟುವಟಿಕೆಗಳಲ್ಲಿ ಸಹಕರಿಸುತ್ತಿದ್ದದ್ದು ಹಲವಾರು ದಾಖಲೆಗಳಿಂದ ತಿಳಿದುಬರುತ್ತದೆ. ಅದೇ ರೀತಿ ಹೊಯ್ಸಳ ಎರಡನೆಯ ನರಸಿಂಹನ ಆಳ್ವಿಕೆಯ ಕಾಲದ ಒಂದು ದಾಖಲೆಯು ಇದರ ಬಗ್ಗೆ ಸ್ವಲ್ಪಮಟ್ಟಿನ ವಿವರಣೆಯನ್ನು ನೀಡುತ್ತದೆ. ಬೇಲೂರಿನಲ್ಲಿ ದೋರಪನೆಂಬುವನು ಗೋಪಾಲ ದೇವರನ್ನು ಪ್ರತಿಷ್ಠಾಪಿಸಿದರು. ಅದಕ್ಕೆ ಕೆಲವು ಗೌಡರು ಭೂಮಿಯನ್ನು ದಾನವಾಗಿ ನೀಡಿದರು. ಸ್ಥಳೀಯ ಕೆಲವು ಸುಂಕಾಧಿಕಾರಿಗಳು ವಣಿಕರು, ವರ್ತಕರು ಇರವಾಣಿ ಉತ್ಸವಕ್ಕಾಗಿ ಸ್ವಲ್ಪ ಧನ ಸಹಾಯವನ್ನು ಮಾಡಿದರು.

ಅಲ್ಲದೇ ಸ್ಥಳೀಯವಾಗಿ ಅಲ್ಲ ನೆಲೆಯೂರಿದ್ದ ಹಲವು ಶ್ರೀವೈಷ್ಣವರೂ, ಮಹಾಜನರೂ ತಮ್ಮ ಮನೆಗಳಲ್ಲಿ ನಡೆಯುವ ಯಾವೊಂದು ಶುಭಕಾರ್ಯದಲ್ಲೂ ಒಂದು ಹಾಗವನ್ನು ಆ ದೇವರಿಗೆ ದಾನ ಮಾಡುವುದಾಗಿ ಒಪ್ಪಿಕೊಂಡಿದ್ದರು.[೩೨] ಪೋಳಾಲ್ಪದೇವನೆಂಬ ದಂಡನಾಯಕನಿಗೆ ವೈಷ್ಣವ ಚಕ್ರವರ್ತಿ ಎಂಬ ಬಿರುದಿದ್ದು ಇವನು ಹರಿಹರ ದೇವರಿಗೆ ಒಂದು ದೇವಸ್ಥಾನವನ್ನು ಕಟ್ಟಿಸಿ ಅಲ್ಲಿಯ ೧೦೪ ಬ್ರಾಹ್ಮಣ ಕುಟುಂಬಗಳ ನಿರ್ವಹಣೆಗಾಗಿ ಬನವಳ್ಳಿಯನ್ನು ಅನುದಾನವಾಗಿ ನೀಡಿದನು. ಅಲ್ಲದೇ ಲಕ್ಷ್ಮೀನಾರಾಯಣ ದೇವಾಲಯವನ್ನು ನಿರ್ಮಿಸಿ ಅದರ ಜೀರ್ಣೋದ್ಧಾರಕ್ಕಾಗಿ ಕೆಲವು ಹಿಸ್ಸೆಗಳನ್ನು ಅನುದಾನವಿತ್ತನು.[೩೩]

ಮಾರೆಯ ನಾಯಕನು ಗೋಪಾಲ ದೇವರನ್ನು ಪ್ರತಿಷ್ಠಾಪಿಸಿ ನರಸಿಂಹನಿಗೆ ದಾನ ಮಾಡಿದನು. ಅಲ್ಲದೇ ಇತರರು ಯೋಗೇಂದ್ರ ನರಸಿಂಹಸ್ವಾಮಿಯ ಪಾದ ಪೂಜಿಸಿ ನಾಯಕನಿಗೆ ಪುಣ್ಯ ಪ್ರಾಪ್ತಿಯಾಗಲಿ ಎಂದು ಬಯಸಿದರೆಂದು ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಒಂದು ದಾಖಲೆಯು ಇದರ ಬಗ್ಗೆ ಮಾಹಿತಿಯನ್ನು ನೀಡುತ್ತದೆ.[೩೪] ಬ್ರಾಹ್ಮಣರು ವೈಷ್ಣವ ಧರ್ಮಕ್ಕೆ ತಮ್ಮದೇ ಆದ ಕಾಣಿಕೆಯನ್ನು ನೀಡಿದ್ದಾರೆ. ಚನ್ನಕೇಶವ, ಲಕ್ಷ್ಮೀನರಸಿಂಹ ಮತ್ತು ಗೋಪಾಲದೇವರ ಪೂಜಾದಿನಗಳಿಗಾಗಿ ಅಲ್ಲದೇ ದೇವಾಲಯಗಳ ಸ್ವಚ್ಛತೆ ಮತ್ತು ಸಂರಕ್ಷಣೆಗಾಗಿ ಭೂದತ್ತಿಗಳನ್ನು ಬ್ರಾಹ್ಮಣರು ಮಾಡಿದರೆಂದು ಅರಸೀಕೆರೆ ಅಥವಾ ಸರ್ವಜ್ಞ ಪುರದ ಒಂದು ದಾಖಲೆಯು ತಿಳಿಸುತ್ತದೆ.[೩೫] ತೊಣ್ಣೂರಿನಲ್ಲಿ ಯೋಗಾನರಸಿಂಹ ಲಕ್ಷ್ಮೀನಾರಾಯಣ ಮತ್ತು ಕೃಷ್ಣ ಎಂಬ ಮೂರು ಶ್ರೀವೈಷ್ಣವ ದೇವಾಲಯಗಳಿವೆ. ಕೃಷ್ಣ ದೇವಾಲಯದ ಕಾಲವನ್ನು ಅಲ್ಲಿ ದೊರೆತಿರುವ ಒಂದು ಶಾಸನದಿಂದ ನಿರ್ಧರಿಸಬಹುದಾಗಿದೆ. ಈ ದೇವಾಲಯದ ಗರ್ಭಗೃಹದ ತಳಪಾಯದಲ್ಲಿ ಹೊಯ್ಸಳರ ಅರಸನಾದ ಒಂದನೆಯ ನರಸಿಂಹನ ಶಾಸನವೊಂದಿದೆ. ಈ ಶಾಸನ ಕನ್ನಡದಲ್ಲಿದೆ. ಇದರ ಪ್ರಕಾರ ಕ್ರಿ.ಶ. ೧೧೫೭ರಲ್ಲಿ ಕಾರಿಕುಡಿಯ ಕೂತ್ತಾಣ್ಡೆ ದಂಡನಾಯಕನು ದೇವಾಲಯವನ್ನು ಕಟ್ಟಿಸಿ ವೀಳ್ಳುರುನ್ದ ಪೆರುಮಾಳ್ ಎಂಬ ದೇವರನ್ನು ಲಕ್ಷ್ಮೀ ಹಾಗೂ ಭೂದೇವಿಯರನ್ನೂ ಪ್ರತಿಷ್ಠಾಪಿಸಿದನೆಂದು ಅದರಲ್ಲಿ ಸ್ಪಷ್ಟವಾಗಿ ಹೇಳಿದೆ.

ತೊಣ್ಣೂರಿನಲ್ಲಿ ದೊರೆತಿರುವ ಶಾಸನಗಳು ಶ್ರೀರಾಮಾನುಜರ ಶಿಷ್ಯರು ದೇವಾಲಯಗಳನ್ನು ನಿರ್ಮಾಣ ಮಾಡುವುದು ಅವುಗಳ ಪೂಜಾ ವಿಧಿಗಳಲ್ಲಿ ಹೊಸ ಕೈಂಕರ್ಯಗಳನ್ನು ಸೇರಿಸುವುದು ಇತರೇ ಪೂಜಾ ವಿಧಿಗಳನ್ನು ಸಹ

ಕ್ರಮಬದ್ಧಗೊಳಿಸುವುದು ಇವೇ ಮುಂತಾದ ಚಟುವಟಿಕೆಗಳ ಮೂಲಕ ಶ್ರೀವೈಷ್ಣವ ಧರ್ಮದ ಪ್ರಚಾರವನ್ನು ಮಾಡಿದುದರ ಬಗ್ಗೆ ವಿವರಿಸುತ್ತದೆ.

ಬ್ರಾಹ್ಮಣ ವರ್ಗದವರು ದೊರೆಯಿಂದ ಹಲವಾರು ದಾನದತ್ತಿಗಳನ್ನು ಪಡೆಯುತ್ತಿದ್ದರು. ಅವರು ದೊರೆಯಿಂದ ಪಡೆದ ಭೂದತ್ತಿಯನ್ನು ಹಲವಾರು ದೇವಾಲಯಗಳಿಗೆ ಹಾಗೂ ದೇವಾಲಯದ ನಿರ್ಮಾಣ ಕಾರ್ಯಗಳಿಗೆ ವಿನಿಯೋಗಿಸಿರುವುದು ಇತಿಹಾಸದಲ್ಲಿ ನಮೂದಿತವಾಗಿರುವುದು ತಿಳಿದುಬರುತ್ತದೆ. ಬ್ರಾಹ್ಮಣರು ರಾಜನಿಂದ ಭೂದತ್ತಿಯನ್ನು ಪಡೆದು ಲಕ್ಷ್ಮೀನರಸಿಂಹ ದೇವಾಲಯವನ್ನು ನಿರ್ಮಿಸಿದರು ಮತ್ತು ಆ ಜಮೀನನ್ನು ದೇವರ ಆರಾಧನಾದಿಗಳಿಗಾಗಿ ಅನುದಾನವಿತ್ತರು. ಇತರ ಅಧಿಕಾರ ವರ್ಗದವರು ದಾನ ನೀಡಿದರು. ಸೋಮನಾಥಪುರದ ಬ್ರಾಹ್ಮಣರು ಜಮೀನಿನ ದಾನ ಮಾಡಿದರು. ರಾಜನು ಗೊತ್ತಾದ ಕಂದಾಯವನ್ನು ಅಧಿಕಾರಿಗಳ ಕೋರಿಕೆಯಂತೆ ಅನುದಾನ ಮಾಡಿದನೆಂದು ಅರಸೀಕೆರೆಯ ಒಂದು ದಾಖಲೆಯು ತಿಳಿಸುತ್ತದೆ.[೩೬] ಗೋಪಾಲದಂಡನಾಯಕನು ಸ್ವಲ್ಪ ಮೊತ್ತದ ಹಣವನ್ನು ಪೊಗದಿಯಾಗಿಟ್ಟು ಆ ಹಣದಿಂದ ನರಸಿಂಹ ದೇವರ ಉತ್ಸವ ಹಾಗೂ ಪೂಜಾದಿಗಳು ನಡೆಯುವಂತೆ ಮಾಡಿದನೆಂದು ಹಾಸನ ಜಿಲ್ಲೆಯ ಬೇಲೂರಿನ ಒಂದು ದಾಖಲೆಯು ತಿಳಿಸುತ್ತದೆ.[೩೭] ಕೇಶವ ದೇವರ ಅಲಂಕಾರಕ್ಕಾಗಿ ರಕ್ಷಣಾ ಪಡೆಯ ಸೋಮೆಯ ದಂಡನಾಯಕನು ೧೦೦ ಗದ್ಯಾಣಗಳನ್ನು ದಾನ ಮಾಡಿದನು. ಅಲ್ಲದೇ ಈ ದೇವರ ಭಕ್ತಾದಿಗಳು ಸಹಾ ಹಲವಾರು ದಾನದತ್ತಿಗಳನ್ನು ನೀಡಿದರೆಂದು ತಿಳಿಯುತ್ತದೆ.[೩೮] ೧೮ ಶ್ರೀವೈಷ್ಣವರಿಗಾಗಿ ಒಂದು ಮಠವನ್ನು, ವಿಠಲದೇವಿ ಎಂಬಾಕೆಯು ಗೂಳಿಯ ಕೆರೆಯಲ್ಲಿ ಕೆಲವು ಮನೆಗಳನ್ನೂ ನಿರ್ಮಿಸಿದಳು.[೩೯] ಅಲ್ಲದೇ ಶ್ರೀವೈಷ್ಣವರಿಗೆ ಮಾಧವ ದಂಡನಾಯಕನು ಒಂದು ಹಳ್ಳಿಯನ್ನು ದಾನಮಾಡಿ ಆ ಊರಿಗೆ ತನ್ನ ತಂದೆಯ ಜ್ಞಾಪಕಾರ್ಥವಾಗಿ ಪೆರುಮಾಳೆಪುರವೆಂದು ಹೆಸರಿಟ್ಟನು.[೪೦] ಮೂರನೆಯ ಹೊಯ್ಸಳ ವೀರ ಬಲ್ಲಾಳನ ಸಾಮಂತನೂ ಹಾಗೂ ಮಂತ್ರಿಯೂ ಆಗಿದ್ದ ಒಬ್ಬ ಶ್ರದ್ಧಾವಂತ ವೈಷ್ಣವನೂ ಆಗಿದ್ದ ಒಬ್ಬ ವ್ಯಕ್ತಿ ಮೇಲುಕೋಟೆಯ ನಾರಾಯಣ ದೇವಾಲಯದ ಶಿಲಾಮಂಟಪದ ದುರಸ್ತಿಗಾಗಿ ಸ್ವಲ್ಪ ಹಣವನ್ನು ದಾನ ಮಾಡಿದನೆಂದು ಒಂದು ದಾಖಲೆಯು ತಿಳಿಸುತ್ತದೆ.[೪೧]

ಹೆಡತಲೆಯ ಕೇಶವನಾಥ ದೇವರ ಹೂತೋಟದ ಸ್ವಲ್ಪ ಭಾಗವನ್ನು ಸಿಂದಿಶೆಟ್ಟಿ ಎಂಬುವನು ಅಲ್ಲಿಯ ಶ್ರೀ ವೈಷ್ಣವ ದೇವಾಲಯದಿಂದ ಕೊಂಡು

ಕೊಂಡು ಅದನ್ನು ಗದ್ದೆಯನ್ನಾಗಿ ಪರಿವರ್ತಿಸಿ ಆನಂತರ ದೇವರ ನೈವೇದ್ಯಾದಿಗಳಿಗಾಗಿ ಅರ್ಪಿಸಿದನೆಂದು ಒಂದು ದಾಖಲೆಯು ವಿವರಿಸುತ್ತದೆ.[೪೨] ಎಲ್ಲಾ ಧಾರ್ಮಿಕ ಪಂಥಗಳನ್ನೂ ಪ್ರೋತ್ಸಾಹಿಸುವ ನೀತಿಯನ್ನು ವಿಷ್ಣುವರ್ಧನನ ನಂತರದ ಆಳರಸರೂ ಅನುಸರಿಸಿದರು. ಈತನ ಪುತ್ರ ಮತ್ತು ರಾಜ ಮೊದಲನೆಯ ನರಸಿಂಹ ಉತ್ತರದಿಂದ ಹಿಂತಿರುಗುವಾಗ ಶ್ರವಣ ಬೆಳಗೊಳದ ಗೋಮ್ಮಟನ ದರ್ಶನಕ್ಕೆ ಹೋಗುವನು. ಈತನನ್ನು ನಾಲ್ಕು ಧಾರ್ಮಿಕ ಪಂಥಗಳ ಸಂರಕ್ಷಕನೆಂದು ವರ್ಣಿಸಲಾಗಿದೆ. ಆದರವನು ಶ್ರೀವೈಷ್ಣವ ಪಂಥದೆಡೆಗೆ ವಿಶೇಷವಾದ ಒಲವು ಆಕರ್ಷಣೆ ಹೊಂದಿದ್ದನು. ಕ್ರಿ.ಶ. ೧೧೬೯ರಲ್ಲಿ ಮೊದಲ ನರಸಿಂಹನು ಬೇಲೂರಿನ ವೀರನಾರಾಯಣ ದೇವರ ದರ್ಶನಕ್ಕೆ ಹೋದನು. ಅಂದು ಅವನು ಪವಿತ್ರಾರೋಪರ್ಣ ಪೂಜೆಯನ್ನು (ಅಂದರೆ ದೇವರ ಕುತ್ತಿಗೆಗೆ ರೇಷ್ಮೆ ಮಾಲೆ ಹಾಕುವುದು) ನೆರವೇರಿಸಿದನು. ಈತನು ಕ್ರಿ.ಶ. ೧೧೬೨ರಲ್ಲಿ ತೊಗರವಾಡಿ ಮತ್ತು ಭುವನಹಳ್ಳಿ ಎಂಬ ಎರಡು ಹಳ್ಳಿಗಳನ್ನು ಒಟ್ಟುಗೂಡಿಸಿ ಧರ್ಮಪುರವೆಂಬ ಅಗ್ರಹಾರವನ್ನು ಸ್ಥಾಪಿಸಿದನು ಮತ್ತು ಆ ಕೇಶವ ದೇವಸ್ಥಾನದ ನಿರ್ವಹಣೆಗಾಗಿ ತನ್ನ ಮಂತ್ರಿಗಳ ಸಮ್ಮುಖದಲ್ಲೇ ದಾನದತ್ತಿಗಳನ್ನು ನೀಡಿದನು.[೪೩] ಹೊಯ್ಸಳ ರಾಜರು ಮೇಲುಕೋಟೆ, ಬೇಲೂರು ಮತ್ತಿತರ ಸ್ಥಳಗಳಲ್ಲಿ ದೇವಾಲಯಗಳಲ್ಲದೆ ತೊಣ್ಣೂರಿನಲ್ಲಿ ದೊಡ್ಡಕೆರೆ ತಿರುಮಲಸಾಗರವೆಂಬುದು ಇಂದಿಗೂ ಆಚಾರ್ಯ ರಾಮಾನುಜರು ಹೊಯ್ಸಳ ರಾಜ್ಯಕ್ಕೆ ಅನುಗ್ರಹಿಸಿದ ಒಂದು ಸ್ಮಾರಕವಾಗಿದೆ. ಆ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಹೊಯ್ಸಳ ರಾಜ್ಯ ವೈಷ್ಣವ ಧರ್ಮದ ಒಂದು ಪ್ರಮುಖ ಕೇಂದ್ರವಾಗಿತ್ತು. ಕಂಚಿ, ಶ್ರೀರಂಗಂ ಮತ್ತು ತಿರುಪತಿ ಉದಾರ ದಾನದತ್ತಿ ಹಾಗೂ ವೈಷ್ಣವ ಭಕ್ತರಿಂದ ಕೂಡಿದ್ದವು. ಹೊಯ್ಸಳ ಅರಸನಾದ ೨ನೇ ನರಸಿಂಹ, ಸೋಮೇಶ್ವರ ಮತ್ತು ರಾಮನಾಥರು ಶ್ರೀರಂಗ ದೇವಾಲಯಕ್ಕೆ ದಾನ ಮಾಡಿದ್ದರೆಂದು ತಿಳಿಯುತ್ತದೆ. ಶ್ರೀರಂಗದ ಒಂದು ದಾಖಲೆಯು ಕೃಷ್ಣದೇವಾಲಯದ ಒಂದು ಜಮೀನನ್ನು ಒಬ್ಬ ವ್ಯಕ್ತಿಯು ರಂಗನಾಥಸ್ವಾಮಿಯ ಸುಪ್ರಭಾತ ಸೇವೆಗಾಗಿ ದಾನಮಾಡಿ ಅದನ್ನು ಹೊಯ್ಸಳರಾಣಿ ಉಮಾದೇವಿಯು ಸಮರ್ಪಣೆ ಮಾಡಿದಳೆಂದು ತಿಳಿಸುತ್ತದೆ.[೪೪] ವೈಕುಂಠದಾಸರೆಂಬುವ ಮತ್ತೊಬ್ಬರು ಶ್ರೀರಂಗದಲ್ಲಿ ರಂಗನಾಥ ದೇವಾಲಯಕ್ಕೆ ದೊರೆ ರಾಮನಾಥನ ಆಳ್ವಿಕೆಯ ಕಾಲದಲ್ಲಿ ಕೆಲವು ಭೂಮಿಯನ್ನು ನೀಡಿ ಅದನ್ನು ಪುಷ್ಪಗಳನ್ನು ಬೆಳೆದು ಹೂಮಾಲೆಗಳನ್ನು ದೇವಾಲಯಕ್ಕೆ ಒದಗಿಸಲು ಹಾಗೂ ರಾಣಿ ಕಮಲಾದೇವಿ ಮತ್ತು ಅವಳ ಇಬ್ಬರು ಪುತ್ರಿಯರಿಗೆ ಪುಣ್ಯ ಲಭಿಸಲೆಂದು ನೀಡಿದರೆಂದು ಶ್ರೀರಂಗದ ಒಂದು ದಾಖಲೆಯು ಸ್ಪಷ್ಟನೆ ನೀಡುತ್ತದೆ.[೪೫]

ರಾಮಾನುಜರ ಶಿಷ್ಯರೂ ಹಾಗೂ ಶ್ರೀರಂಗಂ ದೇವಾಲಯದ ಪುರೋಹಿತರೂ ಆಗಿದ್ದ ಕೂರತ್ತಾಳ್ವಾರರವರಿಗೆ ಗುಡ್ಡವಾಡಿ ಎಂಬ ಗ್ರಾಮವನ್ನು ದಾನ ಮಾಡಲಾಯಿತು. ಕೂರತ್ತಾಳ್ವಾರರಿಗೆ ಪೆರ್ರಿಯ ಭಟ್ಟಾರಕರಿಗೆ ಹಲವು ಪ್ರಭುಗಂಡರು ಮಾಡಿದರೆಂದು ತಿಳಿದುಬರುತ್ತದೆ.[೪೬]

ಹೊಯ್ಸಳರ ಕಾಲದಲ್ಲಿ ಒಂದು ಪ್ರಮುಖವಾದ ದತ್ತಿ ಎಂದರೆ ದೇವಾಲಯದಲ್ಲಿ ಮಹಾ ಪ್ರಧಾನಿ ಸಿಂಗಣ ದಂಡನಾಯಕನು ಸ್ಥಾಪಿಸಿದ ಒಂದು ಆಸ್ಪತ್ರೆ. ಮಂತ್ರಿಯ ಪ್ರಮುಖ ವೈದ್ಯ ಗರುಡವಾಹನ ಪಂಡಿತನು ಇದರ ಪ್ರಮುಖ ವೈದ್ಯನಾಗಿದ್ದ. ಲಾಲ್ಗುಡಿಯ ಸಮೀಪದಲ್ಲಿರುವ ಮುಮ್ಮಡಿ ಚೋಳಮಂಗಲಂ ಗ್ರಾಮವನ್ನು ಈ ವೈದ್ಯಶಾಲೆಯನ್ನು ನಡೆಸಲು ದಾನ ನೀಡಲಾಗಿತ್ತು. ಮಹಮದೀಯರ ಆಕ್ರಮಣದ ಕಾಲದಲ್ಲಿ ಈ ಆಸ್ಪತ್ರೆಗೆ ಧಕ್ಕೆ ಉಂಟಾಗಿತ್ತು. ಇದನ್ನು ೧೪೯೩ರಲ್ಲಿ ದುರಸ್ತಿಗೊಳಿಸಿ ಧನ್ವಂತರಿ ಮೂರ್ತಿಯನ್ನು ಸ್ಥಾಪಿಸಲಾಯಿತು.[೪೭]

ಶ್ರೀರಂಗಂ ದೇವಾಲಯವು ೫ ಪ್ರಾಕಾರಗಳಿಂದ ಕೂಡಿದ್ದು ವೇಣುಗೋಪಾಲ ಮೂರ್ತಿಯ ವಿಗ್ರಹವು ಐದು ಪ್ರಾಕಾರದಲ್ಲಿದೆ. ಅದು ಸುತ್ತಲೂ ಇರುವ ಶಿಲ್ಪಗಳು. ಶಿಲ್ಪಾಕೃತಿಗಳು ಹೊಯ್ಸಳರ ಸಾಂಸ್ಕೃತಿಕ ಮಟ್ಟವನ್ನು ಉನ್ನತಿಗೇರಿಸಿವೆ. ಹೊಯ್ಸಳರ ಲಾಂಛನದಿಂದ ಗಂಡಭೇರುಂಡವನ್ನು ಪೂರ್ವ ಚಿತ್ರ ಬೀದಿಯ ಮಧ್ಯೆ ಇರುವ ಗೋಪುರದ ಮೇಲೆ ಕೆತ್ತಿದ್ದಾರೆ. ಈ ರೀತಿಯಾದ ಕಲಾ ಶ್ರೀಮಂತಿಕೆಯಿಂದ ಹೊಯ್ಸಳ ರಾಜ್ಯ ಪ್ರಖ್ಯಾತವಾಗಿದೆ.

ಶ್ರೀ ರಾಮಾನುಜರು ತಿರುಪತಿಯನ್ನು ಒಂದು ಪ್ರಮುಖ ಶ್ರೀವೈಷ್ಣವ ಕೇಂದ್ರವನ್ನಾಗಿ ಮಾಡಿಕೊಂಡು ಆಗಾಗ್ಗೆ ತಿರುಪತಿಗೆ ಭೇಟಿ ನೀಡುತ್ತಿದ್ದರು. ತಿರುಮಲ ತಿರುಪತಿ ಬೆಟ್ಟದ ತಪ್ಪಲಿನಲ್ಲಿ ಒಂದು ಪಟ್ಟಣವನ್ನು ನಿರ್ಮಿಸಿ ಪೂಜಾಕೈಂಕರ್ಯಗಳು ಸುವ್ಯವಸ್ಥಿತವಾಗಿ ನಡೆಯುವಂತೆ ಮಾಡಿದರು. ಈ ಧರ್ಮಕಾರ್ಯಗಳಿಗೆ ಅವರಿಗೆ ಹೊಯ್ಸಳರ ಪ್ರಮುಖ ಅರಸರಾದ ವಿಷ್ಣುವರ್ಧನ ಮತ್ತು ೨ನೇ ವೀರಬಲ್ಲಾಳರು ನೆರವಾಗಿ ನಿಂತರು.

ಮಹಾಪ್ರಧಾನ ಸಿಂಗಯ ದಂಡನಾಯಕನು ೩ನೇ ವೀರಬಲ್ಲಾಳನ ಮಂತ್ರಿಯಾಗಿದ್ದು ಶ್ರೀವೈಷ್ಣವ ಧರ್ಮಕ್ಕೆ ಅಪಾರವಾದ ಉತ್ತೇಜನವನ್ನು ನೀಡಿದನು. ಇವನು ಶಿತಗರಗಂಡ ಬಿರುದಾಂಕಿತನಾಗಿದ್ದು ಜುಲೈ ಆಗಸ್ಟ್ ತಿಂಗಳಲ್ಲಿ ಒಂದು ಉತ್ಸವವು ನಡೆಯುವಂತೆ ವ್ಯವಸ್ಥೆ ಮಾಡಿ ತನ್ನ ಬಿರುದಾದ ಶಿತಗರಗಂಡ ಎಂಬ ಹೆಸರಿನಲ್ಲಿ ಅನ್ನದಾನವನ್ನು ಮತ್ತು ಅದೇ ಹೆಸರಿನಲ್ಲಿ ಅಂದರೆ ಶಿತಗರಗಂಡಮಠ

ಎಂಬ ಮಠ ಒಂದನ್ನು ಸ್ಥಾಪಿಸಿದ್ದಲ್ಲದೇ ಪ್ರತಿನಿತ್ಯ ೩೨ ವೈಷ್ಣವರಿಗೆ ಅನ್ನದಾನ ನಡೆಯುವಂತೆ ವ್ಯವಸ್ಥೆಮಾಡಿ ಬೆಟ್ಟದ ಮೇಲೆ ಒಂದು ಪುಷ್ಪವನ ಮತ್ತು ನೀರಿನ ಕೊಳವನ್ನು ನಿರ್ಮಿಸಿದನು. ಅಲ್ಲದೇ ಒಂದು ಗ್ರಾಮವನ್ನು ಇದಕ್ಕೆ ಸರ್ವಮಾನ್ಯ ಮಾಡಿದನು. ಪೊಂಗಲೂರು ಎಂಬ ಹಳ್ಳಿಗೆ ಸಿಂಗಾನಲ್ಲೂರು ಎಂದು ಪುನಃ ನಾಮಕರಣ ಮಾಡಿ ಇಷ್ಟೆಲ್ಲಾ ಕಾರ್ಯಗಳಿಗೆ ವಿನಿಯೋಗವಾದ ನಂತರ ಉಳಿದ ಹಣವನ್ನು ತಿರುಪತಿಯ ಸ್ಥಾನತ್ತೆರರು ತೀರ್ಮಾನಿಸುವ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ನಿಗದಿಗೊಳಿಸಿದರು.[೪೮] ವೀರಬಲ್ಲಾಳನು ೧೪ನೆಯ ಶತಮಾನದಲ್ಲಿ ತಿರುಪತಿಗೆ ತಲೆದೋರಿದ ಮುಸ್ಲಿಂ ದಾಳಿಯನ್ನು ತಪ್ಪಿಸಿ ಅದನ್ನು ಸಂರಕ್ಷಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಈ ದೃಷ್ಟಿಯಿಂದ ಅವನ ಸೇವೆ ಹೊಯ್ಸಳರ ಇತಿಹಾಸದಲ್ಲಿ ಅಮೋಘವಾದುದ್ದು ಎಂದು ಹೇಳಬಹುದು.[೪೯]

ಹೊಯ್ಸಳ ಸೇನಾಧಿಪತಿಗಳು ಹಾಗೂ ಅಧಿಕಾರಿಗಳಾದ ಗೋಪಗೋಪಯ, ಕೇಶವ, ಮಲ್ಲಯ್ಯ, ಮಾದಯ ಮತ್ತು ವಲ್ಲಯ ಮುಂತಾದವರು ಕಂಚಿಯ ವರದ ಸ್ವಾಮಿಗೆ ೧೨೧೭-೧೨೪೦ರ ಅವಧಿಯಲ್ಲಿ ಹಲವು ಗ್ರಾಮಗಳು, ಚಿನ್ನ, ಗೋವು, ಹೂವಿನತೋಟಗಳು ಹಾಗೂ ದೀಪಗಳು ಮುಂತಾದ ಅನೇಕ ದತ್ತಿಗಳನ್ನು ನೀಡಿದರು. ಶ್ರೀವೈಷ್ಣವಧರ್ಮ ಆಳರಸರು, ದಂಡನಾಯಕರು, ವರ್ತಕರು, ರಾಣಿಯರು ಹಾಗೂ ಜನಸಾಮಾನ್ಯರಿಂದಲೂ ಮನ್ನಣೆಯನ್ನು ಗಳಿಸಿ ಒಂದು ಪ್ರಬಲ ಧರ್ಮವಾಗಿ ಮಾರ್ಪಟ್ಟಿತು.

ಹೊಯ್ಸಳ ಯುಗದ ಕೊನೆಯ ದಿನಗಳವರೆಗೂ ವೈಷ್ಣವಧರ್ಮದ ಪ್ರಗತಿಯಲ್ಲಿ ಅಮಿತೋತ್ಸಾಹ ಪ್ರಕಟಗೊಂಡಿತ್ತು. ಅನ್ಯ ಧರ್ಮಗಳನ್ನು ತುಳಿದು ಇದನ್ನು ಸಾಧಿಸಲಿಲ್ಲ,[೫೦] ದಕ್ಷಿಣ ಭಾರತದಲ್ಲಿ ಇತರ ಎಲ್ಲಾ ರಾಜವಂಶಗಳಿಗಿಂತ ಹೊಯ್ಸಳರು ವೈಷ್ಣವ ಧಾರ್ಮಿಕ ಚಳುವಳಿಯ ಪ್ರಸಾರದಲ್ಲಿ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ.

ಅಡಿಟಿಪ್ಪಣಿಗಳು

1. E.C. III Sr. 64
2. MAR. 1912. para 78.1021
3. MAR 1908. para.70.1024
4. E.C III P+I Tn 129-1136
5. E.C. V CR . 199 . 1139
6. S.I.E. 1916. No. 521-1142

7. E.C. III Sr. 62.1155
8. E.C III Sr. 60. 1160
9. E.C. IV P+I Hn 137 . 1162
10. E.C. V SK . 172 . 1163
11. E.C. VII HL . 87 . 1163
12. E . C . V AK 71. 1173
13. E . C . V B125 . 1173
14. MAR . 1912 . p.42-1173
15. MAR . 1908 . 1175
16. 9 . E 40-40 . No. 117
17. E . C VI Kd 21.22 - 1178
18. MAR 1930. p. 198 -1188
19. Rice. B. L. Mysore inscriptions p. 267 ; Sheik Ali . B(ed) Hoysala Dynasty p.314
20. E . C IV Kd. 88
21. Sheik Ali. B. (Ed) Hoysala Dynasty - 315
22. E . C . V AK . 174 . 1194
23. S . G E. - 1934 . No. 93.1197
24. E . C . V B1 72 . 1200
25. Sheik Ali . B. (Ed) Hoysala Dynasty p . 315
26. MAR 1940. No. 1
27. E .C. II HL 13. 1210
28. E . C II HL 14 . 1210
29. S . I. E. 1914 No. 126
30. E . C . VI Kd - 129
31. MAR 1941 No. 9 1228
32. E . C. II Dg 25. 1224
33. E . C. XII TP . 12 . 1232
34. E . C. V AK 82 . 1234
35. E . C . V AK 123. 1237
36. E . C . V B1.161.1285
37. E . C . V B1 . 66 . 1298
38. E . C . V B1 . 67 . 1300
39. MAR 1913 . 1310
40. MAR 1907 . 1312
41. MAR 1911 . No. 31 . 1314
42. E . C. IV HS 137 ; Sheik Ali B (Ed) Hoysala Dynasty P. 314
43. S.9.E. i936 No. 69 - 1232
44. S.9.E. 1937 No. 62.1263
45. MAR 1931. p. 146. 1289
46. Venkataramaiah K . R . - Hoysalays in the Tamil Country p.67-68
47. T . T . D. Inscriptions 99.102
48. Venkataramaiah K . R . OP cit . 70
49. Derrett J. D . M . - The Hoysalas P . 64

೨. "ಡೊಂಕು ಬಾಲದ ನಾಯಕರೆ....!"

– *ಜೆ. ಲೋಹಿತ್*

ವೈಜ್ಞಾನಿಕವಾಗಿ ಹೇಳುವುದಾದರೆ ಪ್ರಾಣವುಳ್ಳವರೆಲ್ಲ ಪ್ರಾಣಿಗಳೇ. ಅಂದರೆ, ಮನುಷ್ಯನೂ ಒಂದು ಪ್ರಾಣಿಯೇ. ಆದರೆ ಇಲ್ಲಿ ಮನುಷ್ಯನಿಗೆ ದೇವರಿಂದ 'ಮಾತು' ಎನ್ನುವ ಒಂದು ಅಪರೂಪವಾದ ಹಾಗೂ ಅಪೂರ್ವವಾದ ವರ ಸಿಕ್ಕಿದೆ. ಆದ್ದರಿಂದ ಮನುಷ್ಯ ಇತರ ಪ್ರಾಣಿಗಳಿಗಿಂತ ತನ್ನ ಅಸಾಧಾರಣ ಮಾತುಗಾರಿಕೆಯಿಂದ, ಬುದ್ಧಿವಂತಿಕೆಯಿಂದ ಮೇಲ್ಮಟ್ಟದಲ್ಲಿದ್ದಾನೆ. ಆದರೆ ಒಂದು ವಿಷಯವಂತೂ ಸತ್ಯ. ಏನೆಂದರೆ, ಇಂತಹ ಬುದ್ಧಿವಂತನಾದ, ಮಾತುಗಾರನಾದ ಮಾನವನನ್ನು ಮಾತು ಬಾರದ ಪ್ರಾಣಿಪಕ್ಷಿಗಳು ತಮ್ಮ ವಿಭಿನ್ನ ಹಾಗೂ ವೈಶಿಷ್ಟ್ಯಪೂರ್ಣ ನಡವಳಿಕೆಗಳಿಂದ ತಮ್ಮತ್ತ ಸೆಳೆದುಕೊಳ್ಳುತ್ತಿರುವುದು.

ಹೀಗೆ ಪ್ರಾಣಿಗಳಿಗೂ ಮಾನವನಿಗೂ ಒಂದು ರೀತಿಯ ಅವಿನಾಭಾವ ಸಂಬಂಧವಿದೆ. ಈ ಸಂಬಂಧ ಇಂದು ನಿನ್ನೆಯದಲ್ಲ. ಶಿಲಾಯುಗದ ಕಾಲದಿಂದಲೂ ಇದೆ. ಈ ರೀತಿ ಮಾನವನ ಬದುಕಿನ ಎಲ್ಲಾ ಸ್ತರಗಳಲ್ಲಿಯೂ ಪ್ರಾಣಿಗಳ ಬದುಕು ಹಾಸು ಹೊಕ್ಕಾಗಿ ಬೆಸೆದುಕೊಂಡಿದೆ.

ಮನುಷ್ಯನಂತೆಯೇ ಪ್ರಾಣಿಗಳಲ್ಲಿಯೂ ಭಾವಕೋಶವಿದೆ. ಮಾನವ ನೊಡನಾಡಿಗಳಾಗಿ ಬೆಳೆದ ಪ್ರಾಣಿಗಳಲ್ಲಿ ವಾತ್ಸಲ್ಯವಿದೆ, ಪ್ರಾಮಾಣಿಕತೆಯಿದೆ, ಕೃತಜ್ಞತೆಯಿದೆ, ನೀತಿ ನಿಯತ್ತುಗಳಿವೆ. ಇಂತಹ ಪ್ರಾಣಿ–ಪಕ್ಷಿಗಳನ್ನು ಮಾನವನು ಸಾಕುವಿಕೆ, ಅವುಗಳ ನಿಷ್ಠೆ, ಆತ್ಮೀಯತೆ, ಸೇವಾಮನೋಭಾವಗಳ ಪರಿಚಯ ಪೌರಾಣಿಕ ಕಾಲದಿಂದಲೇ ಆಗಿರುವುದು ಗಮನಕ್ಕೆ ಬರುತ್ತದೆ. ಉದಾ: ನಾಯಿಯನ್ನೇ ತೆಗೆದುಕೊಳ್ಳೋಣ.

ಹಿಂದಿನ ಪುರಾಣ ಕಾವ್ಯಗಳಲ್ಲಿ ನಾಯಿಗಳು ಪ್ರಿಯತಮನ ಪ್ರೇಮಪತ್ರಗಳನ್ನು ರವಾನಿಸುವ ಅಥವಾ ವಿನಿಮಯ ಮಾಡಿಸುವ ಪ್ರೇಮದೂತರಾಗಿಯೂ ಕೆಲಸ ಮಾಡಿವೆ. ಇದನ್ನು ಹಿಂದಿನ ಕಾಲದ 'ಮೇಘದೂತ' ಮತ್ತು 'ಹಂಸದೂತ' ದಂತೆ 'ಶ್ವಾನದೂತ'ನೆಂದು ಕರೆಯಬಹುದೇನೋ!

ಮನುಷ್ಯನ ಜೊತೆ ಸಂಬಂಧವಿರುವ, ಅವನು ಪಳಗಿಸಿದ ಪ್ರಾಣಿಗಳಲ್ಲೆಲ್ಲಾ ನಾಯಿಗೇ ಅಗ್ರಸ್ಥಾನ ಸಲ್ಲುತ್ತದೆ ಎನ್ನಬಹುದು. ಏಕೆಂದರೆ ಇದು ಇತರ ಪ್ರಾಣಿಗಳಿಗಿಂತ ಅತ್ಯಂತ ಚುರುಕಾದ, ಬುದ್ಧಿಶಾಲಿಯಾದ, ಮುದ್ದಿಗೆ ಹೆಸರಾದ ಪ್ರಾಣಿಯಾಗಿದೆ. ಮನುಷ್ಯನೆಲ್ಲಿರುವನೋ ಅಲ್ಲಿ ನಾಯಿ ಜೊತೆಗಿರುವುದು ವಾಸ್ತವಾಂಶವಾಗಿದೆ. ಜನಪದದಲ್ಲಿ ಇದಕ್ಕೊಂದು ಕಥೆಯೇ ಇದೆ. ಅದೇನೆಂದರೆ,

"ನಾಯಿ ಮತ್ತು ಮನುಷ್ಯ ಆಯಸ್ಸನ್ನು ವಿನಿಮಯ ಮಾಡಿಕೊಂಡದ್ದು ಜನಪದ ಪ್ರಾಣಿ ಪುರಾಣದಲ್ಲಿ ಬರುತ್ತದೆ. ಮೊದಲಿಗೆ ನಾಯಿ ಬ್ರಹ್ಮನನ್ನು ಕಂಡು ತಾನು ಎಂಬತ್ತಕ್ಕಿಂತ ಹೆಚ್ಚು ವರ್ಷ ಬದುಕುವಂತೆ ವರ ಪಡೆಯಿತು. ಮನುಷ್ಯ ನಿಧಾನ ಮಾಡಿದ್ದರಿಂದ ೧೦ ರಿಂದ ೨೦ ವರ್ಷ ಬದುಕುವ ಅವಕಾಶವನ್ನು ಮಾತ್ರ ಪಡೆದ. ಕೊನೆಗೆ ಅವನು ನಾಯಿಗಳ ಜೊತೆಯಲ್ಲಿ ಸಂಧಾನ ಮಾಡಿಕೊಂಡು ಅವುಗಳಿಗಿದ್ದ ಅಧಿಕ ಆಯುಸ್ಸಿನ ಅವಕಾಶವನ್ನು ತಾನು ಪಡೆದುಕೊಂಡ. ಆತ ಮಾಡಿಕೊಂಡ ಕರಾರಿನಂತೆ ನಾಯಿಗೆ ಅನ್ನ ಹಾಕುವ ಜವಾಬ್ದಾರಿಗೆ ಆತ ಬದ್ಧನಾಗ ಬೇಕಾಯಿತು. ಹಾಗೆಯೇ ನಾಯಿಯಂತೆ ಆಗಾಗ ಹಲ್ಲುಗಿಂಜುವ ಸ್ವಭಾವವನ್ನೂ ತನ್ನಲ್ಲಿ ಉಳಿಸಿಕೊಂಡ." ಹೀಗಾಗಿ ನಾಯಿಗಳಿಗೂ ಮತ್ತು ಮನುಷ್ಯನಿಗೂ ಒಂದು ರೀತಿಯ ನಿಕಟ ಸಂಬಂಧ ಉಂಟಾಯಿತು.

ಹೀಗೆ ಆದಿಮಾನವನ ಕಾಲದಿಂದಲೂ ನಾಯಿ ಮನುಷ್ಯನ ನೆಚ್ಚಿನ ಸಂಗಾತಿಯಾಗಿ, ಒಡನಾಡಿಯಾಗಿ, ಕಷ್ಟಕಾಲಕ್ಕೊದಗುವ ಬಂಧುವಾಗಿ, ಕಾಡಿನಲ್ಲಿ ಮೃಗಗಳ ನೆಲೆ-ವಾಸಸ್ಥಾನಗಳನ್ನು ತೋರಿಸುವ ಬೇಹುಗಾರನಾಗಿ, ನೀರಿಗೆ ಬಿದ್ದವರನ್ನು ಮೇಲೆತ್ತುವ ರಕ್ಷಕನಾಗಿ, ನೆಚ್ಚಿನ ಬಂಟನಾಗಿ ಇರುವುದರ ಜೊತೆಗೆ ಕೃತಜ್ಞತೆಯಲ್ಲಿ ಮಾನವನಿಗಿಂತ ಮೇಲೆಂಬ ಖ್ಯಾತಿಯನ್ನೂ ಸಹಾ ಪಡೆದಿದೆ.

ನಾಯಿ ತನ್ನ ನಂಬಿಕೆ, ನಿಷ್ಠೆ, ನಿಯತ್ತುಗಳಿಂದ ತನ್ನನ್ನು ಅನ್ನವಿಟ್ಟು ಸಾಕಿದ ಒಡೆಯನಿಗೆ ಸದಾಕಾಲವೂ ತನ್ನ ಸೇವೆ ಸಲ್ಲಿಸುವುದರಿಂದ "ಪ್ರಾಮಾಣಿಕ ಸೇವಕ" – Dog is the Faithfull Servant of Man - ಎಂಬ ಬಿರುದನ್ನು ಪಡೆದುಕೊಂಡಿದೆ.

"ನಾಯಿಗಿರುವ ನಿಯತ್ತು ನರನಿಗಿಲ್ಲ" ಎನ್ನುವ ಮಾತನ್ನು ಸತ್ಯವಾಗಿಸಿದೆ. "ನಾಯಿನಿಷ್ಠೆ" ಎನ್ನುವ ಮಾತು ಪ್ರಚಲಿತವಾಗಿದೆ. – ಹೀಗೆ ನಿಷ್ಠೆ ನಿಯತ್ತುಗಳಿಗೆ ಮತ್ತೊಂದು ಹೆಸರೇ 'ನಾಯಿ' ಎಂದರೆ ತಪ್ಪಾಗಲಾರದು. ಇದು ತನ್ನ ಯಜಮಾನನ ಕಾಲುನೆಕ್ಕಿ ತನ್ನ ಪ್ರೀತಿಯನ್ನು ತೋರಿಸುತ್ತದೆ.

ನಾಯಿಯ ಸ್ವಾಮಿ ನಿಷ್ಠೆ – ಸ್ವಾಮಿ ಭಕ್ತಿ – ಅಸಾಮಾನ್ಯ. ಅದು ತನ್ನ ಸಾಕಿದ ಯಜಮಾನನಿಗಾಗಿ ಪ್ರಾಣತ್ಯಾಗಕ್ಕೂ ಸಿದ್ಧವಾಗುತ್ತದೆ. ತನ್ನ ಯಜಮಾನ ಸತ್ತಾಗ ಅವನ ನೆನಪಿನಲ್ಲೇ ಕೊರಗಿ ಸೊರಗಿ ಸಾವನ್ನಪ್ಪಿರುವ ಸಂದರ್ಭಗಳೂ ಇವೆ. 'ಸೈಲಾಸ್ ಮಾರ್ನರ್' ಎಂಬ ಕಾದಂಬರಿಯಲ್ಲಿ ಬರುವ ನಾಯಿಯ ಸ್ವಾಮಿ ನಿಷ್ಠೆ ಮೆಚ್ಚುವಂತಹುದಾಗಿದೆ. ಪತ್ರಿಕೆಯಲ್ಲಿ ಬಂದಿದ್ದ ವರದಿಯಲ್ಲಿ ಪಾಶ್ಚಾತ್ಯ ದೇಶದಲ್ಲಿ ಯುದ್ಧ ಭೂಮಿಗೆ ಹೋರಾಡಲು ಹೋದ ವೀರನಾದ ತನ್ನ ಯಜಮಾನನಿಗಾಗಿ ಯುದ್ಧ ಭೂಮಿಯಲ್ಲಿ ಅನೇಕ ದಿವಸಗಳವರೆಗೆ ಕಾದುಕೊಂಡಿದ್ದ ಸ್ವಾಮಿನಿಷ್ಠ ನಾಯಿಗೆ ವೀರಪ್ರಶಸ್ತಿಯನ್ನು ಕೊಟ್ಟಿದ್ದ ವಿಷಯ ಪ್ರಕಟವಾಗಿತ್ತು. ಆ ಪ್ರಶಸ್ತಿಯ ಬೆಲೆ ಸಾವಿರಾರು ಡಾಲರುಗಳಷ್ಟು ಮೌಲ್ಯವುಳ್ಳದ್ದಾಗಿತ್ತು. ಇಂತಹ ಸ್ವಾಮಿನಿಷ್ಠೆಯ ನಾಯಿಗಳನ್ನು ನಮ್ಮಲ್ಲೂ ಕಾಣಬಹುದಾಗಿದೆ. ಅದರ ನೆಚ್ಚಿನ ಯಜಮಾನ ಮರಣ ಹೊಂದಿದರೆ, ಆತನ ಸಮಾಧಿಯ ಬಳಿ ಕಣ್ಣೀರು ಸುರಿಸುತ್ತಾ ಕುಳಿತುಕೊಳ್ಳುವ ನಾಯಿಗಳನ್ನು ನಾವು ನೋಡಿದ್ದೇವೆ. ನಾಯಿಯ ಈ ಸ್ವಾಮಿನಿಷ್ಠೆಗಾಗಿ ಅವು ಸತ್ತಾಗ ಅವುಗಳಿಗೆ ಸ್ಮಾರಕದ ಕಲ್ಲುಗಳನ್ನು ನೆಟ್ಟಿರುವುದನ್ನು, ಶಾಸನ ಸಾಹಿತ್ಯಗಳು ರಚನೆಯಾಗಿರುವುದನ್ನು ನೋಡಿದರೆ ನಾಯಿಯ ಸ್ವಾಮಿನಿಷ್ಠೆ ಎಷ್ಟು ಪ್ರಶಂಸಾರ್ಹವಾದುದಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ನಾಯಿ ಜಾನಪದರ ಬೆನ್ನಿನ ಬಂಟ. ಜಾನಪದರು ನಾಯಿಯನ್ನು ಎಷ್ಟು ಪ್ರೀತಿಸುತ್ತಿದ್ದರೆಂಬುದಕ್ಕೆ ಒಂದು ಜ್ವಲಂತ ನಿದರ್ಶನವಾಗಿ 'ಆತಕೂರು ಶಾಸನ'ವಿದೆ. ಯುದ್ಧದಲ್ಲಿ ಹೋರಾಡಿ ಗೆದ್ದ ಮನಾಲರನು ಬೇಡುವುದು ಬೇರಾವ ಭಾಗ್ಯವನ್ನಲ್ಲ. ವಿಶಿಷ್ಟವಾಗಿದ್ದ 'ಕಾಳಿ' ಎಂಬ ನಾಯಿಯನ್ನು ! ಆ ನಾಯಿಯ ವಿಶೇಷವೇನು? ಎಂದರೆ ಆ ನಾಯಿ ಬೇಟೆಯಲ್ಲಿ ಹಂದಿಯೊಂದಿಗೆ ಹೋರಾಡಿ ಮಡಿಯುತ್ತದೆ. ಆ 'ಕಾಳಿ' ಮಡಿದಾಗ ವೀರ ಮನಾಲರನು ನಾಯಿಯ ಹೆಸರಿನಲ್ಲೊಂದು ವೀರಶಾಸನ ಹಾಕಿಸುತ್ತಾನೆ. ಆ ವೀರಗಲ್ಲನ್ನು ನಿತ್ಯ ಪೂಜಿಸಲು ಒಬ್ಬ ಗೊರವನನ್ನು ನೇಮಿಸಿ, ಪೂಜೆಯ ಖರ್ಚಿಗೆ ಒಂದು ಹೊಲವನ್ನು ದಾನ ಮಾಡುತ್ತಾನೆ. "ಆಸ್ಥಾನಮಸಾಳ್ದ ಗೊರವನಾ ಕಲ್ಲಂ ಪೂಜಿಸದುಂಡರಪ್ಪೊಡೆ ನಾಯಂ ಗೈದ ಪಾಪಮಂಕೊಂಡ"

ಎಂದು ಶಾಸನವು ಕೊನೆಯಾಗುತ್ತದೆ. ಈ ಶಾಸನದ ಮೇಲ್ಭಾಗದಲ್ಲಿ ಹಂದಿಯೊಡನೆ ಹೋರಾಡುತ್ತಿರುವ ನಾಯಿಯ ಚಿತ್ರವಿದೆ. ಒಟ್ಟಿನಲ್ಲಿ ಮನುಷ್ಯನು ಪ್ರಾಣಿಗಳ ವಿಷಯದಲ್ಲಿ ತೋರಬಹುದಾದ ವಾತ್ಸಲ್ಯದ ಪರಾಕಾಷ್ಠೆಯನ್ನು ಈ ಶಾಸನದಲ್ಲಿ ನೋಡುತ್ತೇವೆ.

'ನಾಯಿ' ಎಂದರೆ ಏನು ಸಾಮಾನ್ಯವೇ? ಇದೊಂದು ಅಸಾಧಾರಣ ಪ್ರಾಣಿಯೇ ಸರಿ. ಇದನ್ನು ಭೇಟೆಯಾಡಲು, ಮನೆಕಾಯಲು, ಆಡುಕುರಿಗಳ ಮಂದೆಗಳನ್ನು ಕಾಯಲು, ತೋಟಗಳನ್ನು ಕಾಯಲು ಬಳಸುತ್ತಿದ್ದರು. ಇತ್ತೀಚೆಗೆ ಪೊಲೀಸ್ ಇಲಾಖೆಯಲ್ಲಿ ನಾಯಿಗಳನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಿದ್ದಾರೆ. ನಾಯಿಗಳಿಗೆ ಹೆಚ್ಚಾಗಿ ತರಬೇತಿಯನ್ನು ನೀಡಿ ಕಳ್ಳರನ್ನು ಹಿಡಿಯಲು ಬಾಂಬುಗಳನ್ನು ಪತ್ತೆ ಹಚ್ಚಲು ಬಳಸಿಕೊಳ್ಳುತ್ತಾರೆ. ಈ ರೀತಿ ಬಾಂಬುಗಳನ್ನು ಹುದುಗಿಸಿಟ್ಟಿರುವ ಸ್ಥಳಗಳನ್ನು ಮೂಸಿ ನೋಡಿ ಬಾಂಬುಗಳನ್ನು ಪತ್ತೆ ಹಚ್ಚಿ ಸಾವಿರಾರು ಜನ ಸಾವಿಗೀಡಾಗುವುದನ್ನು, ಆಸ್ತಿಪಾಸ್ತಿ ನಾಶವಾಗುವುದನ್ನು ತಪ್ಪಿಸಬಹುದಾಗಿದೆ. ಈ ಕೆಲಸಕ್ಕಾಗಿ ನಾಯಿಗಳಿಗೆ ವಿಶೇಷ ತರಬೇತಿಯನ್ನು ಪೊಲೀಸ್ ಇಲಾಖೆಯಲ್ಲಿ ನೀಡಲಾಗುವುದು. ಹೀಗೆ ತರಬೇತಿ ಹೊಂದಿದ ನಾಯಿಗಳನ್ನು 'ಪೊಲೀಸ್ ಡಾಗ್ಸ್' ಎಂದು ಕರೆಯುತ್ತಾರೆ. ಮನುಷ್ಯನಿಗೆ ಪತ್ತೆ ಹಚ್ಚಲಾಗದ ಎಷ್ಟೋ ಅಪರಾಧಗಳನ್ನು ನಾಯಿಗಳು ಪತ್ತೆ ಹಚ್ಚಿ ರೆಕಾರ್ಡ್ ಮಾಡಿ ಪ್ರಶಂಸೆಗೆ ಪಾತ್ರವಾಗಿವೆ, ಹೀಗೆ ಪತ್ತೇದಾರಿ ಕೆಲಸ ಮಾಡಿ, ಅಪರಾಧಿಗಳನ್ನು ಕಂಡು ಹಿಡಿಯುವಲ್ಲಿ ಶ್ವಾನಗಳ ಪಾತ್ರ ನಿಜಕ್ಕೂ ಅತ್ಯದ್ಭುತ ವಾದುದಾಗಿದೆ.

ನಾಯಿಯ 'ವಾಸನಾ ಪ್ರಜ್ಞೆ' ಮನುಷ್ಯನ ಬುದ್ಧಿ ಶಕ್ತಿಯನ್ನು ಮೀರಿಸುವಂತಿದೆ. ತೊಟ್ಟಿರುವ ಬಟ್ಟೆಯ ಬೆವರಿನ ವಾಸನೆಯಿಂದಲೇ ಕಳ್ಳರನ್ನು ಪತ್ತೆ ಮಾಡುವುದು. ಅದು ಅಪರಾಧಿಗಳ ವಾಸನೆಯನ್ನಷ್ಟೇ ಅಲ್ಲ, ತನ್ನನ್ನು ಹಿಡಿಯಲುಬಂದವರ ವಾಸನೆಯೂ ಅದಕ್ಕೆ ಅರಿವಾಗುತ್ತದೆ. ಇದು ಅನ್ನ ಕೊಟ್ಟವರ ಮನೆಯನ್ನು ಬಹಳ ಜಾಗರೂಕತೆಯಿಂದ ನಿಷ್ಠಾವಂತ ಸೇವಕನಂತೆ ಕಾವಲು ಕಾಯುತ್ತದೆ. ಬೇರೆ ಯಾವುದಾದರೂ ಪ್ರಾಣಿ-ಪಕ್ಷಿಗಳು ಮನೆಯ ಅಂಗಳದೊಳಕ್ಕೆ ಬಂದರೆ ಅವುಗಳನ್ನು ಬೊಗಳುವುದರ ಮೂಲಕ ಹೊರಗಟ್ಟುತ್ತದೆ. ಹಾಗೆಯೇ ಮನೆಗೆ ಆಗಂತುಕರು ಬಂದರೆ ಅವರ ಆಗಮನವನ್ನು ಬೊಗಳುವುದರ ಮೂಲಕ ಮನೆಯ ಒಳಗಿರುವ ಯಜಮಾನನಿಗೆ ಸೂಚನೆಯನ್ನು ಕೊಡುತ್ತದೆ. ಬಂದವರು ಸೀದಾ ಮನೆಯ ಒಳಗಡೆ ಬರದಂತೆ ಬಾಗಿಲಲ್ಲಿಯೇ ತಡೆಯುತ್ತದೆ.

ಮನೆಯ ನಾಯಿಯಂತೆಯೇ ಬೀದಿಯ ನಾಯಿಯೂ ಕೂಡ ತಾನಿರುವ ಜಾಗಕ್ಕೆ ಬೇರೆ ಜಾಗದಿಂದ ಬಂದ ನಾಯಿಯನ್ನು ಸೇರಿಸುವುದಿಲ್ಲ. ಅದನ್ನು ಬೊಗಳಿ ಅಟ್ಟಿಸಿಕೊಂಡು ಹೋಗಿ ಹೊರದಬ್ಬುವುದು.

ಆದ್ದರಿಂದಲೇ ಮನೆಗೊಂದು ಓಣಿಗೊಂದು ನಾಯಿ ಇರಲೇಬೇಕು ಎನ್ನುವುದು. "ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ" ಅನ್ನೋ ಹಾಗೆ ನಿಶಾಚರರನ್ನು ಅಟ್ಟಿ ಓಡಿಸಲು ನಾಯಿಗಳು ಸದಾ ಎಚ್ಚರವಾಗಿರುತ್ತವೆ. ಹೀಗೆ ಎಚ್ಚರವಾಗಿರುವುದರಿಂದಲೇ ಶ್ರೀಮಂತರು ನಾಯಿಗಳನ್ನು ಸಾಕಿ ನಿಶ್ಚಿಂತೆಯಿಂದ ನಿದ್ದೆ ಮಾಡುವುದು!

ನಾಯಿಯ ಶರೀರದ ರಚನೆ, ಬಣ್ಣ, ಆಕಾರ, ಗಾತ್ರ ಇವುಗಳ ಬಗ್ಗೆಯೂ ಸ್ವಲ್ಪ ಗಮನಹರಿಸೋಣ. ನಾಯಿಯ ಕಿವಿಗಳು ಉದ್ದವಾಗಿದ್ದು ಮೊನಚಾಗಿರುತ್ತವೆ. ಕೆಲವು ನಾಯಿಗಳ ಕಿವಿಗಳು ಅಗಲವಾಗಿದ್ದು ಕೆಳಕ್ಕೆ ಜೋತುಬಿದ್ದಿರುತ್ತವೆ. ಶಬ್ದ ಬಂದ ಕಡೆಗೆ ನಾಯಿಗಳು ತಮ್ಮ ಕಿವಿಯನ್ನು ನೆಟ್ಟಗೆ ಮೊನಚಾಗಿ ನಿಮಿರಿಸಿಕೊಂಡು ಕೂತಲ್ಲಿಂದಲೇ ಶಬ್ದ ಬರುವ ಕಡೆಗೆ ಕಿವಿಗಳನ್ನು ಚಲಿಸುತ್ತಾ ಬಹುಸೂಕ್ಷ್ಮವಾಗಿ ಸದ್ದಾಗುವ ದಿಕ್ಕನ್ನು ಅಥವಾ ಬರುವ ವ್ಯಕ್ತಿಯನ್ನು ಪತ್ತೆಮಾಡಿ ಬೊಗಳುತ್ತದೆ. ನಾಯಿಗೆ ಕಣ್ಣು ಮತ್ತು ಕಿವಿಗಳು ಅತಿಸೂಕ್ಷ್ಮ. ಅದರ ಕಣ್ಣುಗಳು ಹೊಳಪಾಗಿದ್ದು ರಾತ್ರಿಯ ವೇಳೆಯಲ್ಲೂ ಚೆನ್ನಾಗಿ ಕಾಣಿಸುತ್ತದೆ. ಇದಕ್ಕೆ ಜ್ಞಾಪಕಶಕ್ತಿ ಹೆಚ್ಚು. ಎಲ್ಲಕ್ಕಿಂತ ಇದರ ಘ್ರಾಣೇಂದ್ರಿಯಗಳು ಇನ್ನೂ ಸೂಕ್ಷ್ಮ. ಇದು ತನ್ನ ಯಜಮಾನನ ಆಜ್ಞೆಗಳನ್ನು ಧ್ವನಿ ಹಾಗೂ ಕೈಸನ್ನೆಗಳ ಮೂಲಕ ತಿಳಿದುಕೊಂಡು ಅದರಂತೆ ನಡೆಯುತ್ತದೆ.

ನಾಯಿಗಳಲ್ಲಿ ವಿವಿಧ ಜಾತಿ ಮತ್ತು ತಳಿಗಳಿವೆ. ಉದಾ: ಡಾಬರ್‌ಮನ್, ಸೀಳುನಾಯಿ, ಅಲ್‌ಷೇಷಿಯನ್, ಡಾಲ್ ಮಿಶನ್, ಬುಲ್, ಪೊಮೇರಿಯನ್, ಜರ್ಮನ್ ಶೆಪ್ಪರ್ಡ್, ಇತ್ಯಾದಿಗಳು, ಹಾಗೆಯೇ ನಾಯಿಗಳಲ್ಲಿ ವಿವಿಧ ಬಣ್ಣಗಳಿವೆ. ಉದಾ : ಬಿಳಿ, ಕಪ್ಪು, ಕಂದು, ಬೂದು, ಪಟ್ಟೆ ಪಟ್ಟೆ ಬಣ್ಣದ ನಾಯಿಗಳಿವೆ.

ಹೀಗೆ ನಾಯಿಗಳ ಬಾಹ್ಯರೂಪದಲ್ಲಿ, ಗಾತ್ರದಲ್ಲಿ, ಎತ್ತರದಲ್ಲಿ, ನಾಯಿಯ ಮೂತಿಗಳಲ್ಲಿ, ಬಾಲಗಳಲ್ಲಿ, ಜಾತಿಗಳಲ್ಲಿ, ಬಣ್ಣಗಳಲ್ಲಿ ವಿವಿಧ ಬಗೆಗಳಿರುವಂತೆ ಅವುಗಳ ಗುಣ, ಸ್ವಭಾವಗಳಲ್ಲಿಯೂ ಹಲವಾರು ವ್ಯತ್ಯಾಸಗಳಿರುವುದುಂಟು.

ಮನುಷ್ಯರಿಗೆ ಹೇಗೆ ನಾಮಕರಣ ಮಾಡಿ ಹೆಸರಿಡುತ್ತಾರೋ ಹಾಗೆಯೇ ನಾಯಿಗಳಿಗೂ ವಿವಿಧ ರೀತಿಯ ಹೆಸರುಗಳನ್ನಿಟ್ಟು ನಾಮಕರಣ ಮಾಡುವರು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಅವುಗಳ ಬಣ್ಣಕ್ಕೆ ತಕ್ಕಂತೆ ಭೈರ, ಕರಿಯ, ಕೆಂಚ, ಕಾಳ,

ಬಿಳಿಯ. ಬೂದ ಎಂದು ಹೆಸರಿಟ್ಟು ಕರೆಯುತ್ತಾರೆ. ಕೆಲವರು ಅದರ ಮೈಕಟ್ಟು ಅಥವಾ ಗಾತ್ರದ ಆಧಾರದ ಮೇಲೆ ಹೆಸರಿಡುತ್ತಾರೆ. ಉದಾ : ಗಡವ, ಹಿಟ್ಲಕ್ಕ, ಮುಂತಾದುವು. ನಗರವಾಸಿಗಳು ತಮಗೆ ಪ್ರಿಯವಾದ ಗತ್ತಿನಿಂದ ಕೂಡಿರುವ ಹೆಸರುಗಳನ್ನಿಡುತ್ತಾರೆ. ಉದಾ : ಟಾಮಿ, ಜಾನಿ, ಟೈಗರ್, ರಾಜಾ, ರಾಣಿ, ಜಿಮ್ಮಿ, ಸೋಲ್ಜರ್ ಎಂದೆಲ್ಲಾ ಕರೆಯುತ್ತಾರೆ. ಅದೇ ರೀತಿ ಪಾಶ್ಚಾತ್ಯರು ನಾಯಿಯ ಗುಣಕ್ಕೆ ಹಾಗೂ ಅದರ ದಕ್ಷತೆಗೆ ತಕ್ಕ ಹಾಗೆ ಹಂಟರ್, ಜೂಲಿ, ಡಿಯರ್, ಕಿಂಗ್, ಕ್ವೀನ್, ಟೈಗರ್, ಬ್ಯೂಟಿ ಎಂದೆಲ್ಲಾ ಹೆಸರುಗಳನ್ನಿಡುತ್ತಾರೆ. ಒಟ್ಟಿನಲ್ಲಿ ನಾಯಿಗೆ ಅಂದಚೆಂದದ ಹೆಸರುಗಳನ್ನಿಟ್ಟು ಕರೆಯುತ್ತಾರೆ.

ಮನುಷ್ಯರು ನಾಯಿಗಳನ್ನು ಸಾಕಿದಾಗ ಅವುಗಳನ್ನು ಕೂಗಿ ಕರೆಯಲು ಅವುಗಳಿಗೆ ಹೆಸರುಗಳನ್ನಿಡುವುದು ಸಹಜ. ಹಾಗೆಯೇ ನಾಯಿಗಳನ್ನು ಪ್ರೀತಿಸುವವರಿಗೆ, ಅವುಗಳನ್ನು ಸಾಕುವುದರಿಂದ, ಅವುಗಳೊಂದಿಗೆ ನಿಕಟ ಸಂಬಂಧವನ್ನಿಟ್ಟು ಕೊಂಡಿರುವುದರಿಂದ ಹಾಗೂ ಅವುಗಳ ವ್ಯಾಪಾರ ವ್ಯವಹಾರಗಳನ್ನು ಮಾಡುವುದರಿಂದ ಆ ನಾಯಿಗಳ ಹೆಸರು ಮನುಷ್ಯರ ಹೆಸರಿನೊಂದಿಗೆ ಸೇರಿಕೊಂಡು ಆ ಹೆಸರಿನಿಂದಲೇ ಆ ವ್ಯಕ್ತಿಗಳನ್ನು ಗುರುತಿಸುವುದೂ ಉಂಟು. ಉದಾ: ನಾಯಿಗುತ್ತಿ, ನಾಯಿಸಿದ್ಧ, ನಾಯಿಕಾಳ, ನಾಯಿ ಭೈರ ಮುಂತಾದುವು.

ನಾಯಿಗಳಿಗೆ ಹೆಸರುಗಳನ್ನು ಕೊಡುವುದಕ್ಕೆ ಮೊದಲೇ ಇದನ್ನು ನಾನಾ ಹೆಸರುಗಳಿಂದ ಕರೆಯುವುದನ್ನು ಸಾಹಿತ್ಯದಲ್ಲಿ ಕಾಣುತ್ತೇವೆ. ಉದಾ: ಶುನಕ, ಶ್ವಾನ, ಸೊಣಗ, ಶುನಿ, ಕುನ್ನಿ, ಕುರೋ ಎಂದೆಲ್ಲಾ ಕರೆಯುತ್ತಾರೆ. ಹಳ್ಳಿಗಳಲ್ಲಿ ಇಂದಿಗೂ ನಾಯಿಗಳನ್ನು ಕೂಗಿ ಕರೆಯುವುದು ಕುರೋ ಕುರೋ ಎಂದೇ. ಏಕೆಂದರೆ ಅವರುಗಳು ನಗರವಾಸಿಗಳಂತೆ ನಾಯಿಗಳನ್ನು ಮುದ್ದಿಗಾಗಿ, ಫ್ಯಾಶನ್‌ಗಾಗಿ ಅಥವಾ ತಮ್ಮ ಶ್ರೀಮಂತಿಕೆಯನ್ನು ತೋರಿಸಿಕೊಳ್ಳುವುದಕ್ಕಾಗಿ ಸಾಕುವುದಿಲ್ಲ. ಅವಷ್ಟಕ್ಕೆ ಅವು ಊರಲ್ಲೆಲ್ಲಾ ಎಲ್ಲರ ಮನೆಯ ಮುಂದೂ ಇರುತ್ತವೆ. ಯಾರೇ ಕೂಗಲಿ, ಅವರ ಮನೆಯ ಬಾಗಿಲಿಗೆ ಎಲ್ಲಿದ್ದರೂ ಆ ಕೂಗುವಿಕೆಯ ಶಬ್ದಕ್ಕೆ ಓಡೋಡಿ ಬರುತ್ತವೆ.

ನಾಯಿಯನ್ನು ಕೂಗುವುದು ಕುರೋ ಕುರೋ, ಕೂ, ಕೂ, ಹಾಗೂ ಇಚ್ ಚ ಚ ಚ ಎಂದು. ಹಾಗೆಯೇ ನಾಯಿಯನ್ನು ಓಡಿಸಬೇಕಾದರೆ ತೀರ್ರಾ ಛೀ, ಅಚ್ಚ ಎನ್ನುವರು. ಕೆಲವೊಮ್ಮೆ ರಸ್ತೆಯಲ್ಲಿ ಹೋಗುವಾಗ ಕೆಲವು ನಾಯಿಗಳು ಬೊಗಳುತ್ತಾ

ನಮ್ಮನ್ನು ಹಿಂಬಾಲಿಸಿಕೊಂಡು ಅಥವಾ ನಾವು ಮುಂದೆ ಹೋಗಲು ಬಿಡದಂತೆ ಅಡ್ಡ ಹಾಕಿದರೆ ಓಡಿ ಹೋಗದೆ ಅವುಗಳಿಂದ ತಪ್ಪಿಸಿಕೊಳ್ಳಲು ಕೆಲವು ವಿಧಾನಗಳನ್ನು ಅನುಸರಿಸಬೇಕಾಗುವುದು. ಉದಾ :- ಕೈಲಿ ಕಲ್ಲನ್ನು ಹಿಡಿದುಕೊಂಡು ಓಡಿಸುವುದು, ಇಲ್ಲದಿದ್ದರೆ ದೊಣ್ಣೆ ತೆಗೆದುಕೊಂಡರೆ ಅವೇ ಓಡುತ್ತವೆ. ಕೆಲವಕ್ಕೆ ಛತ್ರಿ ಬಿಚ್ಚಿದರೇ ಸಾಕು ಓಡುತ್ತವೆ. ಇನ್ನೂ ಕೆಲವು ಟಾರ್ಚ್ ಹಿಡಿದರೆ ಓಡುತ್ತವೆ. ಹೀಗೆ ಅವು ಬೊಗಳುತ್ತಾ ಅಡ್ಡ ಹಾಕಿದರೆ ಓಡದೆ ಅಲ್ಲೇ ನಿಂತು ಕೈಗೆ ಸಿಕ್ಕಿದ್ದರಲ್ಲಿ ಬೆದರಿಸಿ ಓಡಿಸಬೇಕು. ಇಲ್ಲದಿದ್ದರೆ ಅವು ಕಚ್ಚುವ ಸಾಧ್ಯತೆ ಹೆಚ್ಚಿರುತ್ತದೆ. ಇದು ಬೀದಿನಾಯಿಗಳನ್ನು ಕರೆಯುವುದಕ್ಕೆ ಮತ್ತು ಓಡಿಸುವುದಕ್ಕೇ ಹೊರತು ಮನೆಯಲ್ಲಿ ಸಾಕಿರುವ, ಕಟ್ಟಿ ಹಾಕಿರುವ ನಾಯಿಗಳಿಗೆ ಅಲ್ಲ.

ನಾಯಿಯಲ್ಲಿ ಸಾಮಾನ್ಯವಾಗಿ ಹಲವಾರು ಗುಣಗಳನ್ನು ಕಾಣುತ್ತೇವೆ. ಉದಾ: ಬೊಗಳುವುದು, ಕಚ್ಚುವುದು, ಕುಂಯಿ ಕುಂಯಿ ಎಂದು ಕಾಲಿನ ಸುತ್ತುಸುತ್ತಿ ಪ್ರೀತಿಯನ್ನು ತೋರುವುದು, ಮಲಮೂತ್ರ ವಿಸರ್ಜನೆಗೆ ಹೋಗಬೇಕಾದಾಗ ಸದ್ದು ಮಾಡಿ ಕರೆಯುವುದು, ಕೋಪ ಬಂದರೆ ಗುರ್ ಗುರ್ ಎನ್ನುವುದು, ಪ್ರೀತಿಯಿಂದ ಮೈ ನೆಕ್ಕುವುದು, ಮೈಮೇಲೆ ಹಾರುವುದು, ಡೊಂಕು ಬಾಲವನ್ನಿಟ್ಟುಕೊಂಡು ಓಡಾಡುವುದು. ನಾಯಿ ಸಮುದ್ರಕ್ಕೆ ಹೋದರೂ ನೆಕ್ಕು ನೀರೇ ಎಂಬ ಗಾದೆಯಂತೆ ನಾಯಿ ನೀರು, ಹಾಲು-ಮುಂತಾದ ದ್ರವ ಪದಾರ್ಥಗಳನ್ನು ನಾಲಿಗೆಯಿಂದ ನೆಕ್ಕಿ ಕುಡಿಯುವುದು - ಹೀಗೆ ಹಲವು ಗುಣಗಳನ್ನು ನಾಯಿಗಳಲ್ಲಿ ಕಾಣಬಹುದಾಗಿದೆ.

ನಾಯಿಯ ಮತ್ತೊಂದು ಗುಣವೆಂದರೆ ಎಲ್ಲಿ ಕಲ್ಲುಗಳನ್ನಾಗಲಿ, ಕಂಬಗಳನ್ನಾಗಲಿ ಅಥವಾ ನಿಂತಿರುವ ಗಾಡಿಗಳನ್ನಾಗಲಿ ಕಂಡರೆ ಅಲ್ಲಿ ಕಾಲೆತ್ತಿ ಮೂತ್ರ ವಿಸರ್ಜನೆ ಮಾಡುವುದು. ಅದಕ್ಕೆ ಇದು ದೇವರ ಕಲ್ಲು, ಇದು ದೇವರ ಜಗಲಿ, ಇದು ಕಸದ ತೊಟ್ಟಿ ಎಂಬ ಯಾವುದೇ ಪರಿಜ್ಞಾನವಿರುವುದಿಲ್ಲ.

ನಾಯಿಗೆ ಬೆವರನ್ನು ನಾಲಿಗೆಯ ತುದಿಯಿಂದ ಸುರಿಸುವುದೂ ಒಂದು ವಿಶಿಷ್ಟ ಗುಣವಾಗಿದೆ.

ನಾಯಿ ಸಸ್ಯಾಹಾರಿಯೂ ಹೌದು, ಮಾಂಸಾಹಾರಿಯೂ ಹೌದು. ಮನೆಯಲ್ಲಿ ಕಟ್ಟಿ ಹಾಕದೆ ಬೀದಿಯಲ್ಲಿ ಬಿಟ್ಟರಂತೂ ಸಿಕ್ಕಲ್ಲೆಲ್ಲಾ ಅಮೇಧ್ಯವನ್ನು ತಿನ್ನುತ್ತದೆ. ಆದ್ದರಿಂದಲೇ ಕೆಲವು ಜಾತಿ ನಾಯಿಗಳನ್ನು ಹೊರಕ್ಕೆ ಬಿಡದಂತೆ ಸರಪಳಿ ಹಾಕಿ ಕಟ್ಟಿರುತ್ತಾರೆ.

ಮನುಷ್ಯರಂತೆ ನಾಯಿಗಳಿಗೂ ಪ್ರತಿದಿನ ಅಥವಾ ದಿನ ಬಿಟ್ಟು ದಿನ ಅಥವಾ ವಾರಕ್ಕೊಮ್ಮೆ ಸ್ನಾನ ಮಾಡಿಸುವರು. ಅದಕ್ಕೆ ಬೇರೆ ಸ್ನಾನದ ಸೋಪು ಇದೆ. ಅದಕ್ಕೆ ತಿನ್ನಲು ಕೊಡುವ ಬಿಸ್ಕೆಟ್ಟುಗಳೇ ಬೇರೆ ಇರುತ್ತವೆ. ಇದನ್ನು 'ನಾಯಿ ಬಿಸ್ಕತ್ತು' ಎನ್ನುವರು. ಅವಕ್ಕೆ ಮಲಗಲು ಪ್ರತ್ಯೇಕ ಸ್ಥಳ, ಹಾಸುವ ಬಟ್ಟೆ ಎಲ್ಲಾ ಬೇಕು. ಕೆಲವು ನಾಯಿಗಳಂತೂ ಯಜಮಾನ ಕುಳಿತುಕೊಳ್ಳುವ ಕುರ್ಚಿಯಲ್ಲೇ ಕುಳಿತುಕೊಳ್ಳುತ್ತವೆ. ಅವನು ಮಲಗುವ ಮಂಚದ ಮೇಲೆಯೇ ಮಲಗಿಕೊಳ್ಳುತ್ತವೆ. ಕೆಲವು ಮನೆಗಳಲ್ಲಿ ನಾಯಿಗೆಂದೇ ಪ್ರತ್ಯೇಕವಾದ ಪುಟ್ಟ ಗೂಡುಗಳನ್ನು ಕಟ್ಟಿರುತ್ತಾರೆ. ಅವುಗಳನ್ನು ಪ್ರತಿದಿನ ತೊಳೆದು ಶುಭ್ರವಾಗಿಡುತ್ತಾರೆ. ಕೆಲವರು ತಾವು ಸಾಕಿದ ನಾಯಿಗಳನ್ನು ನೋಡಿಕೊಳ್ಳಲೆಂದೇ ಸೇವಕರನ್ನೂ ಇಟ್ಟುಕೊಂಡಿರುತ್ತಾರೆ. ಕೆಲವು ಮನೆಗಳಲ್ಲಿ ನಾಯಿಗಳಿಗೆ ಒಳ್ಳೆಯ ರಾಜೋಪಚಾರ ಸಿಗುತ್ತದೆ. ಮನುಷ್ಯರಿಗೂ ಆ ರೀತಿಯ ಆತಿಥ್ಯ ಸಿಗುವುದಿಲ್ಲವೇನೋ!

ನಾಯಿಯನ್ನು ಮನುಷ್ಯರಂತೆಯೇ ವೈದ್ಯಕೀಯ ತಪಾಸಣೆ ಮಾಡಿಸುವರು. ಎಲ್ಲಾ ಕಡೆಗಳಲ್ಲೂ ಇದಕ್ಕಾಗಿಯೇ ಪ್ರತ್ಯೇಕ ಶಾಪುಗಳಿವೆ. ವೈದ್ಯರಿದ್ದಾರೆ. ಇವುಗಳಿಗೂ ಕಾಲಕಾಲಕ್ಕೆ ಇಂಜಕ್ಷನ್ ಹಾಕಿಸುವರು. ಅದು ಸಂಗಾತಿಯನ್ನು ಬಯಸಿದಾಗ ಅದಕ್ಕೂ ಸೂಕ್ತ ವ್ಯವಸ್ಥೆಯನ್ನು ಮಾಡುವರು. ನಾಯಿಯನ್ನು ಸಾಕುವುದು ಅಷ್ಟೇನೂ ಖರ್ಚಿಲ್ಲದ, ಅತಿ ಸುಲಭದ ಕೆಲಸವೆಂದು ತಿಳಿದೀರೀ ಜೋಕೆ! ಇದನ್ನು ಸಾಕಲು ತಿಂಗಳಿಗೆ ನೂರರಿಂದ ಸಾವಿರಾರು ರೂಪಾಯಿಗಳವರೆಗೂ ಖರ್ಚಾಗುವುದು. ಒಬ್ಬ ಮನುಷ್ಯನನ್ನು ಸಾಕಬಹುದು. ಆದರೆ ಒಂದು ಜಾತಿಯ ನಾಯಿಯನ್ನು ಸಾಕುವುದು ಕಷ್ಟ ಎನ್ನುವ ಮಾತಿನಲ್ಲಿ ಯಾವ ಉತ್ಪ್ರೇಕ್ಷೆಯೂ ಎಲ್ಲ ಎನ್ನಬಹುದು. ನಾಯಿ ಸಾಕುವವರಿಗೆ ನಾವು ನಾಯಿಗೆ ತಿಂಗಳಿಗೆ ಇಷ್ಟು ಖರ್ಚು ಮಾಡುತ್ತೇವೆ ಎಂದು ಹೇಳಿಕೊಳ್ಳುವುದೇ ಒಂದು ಹೆಮ್ಮೆಯ ವಿಚಾರವಾಗಿರುತ್ತದೆ.

ಎಲ್ಲಾ ದೇಶದವರು ಸಾಮಾನ್ಯವಾಗಿ ಒಂದಲ್ಲ ಒಂದು ಕಾರಣಕ್ಕಾಗಿ ನಾಯಿಗಳನ್ನು ಸಾಕುತ್ತಾರೆ. ಇತ್ತೀಚೆಗಂತೂ ನಾಯಿ ಸಾಕುವವರ ಸಂಖ್ಯೆ ಹೆಚ್ಚಾಗಿದೆ. ತಮ್ಮ ಮನೆಯಲ್ಲಿ ಇಂತಹ ನಾಯಿ ಇದೆ ಎಂದು ಹೇಳಿಕೊಳ್ಳುವುದೇ ಒಂದು ಹೆಗ್ಗಳಿಕೆಯ ಹಾಗೂ ಶ್ರೀಮಂತಿಕೆಯನ್ನು ತೋರಿಸುವ ವಿಷಯವಾಗಿದೆ. ಹಾಗೆಯೇ ನಾಯಿಯ ಜಾತಿ, ಕುಲಗೋತ್ರಗಳನ್ನು ವಿಚಾರಿಸಿ ಅದರ ಮೌಲ್ಯ ನಿರ್ಣಯ ಮಾಡುತ್ತಾರೆ. ಕೊನೆಗೆ ಇಲ್ಲಿಯೂ ಜಾತಿ ನಾಯಿಯೋ ಅಥವಾ ಕಂತ್ರಿ ನಾಯಿಯೋ ಎಂಬ ಜಾತಿ ಪ್ರಜ್ಞೆಯನ್ನು ಪ್ರದರ್ಶಿಸದೇ ಬಿಡುವುದಿಲ್ಲ.

ನಾಯಿಯನ್ನು ಕಟ್ಟಿದ ಜಾಗದಲ್ಲೇ ಕಟ್ಟಿ ಸಾಕಲಾಗುವುದಿಲ್ಲ. ಸಂಜೆಯಾಯಿತೆಂದರೇ ಸಾಕು ಅವುಗಳನ್ನು ವಾಕಿಂಗಿಗೆ ಕರೆದುಕೊಂಡು ಹೋಗಬೇಕು. ಅವುಗಳು ನೈಸರ್ಗಿಕ ಕ್ರಿಯೆಯನ್ನು ಈ ನೆಪದಲ್ಲಿ ಹೊರಗೆ ಮಾಡಿಸಲು ಅಭ್ಯಾಸ ಮಾಡಿಸಿರುತ್ತಾರೆ. ಹೊರಗೆ ನಾಯಿಗಳನ್ನು ಕರೆದೊಯ್ಯುವಾಗ ಕುತ್ತಿಗೆಗೆ ಪಟ್ಟಿಯನ್ನು ಬಿಗಿದು ಸರಪಳಿಯಿಂದ ಕಟ್ಟಿ ಹಿಡಿದುಕೊಂಡು ಓಡಾಡಿಸುವರು. ಇಲ್ಲಿ ಎರಡು ಉದ್ದೇಶಗಳು ಈಡೇರುವುವು. ಏನೆಂದರೆ ಅವರಿಗೂ ವಾಕಿಂಗ್ ಮಾಡಿದಂತಾಯಿತು. ನಾಯಿಗಳ ದೈಹಿಕ ಬಾಧೆಯನ್ನು ತೀರಿಸಿ ಅವುಗಳನ್ನೂ ವಾಕಿಂಗ್ ಮಾಡಿಸಿದಂತಾಗುವುದು. ಕೆಲವರು ಒಂದು ಕೋಲನ್ನು ಕೈಯಲ್ಲಿ ಹಿಡಿದುಕೊಂಡು – ಬೇರೆ ಗಂಡು ಅಥವಾ ಹೆಣ್ಣು ನಾಯಿಗಳಿಂದ ತಮ್ಮ ನಾಯಿಯನ್ನು ರಕ್ಷಿಸಿಕೊಳ್ಳಲು – ಓಡಾಡಿಸುವರು. ಕೆಲವರು ತಾವು ಕಾರಿನಲ್ಲಿ ಮನೆಯಿಂದ ಹೊರಗೆ ಹೋಗುವಾಗ ನಾಯಿಗಳನ್ನೂ ಜೊತೆಯಲ್ಲೇ ಕಾರಿನಲ್ಲಿ ಕರೆದುಕೊಂಡು ಹೋಗುವರು. ಇದಕ್ಕೆ ಕಾರಣವು ಇಲ್ಲದೇ ಇಲ್ಲ. ಮಾರ್ಗಮಧ್ಯದಲ್ಲಿ ಆಕಸ್ಮಿಕವಾಗಿ ಒದಗಬಹುದಾದ ತೊಂದರೆಗಳಿಂದ ಪಾರಾಗಲೂ ಹಾಗೂ ತಮ್ಮ ಆತ್ಮರಕ್ಷಣೆಗಿರಲೆಂಬ ಕಾರಣದಿಂದಲೂ ಜೊತೆಯಲ್ಲಿ ಕರೆದೊಯ್ಯುವರು. ಇದರಲ್ಲೇನೂ ಉತ್ಪ್ರೇಕ್ಷೆಯಿಲ್ಲ. ಉದಾ: ಹೀಗೆ ನಾಯಿಯನ್ನು ಜೊತೆಯಲ್ಲಿ ಕರೆದೊಯ್ದಿದ್ದರಿಂದಲೇ ಒಬ್ಬರ ಕೊಲೆಯಾದಾಗ ಕೊಲೆಗಾರರ ಸುಳಿವನ್ನು ಕಂಡುಹಿಡಿಯಲು, ಅವರು ಕೊಲೆಯಾದ ಜಾಗವನ್ನು ಪತ್ತೆ ಹಚ್ಚಲು ಸಹಾಯವಾಗಿರುವುದನ್ನು ಪತ್ರಿಕೆಗಳು ವರದಿ ಮಾಡಿರುವುದನ್ನು ಓದಿದ್ದೇವೆ.

ಕೆಲವೊಮ್ಮೆ ನಾಯಿಯ ಕತ್ತಿನಲ್ಲಿ ಹಾಕಿರುವ ಚೈನನ್ನು ಬಿಡದೆ ಕೈಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡು ಹೋಗುತ್ತಿದ್ದರೆ ಇದ್ದಕ್ಕಿದ್ದಂತೆ ಬೇರೆ ನಾಯಿಗಳನ್ನು ಕಂಡು ಹಿಂದೆ ಮುಂದೆ ವಾಹನಗಳು ಬರುತ್ತಿವೆ ಎಂಬುದನ್ನೂ ಲೆಕ್ಕಿಸದೆ ಯಜಮಾನನನ್ನು ದರದರನೆ ಎಳೆದುಕೊಂಡು ಹೋಗಿ ಅಪಹಾಸ್ಯಕ್ಕೀಡು ಮಾಡುವ ಸಂದರ್ಭಗಳೂ ಉಂಟು. ಅವರು ಯಾವುದೋ ಗಮನದಲ್ಲಿದ್ದು ನಾಯಿ ಎಳೆದ ರಭಸಕ್ಕೆ ಕೆಳಗೆ ಬಿದ್ದು ಅಥವಾ ಕರೆಂಟಿನ ಕಂಬಗಳಿಗೆ ಗುದ್ದಿಕೊಂಡೋ ಗಾಯಗಳಾಗಿರುವ ಸಾಧ್ಯತೆಯೂ ಇದೆ.

ನಾಯಿಯನ್ನು ನಾವು ಪ್ರೀತಿಸಿದರೆ, ಮುದ್ದಿಸಿದರೆ, ಅಕ್ಕರೆಯಿಂದ ನೋಡಿಕೊಂಡರೆ ಅದೂ ನಮಗಾಗಿ ಪ್ರಾಣ ತ್ಯಾಗಕ್ಕೂ ಸಿದ್ಧವಾಗಿರುತ್ತದೆ. ಹಾಗಿಲ್ಲದೇ ಅದನ್ನು ಹೆದರಿಸಿ, ಬೆದರಿಸಿ ಹೊಡೆದರೆ ಅದು ಕಚ್ಚಲು ಬರುತ್ತದೆ. ಅದು ಏನಾದರೂ

ಬೊಗಳಿದರೇ ಸಾಕು ನಾವು ಹೆದರಿಕೊಂಡು ಓಡಲು ತೊಡಗಿದರೆ ಅದು ನಮ್ಮನ್ನು ಬೆನ್ನಟ್ಟಿಸಿಕೊಂಡು ಬರುತ್ತದೆ. ಆದರೆ ಎಲ್ಲಾ ನಾಯಿಗಳೂ ಒಂದೇ ರೀತಿ ಇರುವುದಿಲ್ಲ. ಕೆಲವು ನಾಯಿಗಳಂತೂ ಮನೆಯ ಬಾಗಿಲಲ್ಲಿ ಸುಮ್ಮನೇ ಮಲಗಿರುತ್ತವೆ. ಒಳಗೆ ಹೋದರೂ ಏನೂ ಮಾಡುವುದಿಲ್ಲ. ಆದರೆ ಮಾತ್ರ ಹೊರಗೆ ಬರುವಾಗ ಆರ್ಭಟಿಸಲು ಶುರುಮಾಡುತ್ತವೆ. ಇನ್ನೂ ಕೆಲವು ನಾಯಿಗಳಿವೆ – ಅವು ಯಾರಾದರೂ ಒಳಗೇ ಹೋಗಲಿ, ಹೊರಗೇ ಬರಲಿ ಅದಕ್ಕೂ ನನಗೂ ಯಾವುದೇ ಸಂಬಂಧವಿಲ್ಲವೆಂದುಕೊಂಡಂತೆ ನಿಂತಿರುತ್ತವೆ–ಕುಳಿತಿರುತ್ತವೆ–ಮಲಗಿರುತ್ತವೆ. ಮತ್ತೆ ಕೆಲವು ನಾಯಿಗಳು ಹುಲಿ, ಚಿರತೆಗಳಂತೆ ಗೇಟು ಶಬ್ದವಾದ ಕೂಡಲೇ ಮೈ ಮೇಲೆ ಹಾರುತ್ತವೆ. ಅವೆಲ್ಲಿ ಸಿಗಿದು ಹಾಕುತ್ತವೋ ಎನ್ನುವ ಭೀತಿಗೆ ಒಳಗಾಗುವ ಸಂದರ್ಭಗಳೂ ಇರುತ್ತವೆ. ಕಳ್ಳರಂತೂ ಇಂತಹ ನಾಯಿಗಳನ್ನು ನೋಡಿಯೇ ಓಡಿಹೋಗುವುದಿದೆ. ಆದರೆ ಕೆಲವು ಕಳ್ಳರೂ ಇಂತಹ ನಾಯಿಗಳಿಗೆ ನಿದ್ದೆ ಮಾತ್ರೆ ಹಾಕಿದ ಮಾಂಸವನ್ನೋ ಅಥವಾ ಬೇರಾವ ಆಹಾರವನ್ನೋ ಹಾಕಿ ಅವುಗಳಿಗೆ ಮಂಪರುಬರಿಸಿ ಕಳ್ಳತನ ಮಾಡಿಕೊಂಡು ಹೋಗುವರು.

ನಾಯಿ ಎಷ್ಟು ಉಪಕಾರಿಯೋ, ಪ್ರಯೋಜನಕಾರಿಯೋ ಅಷ್ಟೇ ಅಪಾಯ ಕಾರಿಯೂ ಆಗಿರುವುದು. ಉದಾ : ಹುಚ್ಚು ನಾಯಿ. ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ಈ ಹುಚ್ಚುನಾಯಿಗಳ ಸಂಖ್ಯೆ ಹೆಚ್ಚಾಗಿದೆ. ಇತ್ತೀಚೆಗಂತೂ ಈ ಹುಚ್ಚುನಾಯಿಗಳ ಕಡಿತಕ್ಕೆ ಒಳಗಾಗಿ ಪ್ರಾಣತೆತ್ತವರೆಷ್ಟೋ ಮಂದಿ ಇದ್ದಾರೆ. ಹೆಚ್ಚು ಮಕ್ಕಳುಗಳ ಸಾವಿಗೂ ಈ ಹುಚ್ಚುನಾಯಿಗಳು ಕಾರಣವಾಗಿವೆ. ಕೆಲವು ಹುಚ್ಚುನಾಯಿಗಳಂತೂ ಮುಖ, ಕೈ, ಕಾಲು, ಬೆನ್ನು ಎನ್ನದೇ ಮಾಂಸಖಂಡಗಳನ್ನೇ ಕಿತ್ತು ತಿಂದಿರುವ ಉದಾಹರಣೆಗಳಿವೆ. ಇಂತಹ ನಾಯಿಗಳನ್ನು ಪುರಸಭೆಯವರು ಕೆಲವು ಕಡೆ ವಿಷ ಹಾಕಿ ಕೊಲ್ಲುತ್ತಾರೆ. ಇವು ಮಾಡುವ ರಂಪಾಟಗಳಿಗೆ ನಿರ್ದಾಕ್ಷಿಣ್ಯಭಾವ ಪಾಪಕರವಲ್ಲವೆನ್ನಬಹುದಾಗಿದೆ. ಕೆಲವು ನಾಯಿಗಳಿಗೆ ರಕ್ತದ ರುಚಿ ಹತ್ತಿದರೇ ಸಾಕು ಅವು ಕಣ್ಣಿಗೆ ಬಿದ್ದ ಕೋಳಿ ಮರಿಗಳನ್ನು ಕದ್ದು ತಿನ್ನುತ್ತವೆ.

ಹಿಂದೆಲ್ಲಾ ಶ್ರೀಮಂತರ ಮನೆಯ ಮುಂದೆ 'ನಾಯಿ ಇದೆ ಎಚ್ಚರಿಕೆ', – 'Beware of Dogs' ಎಂಬ ಫಲಕವನ್ನು ನೇತು ಹಾಕುತ್ತಿದ್ದುದನ್ನು ನಾವು ಗಮನಿಸಿದ್ದೆವು. ಆದರೆ ಇಂದು ಹೆಚ್ಚೂ–ಕಡಿಮೆ ಎಲ್ಲರ ಮನೆಯ ಮುಂದೂ ಈ ಫಲಕವನ್ನು ನೋಡುತ್ತೇವೆ. ಆದರೆ ಎಷ್ಟೋ ಮನೆಗಳಲ್ಲಿ ನಾಯಿಗಳೇ ಇರುವುದಿಲ್ಲ. ಆದರೆ ನಾಯಿಗಳಿವೆ ಎಂಬ ಬೋರ್ಡುಗಳು ಮಾತ್ರ ಇರುತ್ತವೆ. ಇದನ್ನು ನೋಡಿದ

ಕೆಲವರು ಮನೆಯೊಳಗಿರುವವರೇ ತಮ್ಮನ್ನು ಹಾಗೆ ಕರೆದುಕೊಂಡಿದ್ದಾರೇನೋ ಎಂದು ಭಾವಿಸಬಾರದೇಕೆ ಎಂದು ಗೇಲಿಮಾಡುವುದೂ ಇದೆ. ಇಲ್ಲಿ 'ನಾಯಿ' ಎಂದು ಬಳಸಿರುವ ಪದ 'ದ್ವಂದ್ವಾರ್ಥ'ದಿಂದ ಕೂಡಿ ಮಾರ್ಮಿಕವಾಗಿದೆ. ಎನಿಸುತ್ತದೆ.

ಈ ಬೋರ್ಡು ಅಪರಿಚಿತರು ಸೀದಾ ಮನೆಯೊಳಗೆ ಬರದಂತೆ ಮಾಡಲು ಈ ರೀತಿಯ ಅಸತ್ಯದ ಪ್ರಯೋಗವಿರಬಹುದು ಅಥವಾ ಇದು ಕಳ್ಳರಿಗೆ ಎಚ್ಚರಿಕೆಯಿರಬಹುದು. ಭಿಕ್ಷೆಗಾಗಿ ಬಂದು ಪೀಡಿಸುವ ಜನಗಳಿಗಾಗಿರಬಹುದು ಅಥವಾ ಎಲ್ಲರ ಗಮನವೂ ಈ ಮನೆಕಡೆಗಿದೆ ಎಂಬ ಪ್ರಚಾರ ತಂತ್ರಕ್ಕೋ ಇರಬಹುದು. ಒಟ್ಟಿನಲ್ಲಿ ಇದರ ಹಿಂದಿನ ಮರ್ಮವೇನೋ ತಿಳಿಯದಾಗಿದೆ!

ನಗರಗಳಲ್ಲಿ ವಸ್ತುಗಳನ್ನು ಮಾರುಕಟ್ಟೆಯಲ್ಲಿಟ್ಟು ಮಾರುವಂತೆ ನಾಯಿಗಳನ್ನು ಇಟ್ಟು ಮಾರುವುದನ್ನು ಇಂದು ನೋಡುತ್ತಿದ್ದೇವೆ. ಈ ನಾಯಿಗಳ ಮಾರಾಟದ ಬೆಲೆ ಗಗನ ಮುಟ್ಟುವಂತಿದೆ. ನಾಯಿಗಳ ಬೆಲೆ ನೂರರಿಂದ ಸಾವಿರಾರು ರೂಪಾಯಿಗಳವರೆಗೂ, ಕೊನೆಗೆ ಲಕ್ಷವನ್ನೂ ತಲುಪುವುದಿದೆ. ಇಂದು ನಾಯಿಗಳನ್ನು ಮಾರಾಟ ಮಾಡುವ ದಂಧೆಯೇ ಬೆಳೆದುಕೊಂಡಿದೆ ಎಂದರೆ ಆಶ್ಚರ್ಯಪಡಬೇಕಿಲ್ಲ. ನಾಯಿಗಳನ್ನು ಮಾರುವುದೇ ಒಂದು ಉದ್ಯೋಗವಾಗಿ ಪರಿಣಮಿಸಿದೆ. ನಾಯಿ ಯಾವ ಜಾತಿ ಮತ್ತು ಯಾವ ತಳಿಗಳಿಗೆ ಸಂಬಂಧಿಸಿದೆಯೋ ಅದರ ಮೇಲೆ ಅದರ ಬೆಲೆ ನಿರ್ಧಾರಿತವಾಗುತ್ತದೆ. ಒಟ್ಟಿನಲ್ಲಿ ನಾಯಿಗಳನ್ನು ಕೊಳ್ಳುವ ಮತ್ತು ಮಾರುವ ವ್ಯವಹಾರ ಅವ್ಯಾಹತವಾಗಿ ನಡೆಯುತ್ತಿದೆ.

ನಾಯಿಗಳನ್ನು ಹಣ ಸಂಪಾದನೆಗಾಗಿ, ಜನರಿಗೆ ಮನರಂಜನೆಯನ್ನು ನೀಡಲು, ಉಪಯೋಗಿಸಿಕೊಳ್ಳುತ್ತಿರುವುದನ್ನು ಕಾಣುತ್ತೇವೆ. ಉದಾ : ಚಲನಚಿತ್ರ, ಸರ್ಕಸ್ಸು. ಹಾಗೆಯೇ ಇಂದು ಕೆಲವು ವಸ್ತುಗಳನ್ನು ತಯಾರಿಸಿ ಅವುಗಳ ಮಾರಾಟಕ್ಕೆ ಜಾಹೀರಾತಿನಲ್ಲೂ ನಾಯಿಗಳನ್ನು ಬಳಸಿಕೊಳ್ಳುತ್ತಿರುವುದನ್ನು ದೂರದರ್ಶನಗಳಲ್ಲಿ ನೋಡುತ್ತಿರುತ್ತೇವೆ. ಚಲನಚಿತ್ರಗಳಲ್ಲಿ ನಾಯಿ ನಾಯಕನಷ್ಟೇ ಪ್ರಮುಖ ಪಾತ್ರಧಾರಿಯಾಗಿ ಪಾತ್ರ ನಿರ್ವಹಿಸುವುದು. ಸರ್ಕಸ್ಸಿನಲ್ಲಿ ಸೈಕಲ್ ಹೊಡೆಯಲು, ಬೆಂಕಿಯ ಬಳೆಯಲ್ಲಿ ನುಸುಳಲು ಬಳಸಿಕೊಳ್ಳುವರು. ಹಾಗೆಯೇ ಚಮತ್ಕಾರದ ಆಟಗಳನ್ನಾಡುವುದರಲ್ಲಿಯೂ ಬಳಸಿಕೊಳ್ಳುವರು. ಹೀಗೆ ನಾಯಿಯು ಇನ್ನೊಬ್ಬರಿಗೆ ಹಣ ಸಂಪಾದಿಸಿಕೊಡುವ ಮೂಲವಾಗಿದೆ ಎಂದರೆ ತಪ್ಪಾಗಲಾರದೇನೋ!

ನಾಯಿಯನ್ನು ಕುರಿತು "ಶ್ವಮೇಧ" ಅಥವಾ "ನಾಯನಡತೆ" ಎಂಬುದೊಂದು ರಸವತ್ತಾದ ಕಾವ್ಯವನ್ನು ರಚಿಸಲಾಗಿದೆಯಂತೆ. ಅಲ್ಲದೆ ಕೆಲವು ಕವಿಗಳು,

ದಾಸವರೇಣ್ಯರು ನಾಯಿಯನ್ನು ಕುರಿತು ಹಲವಾರು ಕವನಗಳನ್ನೂ, ಮಕ್ಕಳ ಗೀತೆಗಳನ್ನೂ ರಚಿಸಿದ್ದಾರೆ. ಉದಾ : 'ನಾಯಿಮರಿ' ಕವನ ಬರೆದ ಜಿ.ಪಿ. ರಾಜರತ್ನಂರವರು ನಾಯಿಮರಿ ರಾಜರತ್ನಂ ಎಂದೇ ಪ್ರಸಿದ್ಧರಾಗಿದ್ದಾರೆ. ಹೀಗೆ ಜಿ.ಪಿ. ರಾಜರತ್ನಂ, ಪು.ತಿ. ನರಸಿಂಹಾಚಾರ್ಯರು, ಪುರಂದರದಾಸರು ಮೊದಲಾದವರು ಕವನ ರಚಿಸಿದ್ದಾನೆ ಪ್ರಾಣಿಗಳೆಂದರೆ ಇನ್ನಿಲ್ಲದ ಅಕ್ಕರೆ. ಹೀಗಾಗಿ ನಾಯಿಯ ಗುಣಲಕ್ಷಣಗಳನ್ನು ಕಟ್ಟಿ ಹಾಡಿರುವ ಜಿ.ಪಿ. ರಾಜರತ್ನಂ ಅವರ 'ನಾಯಿ ಮರಿ' ಕವನವಂತೂ ಅತ್ಯಂತ ಪ್ರಸಿದ್ಧವಾದ, ಮಕ್ಕಳ ಬಾಯಲ್ಲಿ ಗುನುಗುಣಿಸುವ ಕವನವಾಗಿದೆ.

ಉದಾ :

'ನಾಯಿ ಮರಿ ನಾಯಿ ಮರಿ ತಿಂಡಿ ಬೇಕೆ?
ತಿಂಡಿ ಬೇಕು ತೀರ್ಥ ಬೇಕು ಎಲ್ಲಾ ಬೇಕು
ನಾಯಿ ಮರಿ ನಿನಗೆ ತಿಂಡಿಯಾಕೆ ಬೇಕು ?
ತಿಂದು ಗಟ್ಟಿಯಾಗಿ ಮನೆಯ ಕಾಯಬೇಕು
ನಾಯಿಮರಿ ನಾಯಿಮರಿ ಕಳ್ಳ ಬಂದರೇನು ಮಾಡುವೆ?
ಲೊಳ್ ಲೊಳ್ ಬೌ ಬೌ ಎಂದು ಕೂಗಿ ಹಾಡುವೆ"

ಪು.ತಿ. ನರಸಿಂಹಾಚಾರ್ಯರು 'ನನ್ನ ನಾಯಿ' ಎಂಬ ಕವನದಲ್ಲಿ ನಾಯಿ ಎಂತಹ ಸ್ನೇಹಮಯಿ, ಪ್ರೇಮಮಯಿ, ವಾತ್ಸಲ್ಯಮಯಿ ಎಂಬುದನ್ನು ತುಂಬಾ ಮಾರ್ಮಿಕವಾಗಿ ವರ್ಣಿಸಿದ್ದಾರೆ.

ಪುರಂದರದಾಸರು ನಾಯಿಯುಪಾಡನ್ನು ಬಹಳ ಸುಂದರವಾಗಿ ವರ್ಣಿಸಿದ್ದಾರೆ.

"ಡೊಂಕು ಬಾಲದ ನಾಯಕರೆ ನೀವೇನೂಟವ ಮಾಡಿದಿರಿ
ಕಣಕ ಕುಟ್ಟೋ ಅಲ್ಲಿಗೆ ಹೋಗಿ । ಹಣಿಕಿ ಇಣಿಕಿ ನೋಡುವಿರಿ
ಕಣಕ ಕುಟ್ಟೋ ಒನಕೆಲಿ ಬಡಿದರೆ ।ಕ್ಯೆಂ ಕುಂಯಿ ರಾಗವ ಮಾಡುವಿರಿ
ಬೀದಿಯಲಿ ಓಡುವಿರಿ । ಕರೆ ಬೂದಿಯಲಿ ಹೊರಳುವಿರಿ
ಪುರಂದರವಿಠಲರಾಯ ಈ ಪರಿಯಾಟದಿ ಸದಾ ಚರಿಸುವಿರಿ"

ಎಂದಿದ್ದಾರೆ ಇದಲ್ಲದೆ.

"ನಾಯಿ ಸಂತೆಗೆ ಹೋಗಿ ನಳಿಗೇಲಿ ಬಡಿಸಿಕೊಂಡಿತು"
"ನಾಯಿ ಹುಣ್ಣಿಮೆಗೆ ಬೂದಿಯೇ ಮದ್ದು"

ಹಾಗೂ,

"ಕಾಯಲಾರೆನು ಕೃಷ್ಣ ಕಂಡವರ ಬಾಗಿಲನು ನಾಯಿಕುನ್ನಿಗಳಂತೆ..."

ಎಂದಿದ್ದಾರೆ ಹಾಗೂ ಇನ್ನೋರ್ವರು.

"ಬೌ ಬೌ ನಾಯಿ ಸಾಕು ಮುಚ್ಚು ಬಾಯಿ" ಎಂದಿದ್ದಾರೆ.

ಬೇಂದ್ರೆಯವರು ತಮ್ಮ ಒಂದು ಪದ್ಯದಲ್ಲಿ,

"ಕರಿಮರಿ ನಾಯಿ ಕುಂಯಿಗುಡುತ್ತಿತ್ತು
ಭಟ್ಟರ ನಾಯಿ ವಟಗುಡುತಿತ್ತು"

ಅತ್ತ ನಾಯಿ ಕುಂಯಿಗುಡುತ್ತಿದ್ದಾಗ, ಇತ್ತ ಮಡಿವಂತಿಕೆಯ ಬಾಯಿ ವಟಗುಡುತ್ತಿತ್ತು. ಚಳಿಯಲ್ಲಿ ನಡುಗುತ್ತಿದ್ದ ನಾಯಿ ಒಳಗೆ ಬಂದರೆ ಸೊಂಟ ಮುರಿದೇನು ಎಂದು ಬಾಯಿ ವಟಗುಟ್ಟಿದ ಬಗೆಯನ್ನು ಬಹಳ ಸೊಗಸಾಗಿ ಬಣ್ಣಿಸಿದ್ದಾರೆ.

ಮನೆಯ ಸಂರಕ್ಷಣೆಗೆ ಹೇಗೋ ಹಾಗೆಯೇ ಊರ ಸಂರಕ್ಷಣೆಗೂ ಒಂದು ನಾಯಿ ಇರಬೇಕು. **"ಊರ ಸಂರಕ್ಷಣೆಗೆ ನಾಯಿ ಇರದಿರಲು ಊರಿಗೊಂದಿರಬೇಕು ಬಾಯ್ಬಡುಕ ಮುದುಕಿ"** ಎಂದು ನಾಯಿಯ ಪಾತ್ರವನ್ನು ಸೂಚ್ಯವಾಗಿ ಹೇಳಿದ್ದಾರೆ. ಇಲ್ಲಿ ಮುಪ್ಪಾದವರನ್ನು ಕುರಿತು ಹೇಳುವಾಗ **"ಬಾಳೋ ಮನೆಗೆ ಒಂದು ಬೊಗಳೋ ನಾಯಿ"** – ಎಂಬ ಮಾತನ್ನು ಹಾಗೂ **"ನಾಯಿ ಬೊಗಳದ ಊರು ಹಾಳೂರು"** ಎಂಬ ಗಾದೆಯನ್ನೂ ಇದು ಧ್ವನಿಸುತ್ತದೆ.

ಡಾ. ಶಿವರುದ್ರಪ್ಪನವರು 'ಮನುಷ್ಯ-ಪ್ರಾಣಿ' ಎಂಬ ತಮ್ಮ ಕವನದಲ್ಲಿ 'ಈಚೀಚೆಗೆ ನನಗೆ ಒಂದೊಂದು ಸಲ ಅನ್ನಿಸುತ್ತದೆ ಮನುಷ್ಯರಿಗಿಂತ ಪ್ರಾಣಿಗಳೇ ವಾಸಿ ಎಂದು. ಏಕೆಂದರೆ "ನಾಯಿಗಳು ಮುಂದೆ ತಿಂದು ಹಿಂದೆ ಬೊಗಳುವುದಿಲ್ಲ. ಕತ್ತೆಗಳು ನೆನಪಿಟ್ಟುಕೊಂಡು ಹಿಂದೆ ಒದೆಯುವುದಿಲ್ಲ." ಇದನ್ನು ನೋಡಿದಾಗ 'ಉಪ್ಪು ಕೊಟ್ಟವರನ್ನು ಮುಪ್ಪಿನ ತನಕ ನೆನೆ' ಎಂಬ ಗಾದೆಯಂತೆ ಉಪಕಾರ ಸ್ಮರಣೆಯಿಲ್ಲದ ಮನುಷ್ಯನಿಗಿಂತ ತುತ್ತು ಅನ್ನದ ಉಪಕಾರ ಸ್ಮರಣೆಯಲ್ಲಿರುವ ನಾಯಿ ಎಷ್ಟೋ ಮೇಲು ಎಂಬುದು ಸತ್ಯವಾದ ಮಾತು.

ಕೈಲಾಸಂ ಅವರ ನಾಗತ್ತೆ ಶ್ರೀಮಂತರ ಮನೆಯ ನಾಯಿಯನ್ನು ಆ ಮನೆಯ ಜವಾನ ಸ್ನಾನ ಮಾಡಿಸಲು ಕರೆದೊಯ್ಯುತ್ತಿರುವುದನ್ನು ಕಂಡು "ಸರಿ, ಇದಕ್ಕೆ ನಿತ್ಯ ಸ್ನಾನ, ಸಂಧ್ಯಾವಂದನೆ ನಡೆಯುತ್ತಿದೆಯಲ್ಲಾ. ಇದಕ್ಕೆ ಉಪನಯನಾನೂ ಆಗಿದೆಯೇನು? ಎಂದು ಪ್ರಶ್ನಿಸುತ್ತಾರೆ. ಅಂದರೆ ನಾಯಿಗೆ ನಡೆಯುತ್ತಿರುವ ಆದರಾತಿಥ್ಯವನ್ನು ಕಂಡು ಅವರಿಗೆ ಸೋಜಿಗವೆನಿಸುತ್ತದೆ.

ಮಲೆನಾಡಿನ ಜಾನಪದರು ನಾಯಿಯನ್ನು ಎಷ್ಟರಮಟ್ಟಿಗೆ ನಂಬಿ ಪ್ರೀತಿಸುತ್ತಿದ್ದರು ಎಂಬುದನ್ನು ಕುವೆಂಪುರವರು ತಮ್ಮ ಕಾದಂಬರಿಗಳಲ್ಲಿ, ಗೀತೆಗಳಲ್ಲಿ ಹಾಗೂ ಗದ್ಯ ಚಿತ್ರಗಳಲ್ಲಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಉದಾ: 'ಕಾನೂರು ಹೆಗ್ಗಡತಿ' ಕಾದಂಬರಿಯಲ್ಲಿ ತನ್ನ ಒಡೆಯನ ಆಜ್ಞೆಯಂತೆ ಧೂರ್ತ ಜಾಕಿಯ

ಮೇಲೆ ಹಾರಿ, ಅದರಿಂದ ಪೆಟ್ಟು ತಿಂದು ಪ್ರಾಣ ಬಿಡುವ 'ಟೈಗರ್' ನಾಯಿ. ಈ ಟೈಗರ್ ನಾಯಿಯನ್ನು ಪ್ರಾಣದಂತೆ ಪ್ರೀತಿಸುತ್ತಿದ್ದ ಹುಟ್ಟು ಬೇಟೆಗಾರರಾದ ಪುಟ್ಟಣ್ಣ (ಕುವೆಂಪು) ಕಿಲಿಸ್ತರ ಜಾಕಿಯನ್ನು ಗುಂಡಿಟ್ಟು ಕೊಲ್ಲಲು ತವಕಿಸುವುದು. ಅದಕ್ಕೆ ಶ್ರದ್ಧಾಭಕ್ತಿಯನ್ನು ಸಲ್ಲಿಸುವುದು, ಸಂತಾಪದಿಂದ ಸಮಾಧಿ ಮಾಡುವುದು, ಪುಟ್ಟವಾಸು ಅದನ್ನು ಅತ್ಯಂತ ಪ್ರೀತಿವಿಶ್ವಾಸದಿಂದ ಸಾಕುತ್ತಿದ್ದುದು ಎಲ್ಲಾ ಜೀವಂತವಾಗಿ ಮೂಡಿಬಂದಿದೆ.

ಹಾಗೆಯೇ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ 'ಹುಲಿಯ' ಎಂಬ ನಾಯಿ ಹೊಲೆಯರ ಆಳು ಗುತ್ತಿಯ ಜೊತೆಯಲ್ಲಿ ಸುತ್ತುತ್ತಿತ್ತು. ಅವನು ಎಲ್ಲಿಗೆ ಹೋದರೂ ಅದು ಅವನ ಜೊತೆ ಬಿಡುತ್ತಿರಲಿಲ್ಲ. ನೆರಳಿನಂತೆ ಅವನನ್ನು ಹಿಂಬಾಲಿಸುತ್ತಿತ್ತು. ಇದರಿಂದಾಗಿ ಆಳು ಗುತ್ತಿಗೆ 'ನಾಯಿ ಗುತ್ತಿ' ಎಂಬ ಅಡ್ಡ ಹೆಸರೇ ಬಂದಿತ್ತು. 'ಗುತ್ತಿಯಿದ್ದಲ್ಲಿ ಹುಲಿಯ, ಹುಲಿಯ ಇದ್ದಲ್ಲಿ ಗುತ್ತಿ' ಎನ್ನುವಷ್ಟರ ಮಟ್ಟಿಗೆ ಇಬ್ಬರಿಗೂ ಅವಿನಾಭಾವ ಸಂಬಂಧವಿದ್ದುದನ್ನು ಕಣ್ಣಿಗೆ ಕಟ್ಟುವಂತೆ ಸುಂದರವಾಗಿ ಚಿತ್ರಿಸಲಾಗಿದೆ. ಹೀಗೆ ಕುವೆಂಪು ಅವರು ಚಿತ್ರಿಸಿದ ನಾಯಿಗಳ ಪ್ರಪಂಚ ವಿಶಿಷ್ಟವಾದುದೂ, ಅದ್ವಿತೀಯವಾದುದೂ ಆಗಿದೆ.

ಬಸವಣ್ಣನವರು ತಮ್ಮ ವಚನದಲ್ಲಿ ಸಂಸಾರ ಸುಖಕ್ಕೆ ಆಸೆ ಪಡುವ ಮನುಷ್ಯನ ಮನಸ್ಸಿನ ಸ್ವಭಾವವನ್ನು 'ತುಪ್ಪದ ಸವಿಗೆ ಅಲಗ ನೆಕ್ಕುವ ನಾಯಿಗೆ' ಹೋಲಿಸಿ ತಮ್ಮ ಮನದ ಈ ಶ್ವಾನಗುಣವನ್ನು ಹೋಗಲಾಡಿಸು ಎಂದು ಕೂಡಲ ಸಂಗಮದೇವನನ್ನು ಹೀಗೆ ಪ್ರಾರ್ಥಿಸಿದ್ದಾರೆ :

"ಒಂದು ಮೊಲಕ್ಕೆ ನಾಯನೊಂಬತ್ತ ಬಿಟ್ಟಂತೆ
ಎನ್ನಬಿಡು, ತನ್ನ ಬಿಡೆಂಬುದು ಕಾಯವಿಕಾರ
.... ಕರಣೇಂದ್ರಿಯಗಳೆಂಬ ಸೊಣಗ
ಮುಟ್ಟದ ಮುನ್ನ ಮನ ನಿಮ್ಮನೆಯ್ದುಗೆ ಕೂಡಲಸಂಗಮದೇವ"

"ತುಪ್ಪದ ಸವಿಗೆ ಅಲಗ ನೆಕ್ಕುವ
ಸೊಣಗನಂತಾಯಿತೆನ್ನ ಬಾಳು
ಸಂಸಾರ ಸಂಗವ ಬಿಡದು ನೋಡೆನ್ನ ಮನವು
ಈ ನಾಯಿಯತನವ ಮಾಣಿಸು ಕೂಡಲ ಸಂಗಮದೇವಾ ನಿಮ್ಮ ಧರ್ಮ

ಎಂದು ದೇವರಲ್ಲಿ ಅಂಗಲಾಚಿ ಮೊರೆಯಿಟ್ಟಿದ್ದಾರೆ. ಹಾಗೆಯೇ.

"ಅಂದಣವನೇರಿದ ಸೊಣಗನಂತೆ"
"ಕಂಡರೆ ಬಿಡದು ತನ್ನ ಮುನ್ನಿನ ಸ್ವಭಾವವನು
.... ಸೆರಗೊಡ್ಡಿ ಬೇಡುವೆ ನಿಮ್ಮ ಧರ್ಮ" ಎನ್ನುವರು.

ಇರುವ ನನ್ನ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವಂತೆ – ಪಲ್ಲಕ್ಕಿಯ

ಮೇಲೆ ಕುಳಿತು ಹೋಗುವ ನಾಯಿಯು ಅಮೇಧ್ಯವನ್ನು ಕಂಡಕೂಡಲೇ ತಾನು ಏರಿದ ಅಂದಣವನ್ನು ಮರೆತು, ತನ್ನ ಹಿಂದಣ ವಾಸನೆಗೆ ಮಾರುಹೋಗಿ ಅಲ್ಲಿಂದ ಧುಮುಕಿ ಅಮೇಧ್ಯವನ್ನು ತಿನ್ನಲು ಹೋಗುವಂತಹ – ಶ್ವಾನಗುಣವನ್ನು ನನ್ನ ಮನಸ್ಸಿನಿಂದ ದೂರೀಕರಿಸು ಎಂದು ಬೇಡಿಕೊಳ್ಳುತ್ತಾರೆ. ಹಾಗೆಯೇ

"ಕನಕದಸಿಂಹಾಸನದೊಳು ಶುನಕನ ಕುಳ್ಳಿರಿಸಿ ಸೇಸೆದಳಿಯಲು ಮತ್ತಂತನು ಕೆರಳಿ ಬಗುಳ್ವುದಲ್ಲದೆ ಘನತೆಯದಕುಂಟೆ ವಿವೇಕ ಚೂಡಾರತ್ನಾ" ಎಂದಿದ್ದಾರೆ.

ಎಂತಹ ಪಂಡಿತನಾದರೂ ಅವನ ಸ್ವಭಾವ ನಾಯಿಗಳಿಗಿಂತಲೂ ಕೀಳಾಗಿರುವುದು ಎಂಬುದನ್ನು ಕೆಲವು ಸುಭಾಷಿತಕಾರರು ಹೀಗೆ ಹೇಳಿದ್ದಾರೆ :

"ಪಂಡಿತಃ ಪಂಡಿತಂ ದೃಷ್ಟ್ವಾ ಶ್ವಾನವದ್ಗುರ್ಗುರಾಯತೇ"

– ಒಬ್ಬ ಪಂಡಿತನನ್ನು ಇನ್ನೊಬ್ಬ ಪಂಡಿತನು ಕಂಡಾಗ ನಾಯಿಯಂತೆ 'ಗುರ್ ಗುರ್' ಎನ್ನುತ್ತಾನಂತೆ. ಏಕೆಂದರೆ ಒಬ್ಬರ ಪಾಂಡಿತ್ಯವನ್ನು ಇನ್ನೊಬ್ಬರು ಸಹಿಸುವುದಿಲ್ಲ. ಅವನು ನನಗಿಂತಲೂ ಮೇಲಾಗುತ್ತಾನೆ ಎಂಬ ಅಸೂಯಾ ಮನೋಧರ್ಮ ಅವರನ್ನು ನಾಯಿಯ ಮಟ್ಟಕ್ಕೆ ಇಳಿಸುತ್ತದೆ.

ಅದೇ ರೀತಿ ಸರ್ವಜ್ಞನೂ ಕೂಡ

"ಆಳು ವನಿತೆಯು ನಾಯಿ
ಕೋಳಿ ಪಂಡಿತ ವೈದ್ಯ
ಗೂಳಿಯು ಟಗರು ಪ್ರತಿರೂಪಕಂಡರೆ
ಕಾಳಗವೆಂದ ಸರ್ವಜ್ಞ" ॥

ಎಂದಿದ್ದಾನೆ. ಇಲ್ಲಿ 'ಜಾತಿಗೆ ಜಾತಿ ವೈರಿ, ನೀರಿಗೆ ಪಾಚಿ ವೈರಿ' ಎಂಬಂತೆ ಪಂಡಿತ – ಪಂಡಿತರನ್ನು, ಹೆಣ್ಣು – ಹೆಣ್ಣನ್ನು – ಹೀಗೆ ಒಬ್ಬರನ್ನು ಕಂಡರೆ ಒಬ್ಬರಿಗೆ ಆಗದೆ ಪ್ರತಿಸ್ಪರ್ಧಿಗಳಂತೆ ಒಬ್ಬರಿಗೊಬ್ಬರು 'ಗುರ್' ಎನ್ನುತ್ತವೆ, ಕಡಿದಾಡಿ ಬಡಿದಾಡುತ್ತವೆ, ಒಂದಕ್ಕೊಂದು ಗುದ್ದಾಡುತ್ತವೆ ಎಂದಿದ್ದಾನೆ.

ಮನುಷ್ಯರು ನಾವು ನ್ಯಾಯವಾಗಿದ್ದೇವೆ ಎಂದುಕೊಂಡರೂ ಸಹ ಅವರೆಲ್ಲಿಯೋ ಒಂದೆಡೆ ಕಾಲು ಜಾರಿ ಅನ್ಯಾಯದ ಮಡುವಿಗೆ ಬಿದ್ದಿರುತ್ತಾರೆ. 'ನ್ಯಾಯವಿಲ್ಲದವ ನಾಯಿಗಿಂತ ಕೀಳು' ಎಂಬಂತೆ ಅವರು ಷಡ್ವೈರಿಗಳಿಗೆ – ಅರಿಷಡ್ವರ್ಗಗಳಿಗೆ – ವಶರಾಗಿ ನಾಯಿ ಹಿಂಡಿನಂತಾಗುತ್ತಾರೆ ಎಂಬುದನ್ನು ಸರ್ವಜ್ಞ ಕವಿ ಹೀಗೆ ವಿವರಿಸಿದ್ದಾನೆ :

"ನ್ಯಾಯದಲಿ ನಡೆಥು ಅನ್ಯಾಯವೇ ಬಂದಿಹುದು
ನಾಯಿಗಳು ಆರು ಇರುವನಕ
ನರರೊಂದು ನಾಯಿ ಹಿಂಡೆಂದ ಸರ್ವಜ್ಞ"

ನಾಯಿಗೂ ಒಂದು ಚರಿತ್ರೆ – ಇತಿಹಾಸವಿದೆ ಎಂದರೆ ನಂಬುತ್ತೀರಾ? ನಂಬಲೇಬೇಕು, ಏಕೆಂದರೆ ನಾಯಿಯೇನು ಸಾಮಾನ್ಯವಾದದ್ದೇ! ಅದು ಅಸಾಧಾರಣ ವ್ಯಕ್ತಿತ್ವದಿಂದ ಕೂಡಿದ್ದಾಗಿದೆ, ಉದಾ :

೧. **'ನಾಕದ ಸುಖ ನಾಯಿಗೆ ತಿಳಿದೀತೆ?' 'ನಾಯಿಯೆತ್ತ ನಾಕವೆತ್ತ'** – ಎಂದು ವಿಸ್ಮಯ ಪಡುವವರಿಗೆ ಧರ್ಮರಾಯ ನಾಕಕ್ಕೆ ನಾಯಿಯ ಪ್ರವೇಶ ದೊರಕಿಸಿಕೊಟ್ಟ ಕಥೆ ಮಹಾಭಾರತದಲ್ಲಿ ಸ್ಮರಣೀಯ. ಹೀಗೆ ತನಗೆ ಮಾರ್ಗದರ್ಶನ ಮಾಡಿದ ನಾಯಿ ಸಹ ನನ್ನೊಂದಿಗೆ ಸ್ವರ್ಗಕ್ಕೆ ಬರಬೇಕೆಂದು ಧರ್ಮರಾಯ ಹಟ ಹಿಡಿದಾಗ ಯಮಧರ್ಮನೇ ಆ ನಾಯಿಯ ರೂಪದಲ್ಲಿ ಧರ್ಮರಾಯ ನೊಡನಿದ್ದ ಎಂಬ ವಿಷಯ ನಮ್ಮ ಮುಂದೆ ಬಿಚ್ಚಿಡುತ್ತದೆ.

೨. ಬೋಧಿಸತ್ವನ ಕಥೆಗಳಲ್ಲಿ ಸಾಮಾನ್ಯ ನಾಯಿಯೊಂದು ಪಟ್ಟದಾನೆಯ ಸ್ನೇಹಮಾಡಿ 'ಪಟ್ಟದ ನಾಯಿ' ಆದ ಕಥೆ ಪ್ರೀತಿ, ವಿಶ್ವಾಸ, ಸ್ನೇಹಗಳ ಪರಾಕಾಷ್ಠೆಗೆ ಮಾದರಿಯಾಗಿದೆ.

೩. ನಾಯಿ ಹರಿಹರರ ಸೂಚಕವೂ, ನಾರಾಯಣನ ಹಾಗೂ ದತ್ತಾತ್ರೇಯನ ಅವತಾರವೂ ಎಂದು ಹೇಳಲಾಗುವ ಕಥೆಗಳೂ ಇವೆ.

೪. ಇಂದೂ ಕೂಡ ನಾಯಿಯನ್ನು ಕಾಲಿನಿಂದ ಒದೆಯಬಾರದೆಂದೂ ಹಾಗೂ ಮನೆಯ ಬಾಗಿಲಿಗೆ ಬಂದು ಅನ್ನಕ್ಕಾಗಿ ಕಾದು ಕುಳಿತ ನಾಯಿಯನ್ನು ಹೊಡೆದಟ್ಟುವುದು ಪಾಪಕರ ಎಂಬ ನಂಬಿಕೆಗಳಿರುವ ಮಾತು ಪ್ರಚಲಿತದಲ್ಲಿರುವುದನ್ನು ಕಾಣಬಹುದಾಗಿದೆ.

೫. ಭೈರವನ ಮತ್ತೊಂದಂಶವಾದ ಭೈರಾನನಿಗೆ ನಾಯಿ ತುಂಬ ಪವಿತ್ರವಾದ ಪ್ರಾಣಿ ಎಂಬ ಕಥೆಯಿದೆ.

೬. ಕಾಶಿಯ ದೇವಾಲಯದಲ್ಲಿ ಮಾತ್ರ ನಾಯಿಗಳಿಗೆ ಪ್ರವೇಶವಿರುವುದು ವಿಶೇಷವಾಗಿದೆ.

೭. ಶಿವನ ಅವತಾರವೆನ್ನುವ ಖಂಡೋಬ ಮರಾಠರ ದೇವರು. ಅವನು ಮಡದಿಯೊಡನೆ ಕುದುರೆಯ ಮೇಲೆ ಕುಳಿತು ಹೋಗುವಾಗ ನಾಯಿಯೊಂದು ತಪ್ಪದೇ ಅವನನ್ನು ಹಿಂಬಾಲಿಸುವ ಕಥೆಯಿದೆ.

೮. ನಾಯಿಗಳು ಯುದ್ಧದಲ್ಲಿಯೂ ನಾನಾ ರೀತಿಯಲ್ಲಿ ಸಹಾಯ ಮಾಡಿರುವುದು ಚರಿತ್ರೆಗಳಿಂದ ತಿಳಿದುಬರುತ್ತದೆ.

೯. ನಾಲ್ಕು ವೇದಗಳನ್ನು ಪ್ರತಿನಿಧಿಸುತ್ತವೆನ್ನುವ ನಾಲ್ಕು ನಾಯಿಗಳು ದತ್ತಾತ್ರೇಯನ ಕಾವಲುಗಾರರಂತೆ.

೧೦. ನೇಪಾಳದ ಕಿಚಾ ಪೂಜೆಯಲ್ಲಿ ಪ್ರತಿಯೊಂದು ನಾಯಿಯ ಕೊರಳಿಗೂ ಹೂಮಾಲೆ ಹಾಕಿ ಪೂಜಿಸುತ್ತಿದ್ದರಂತೆ.

೧೧. ತಮ್ಮ ಮಡದಿ ಸುಟ್ಟ ರೊಟ್ಟಿಯನ್ನು ನಾಯಿಯೊಂದು ಹೊತ್ತುಕೊಂಡು ಹೋಗುವಾಗ ದೇವರೇ ಆ ರೂಪದಲ್ಲಿ ಬಂದದ್ದೆಂದು ಕನಕದಾಸರು ಹೇಳುತ್ತಾರೆ.

ಸಾವಿಲ್ಲದ ಮನೆಯ ಸಾಸಿವೆ ಹೇಗಿಲ್ಲವೋ ಹಾಗೆಯೇ ಗಾದೆಗಳು, ಬೈಗುಳಗಳು, ನುಡಿಗಟ್ಟುಗಳನ್ನು ಆಡದ ಯಾವ ಮನೆಯೂ, ಯಾವ ಜನವೂ ನಮಗೆ ಕಾಣಸಿಗುವುದಿಲ್ಲ ಎಂದರೆ ಅತಿಶಯೋಕ್ತಿಯೇನಲ್ಲ. ಪ್ರತಿ ಮನೆಯಲ್ಲಿಯೂ ಪ್ರತಿಯೊಬ್ಬರೂ ದಿನದಲ್ಲಿ ಒಂದಲ್ಲ ಒಂದು ಬಾರಿಯಾದರೂ ಒಂದಲ್ಲ ಒಂದು ಕಾರಣಕ್ಕೆ ಒಂದು ಬೈಗುಳವನ್ನಾಗಲೀ, ನುಡಿಗಟ್ಟನ್ನಾಗಲೀ, ಗಾದೆಯನ್ನಾಗಲೀ ಹೇಳದಿದ್ದರೆ ಆ ದಿನ ಅವರಿಗೆ ಪೂರ್ಣವಾಗುವುದೇ ಇಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದು!

ಬೈಗುಳ, ನುಡಿಗಟ್ಟು, ಗಾದೆಗಳಿಗೆ ಮನುಷ್ಯ – ಪ್ರಾಣಿ ಎಂಬ ಭೇದವಿರುವುದಿಲ್ಲ. ಪ್ರಾಣಿಗಳ ಹೆಸರಿನಲ್ಲಿ ಮನುಷ್ಯರನ್ನೂ ಮನುಷ್ಯರ ಹೆಸರಿನಲ್ಲಿ ಪ್ರಾಣಿಗಳನ್ನೂ ಬೈಯುವುದುಂಟು. ಬೈಗುಳಗಳನ್ನು ಇಂತಹದ್ದಕ್ಕೇ ಬೈಯಬೇಕೆಂದಿಲ್ಲ, ಕೆಲವರು ಸಿಟ್ಟಿಗೂ ಬೈಯುತ್ತಾರೆ, ಕೆಲವರು ಸಂತೋಷಕ್ಕೂ ಬೈಯುತ್ತಾರೆ, ಕೆಲವರು ಮಕ್ಕಳನ್ನು ಮುದ್ದಾಡುವಾಗಲೂ ಬೈಯುತ್ತಾರೆ, ಗದರಿಸುವಾಗಲೂ ಬೈಯುತ್ತಾರೆ. ಬೈಗುಳಗಳಿಗೆ ಇಂತಹ ಸಮಯದಲ್ಲಿ, ಇಂತಹ ವಿಷಯಕ್ಕೆ, ಇಂತಹ ಸಂದರ್ಭಗಳಿಗೆ ಮಾತ್ರ ಬೈಯಬೇಕೆಂದು ಯಾವ ಕರಾರುಗಳೂ ಇಲ್ಲ, ಯಾವ ಕಟ್ಟುಪಾಡುಗಳೂ ಇಲ್ಲ. ಯಾರು ಯಾವಾಗ ಬೇಕಾದರೂ ಬೈಯಬಹುದು.

ಹೀಗೆ ಬೈಯುವಾಗ 'ನಾಯಿ'ಯನ್ನು ಎಳೆತಂದು ಮನುಷ್ಯನಿಗೆ ಹೋಲಿಸಿ ಅಥವಾ ಮನುಷ್ಯನನ್ನು ನಾಯಿಗೆ ಹೋಲಿಸಿ ಬೈಯುವುದು ಲೋಕಾರೂಢಿಯಾಗಿದೆ.

ಉದಾ :

"ಛೀ ! ನಾಯಿ
ನೀನು ಕಂತ್ರಿ ನಾಯಿ
ನೀನು ನಾಯಿಗಿಂತಲೂ ಕಡೆ
ಅವರು ನಾಯಿಯಂಥ ಜನ
ನಾಯಿ ನನ್ಮಗನೇ
ನಿನ್ನ ಹುಚ್ಚುನಾಯಿ ಅಟ್ಟಾಡಿಸಿಕೊಂಡ ಕಡಿಯ
ನಿನ್ನ ಹೆಣ ನಾಯಿ ತಿಂದು ನೀರು ಕುಡಿಯ
ನಾಯಿಗೆ ಹುಟ್ಟಿದೋನೆ
ನಾಯಿ ಹೆತ್ತಂಗೆ ಹೆತ್ತಿದ್ದೀಯಾ
ನಾಯಿ ಈದಂಗೆ ಈದಿದ್ದೀಯಾ
ನಾಯಿ ಜಾತಿ ನನ್ಮಗನೆ

ನಾಯಿ ತಿರುಗಿದ್ದಂಗೆ ತಿರುಗ್ತೀಯಾ. ನಿಂದೂ ಒಂದು ಬಾಳ!
ನಾಯಿ ಬುದ್ಧಿ ಎಲ್ಲಿ ಬಿಡ್ತೀಯಾ !
ನಾಯಿಹಂಗೆ ಜೊಲ್ಲು ಸುರಿಸ್ತೀಯಲ್ಲೋ
ನಿನ್ನ ನಾಲಿಗೆಗೆ ನಾಯ್ ಹೇಲ್ ಹಾಕಾ!"

ತಂದೆ-ತಾಯಿಗಳು ಬೆವರುಸುರಿಸಿ ದುಡಿದು ಕೂಡಿಟ್ಟ ಹಣವನ್ನು ನೀರಿನಂತೆ ಪೋಲು ಮಾಡಿ ಕಳೆಯುತ್ತಿದ್ದರೆ, ಅಡ್ಡದಾರಿ ಹಿಡಿದರೆ, ಕೆಲಸ ಕಾರ್ಯ ಮಾಡದೆ ಅಲೆಮಾರಿಯಂತೆ ಅಲೆಯುತ್ತಿದ್ದರೆ-ಮಕ್ಕಳನ್ನು ಪ್ರತಿ ಮನೆಯಲ್ಲೂ ಒಂದಲ್ಲ ಒಂದು ಕಾರಣಕ್ಕೆ ಬೈಯ್ಯುವುದು, ಛೀಮಾರಿ ಹಾಕುವುದು, ಬುದ್ಧಿವಾದ ಹೇಳುವುದು ಸಹಜವಾದ ಕ್ರಿಯೆಯಾಗಿದೆ. ಹೀಗೆ ಬೈಯುವಾಗ 'ನಾಯಿ' ಪ್ರಮುಖ ಪಾತ್ರಧಾರಿಯಾಗಿ ಕಾಣಿಸಿಕೊಳ್ಳುತ್ತದೆ. ಹೀಗೆ 'ನಾಯಿ' ಎಂಬ ಪದವನ್ನು ನೀತಿಕೆಟ್ಟವರನ್ನು, ನಡೆ-ನುಡಿ ಸರಿಯಿಲ್ಲದವರನ್ನು ಬಯ್ಯಲು ಬಳಸಲಾಗುತ್ತದೆ. ಈ ಬೈಗುಳಗಳಲ್ಲಿ ಹಾಸ್ಯ, ವಿಡಂಬನೆಗಳೂ ಇರುವುವು.

ನಾಯಿಯ ಬಗೆಗೆ ಕೆಲವು ನಾಣ್ಣುಡಿಗಳೂ, ಜಾಣ್ಣುಡಿಗಳೂ, ಕಟಕಿ, ಮಾತುಗಳೂ ಕಾಲಕಾಲಕ್ಕೆ ಹೇಗೆ ಮೂಡಿ ಬಂದಿವೆ ಎಂಬುದನ್ನು ಗಮನಿಸೋಣ. ಉದಾ :

"ನಾಯಿ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ
ನಾಕದ ಸುಖ ನಾಯಿಗೆ ತಿಳಿದೀತೆ?
ಕನಕದ ಪಾತ್ರೆಯ ಘನತೆಯ ಪ್ರಭೆಗಳು ಶುನಕನ ಮನಸ್ಸಿಗೆ ಹಿಡಿಸೀತೇ?
ನಾಯಿಗೇತಕ್ಕೆ ನವರಸಾನ್ನವು
ನಾಯಿ ತಲೆ ಮೇಲಿನ ಬುತ್ತಿ ಇದ್ದ ಹಾಗೆ
ನಾಯಿ ಮುಟ್ಟಿದ ಮಡಕೆ ಮುಸುರೆಯಾದರೇನು? ಮಡಿಯಾದರೇನು?
ನಾಯಿಯೆತ್ತ? ನಾಗಲೋಕವೆತ್ತ?
ಮೊಂಡನ ಕೊಂದವರಿಲ್ಲ, ನಾಯಿ ತಿಂದವರಿಲ್ಲ
ನಾಯಿಗೆ ನೆರೆ ಬಂದರೆ ಅಜ್ಜ ಅನ್ನಿಸಿಕೊಂಡೀತೆ?
ಕೇಡುಗಾಲಕ್ಕೆ ನಾಯಿಮರಿ ಮೊಟ್ಟೆ ಇಕ್ಕಿತು
ನಾಯಿಗೆ ನಾಯಿ ವೈರಿ, ಜಾತಿಗೆ ಜಾತಿ ವೈರಿ
ನಾಯಿ ಹಸಿದಿತ್ತು ಹಿಟ್ಟು ಹಳಸಿತ್ತು.
ನಾಯಿ ದಂಡಿಗೆ ಮೇಲೆ ಕೂರಿಸಿದರೆ ಹೇಲು ಕಂಡು ಇಳಿಬಿತ್ತು
ಬೊಗಳೋ ನಾಯಿ ಕಚ್ಚಲ್ಲ, ಕಚ್ಚುವ ನಾಯಿ ಬೊಗಳಲ್ಲ.
ಹಡಕಿಗೆ ಮೆಚ್ಚಿದ ಸೊಣಗನಮೃತದ ರುಚಿಯ ಬಲ್ಲುದೆ"
"ಊರ ನಾಯಿಗೆ ಹಿಟ್ಟಿಲ್ಲ, ನರಮನ್ಸನ್ ಬಾಯಿಗೆ ಕಟ್ಟಿಲ್ಲ"

"ಕಮ ಕಾಣದ ನಾಯಿ ಕಪಾಳ ನೆಕ್ಕಿತು."
ಬೆಟ್ಟದ ನಾಯಿಗೆ ಹಾಲೂ ಇಲ್ಲ, ಪೆಟ್ಟೂ ಇಲ್ಲ
'ಬೆಟ್ಟಕ್ಕೆ ನಾಯಿ ಬೊಗಳಿ ಹೊಟ್ಟೆ ಉಬ್ಬಿಸತ್ತಿತಂತೆ
ಹೊರಿಸಿಕೊಂಡು ಹೋದ ನಾಯಿ ಮೊಲನೇನ ಹಿಡಿವುದಯ್ಯ

ನಾಯಿಯ ಗುಣ ಸ್ವಭಾವಗಳನ್ನು ಕೆಲವು ಸಮಯದಲ್ಲಿ ಮನುಷ್ಯರ ನಡವಳಿಕೆ ವ್ಯವಹಾರಕ್ಕೆ ಹೋಲಿಸುವ ಕೆಲವು ಮಾತುಗಳೂ; ನುಡಿಗಟ್ಟುಗಳೂ ಮೂಡಿಬಂದಿವೆ.

ಉದಾ : "ಕೊಟ್ಟ ಸಾಲವ ಕೊಡದವ ನಾಯಿ
ಇಟ್ಟ ಭಾಷೆಯ ತಪ್ಪುವವ ನಾಯಿ
ನ್ಯಾಯವ ಬಿಟ್ಟನ್ಯಾಯವ ಪೇಳುವ ನಾಯಿಗೆ
ನರಕವು ತಪ್ಪೀತೆ ?
ನಮ್ಮ ಪಾಡು ಈಗ ನಾಯಿಪಾಡಾಗಿದೆ
ಈ ನಾಯತನವ ಮಾಣಿಸೋ ಕೂಡಲಸಂಗಮದೇವ
ಕಾಯಲಾರೆನೋ ರಂಗ ಕಂಡವರ ಮನೆಯನ್ನು
ನಾಯಿಕುನ್ನಿಗಳಂತೆ ಪರರ ಪೀಡಿಸುತ

ನಾಯಿಕೊಡೆ, ನಾಯಿಕೆಮ್ಮು, ನಾಯಿ ತುಳಸಿ, ನಾಯಿ ನೇರಳೆ ಮುಂತಾದವು ನಾಯಿ ಹೆಸರಿನ ಸುತ್ತ ಮೂಡಿಬಂದವುಗಳಾಗಿವೆ.

ನಾಯಿಯ ಕೆಲವು ಗುಣ ವಿಶೇಷಗಳು ಉಪಮೆಗಳಾಗಿ, ರೂಪಕಗಳಾಗಿ, ನಾಣ್ಣುಡಿಗಳಾಗಿ ಸಾಹಿತ್ಯ ಪಂಕ್ತಿಗಳಲ್ಲಿ ಸೇರಿಹೋಗಿವೆ.

ಉದಾ :
ಬಾಗಿಲು ಕಾಯುವ ನಾಯಿಯಂತೆ
ನಾಯಿ ಮುಟ್ಟಿದ ಮಡಕೆಯಂತೆ
ಮೊಲನ ಕಂಡ ನಾಯಿಯಂತೆ
ಆನೆ ಕಂಡು ಶ್ವಾನ ಬೊಗಳಿದ ಹಾಗೆ
ನಾಯಿ ಬೊಗಳಿದರೆ ದೇವಲೋಕ ಹಾಳೆ
ಹಾಲು ಕಂಡಲ್ಲಿ ಬೆಕ್ಕು ಕೂಳು ಕಂಡಲ್ಲಿ ನಾಯಿ
ನರರ ಆಟವೋ ನಾಯಿ ಶಾಟವೋ
ನಾಯಿ ಹೆಸರು ಸಂಪ್ಗೆ
ನಾಯಿ ಮುಟ್ಟಿದ ಮಡಕೇನ ನಾಯಿ ಕೊರಳಿಗೇ ಕಟ್ಟು
ಕೊಯ್ದು ಕಾಲಸ್ನು ನಾಯಿ ತಿಂದರೇನು? ನರಿ ತಿಂದರೇನು?
ಹಿಟ್ಟು ಹಳಸಿತ್ತು ನಾಯಿ ಹಸಿದಿತ್ತು
ನಾಯಿ ಹಾಲು ನೈವೇದ್ಯಕ್ಕೆ ಆಗುತ್ತೆ
ನಾಯಿ ಮೊಲೇಲಿ ಹಾಲಿದ್ದಂಗೆ

ನಾಯೀನ ಅಂದಣದ ಮೇಲೆ ಕೂರಿಸಿದರೆ ಹೇಸಿಗೆ ಕಂಡ ಕಡೆ ಧುಮುಕೋದು ಬಿಡಲ್ಲ.
ನೆಕ್ಕೋ ನಾಯಿಗೆ ಲಿಂಗವೇನು? ಪೀಠವೇನು?
ನಾಯಿ ಬಲ್ಲುದೇ ದೇವರ ಜಗುಲಿಯ
ನಾಯಿ ಬಾಲ ನೆಚ್ಚಿ ಹಾಯುವರೇ ಹಳ್ಳವನು
ನಾಯಿ ತನ್ನ ಬಾಲಕ್ಕೆ ನಾರಾಯಣ ಅಂತಿಂತಂತೆ
ನಾಯಿ ಹೊಡೆದ್ಯೋ ನಾತ ಕುಡಿದ್ಯೊ
ನಾಯಿ ತಿಂದು ನೀರು ಕುಡೀತು
ನಾಯಿ ಮೊಲೇಲಿ ನಾಗಂಡುಗ ಹಾಲಿದ್ದರೇನು?
ನಾಯಿಗೆ ಸಲುಗೆ ಕೊಟ್ರೆ ಸಟ್ಟುಗ ಮೂಸಿ ನೋಡ್ತಂತೆ
ನಾಯಿಗೆ ಸಲುಗೆ ಕೊಟ್ರೆ ಮುಕಳಿ ಮೂಸಿ ನೋಡ್ತಂತೆ
ನಾಯಿ ಮುಖದ ರೋಮದಿಂದ ಕ್ಷೌರಿಕನಿಗೇನು ಲಾಭ?
ನಾಯಿ ತಲೆಯ ಮೇಲಣ ಬುತ್ತಿಯ ಹಾಗೆ
ನಾಯಿಗೆ ಹೇಳಿದರೆ ನಾಯಿ ತನ್ನ ಬಾಲಕ್ಕೆ ಹೇಳಿತಂತೆ
ನಾಯಿಯಂಗೆ ನರಳಿ ಕೋಳಿಯಂಗೆ ಕೊರಗ್ದಂಗೆ
ನಾಯಿ ಹುಲ್ಲು ತಿನ್ನೋದಿಲ್ಲ, ಹುಲ್ಲು ತಿನ್ನೋದಕ್ಕೂ ಬಿಡೋದಿಲ್ಲ
ನಾಯಿ ಮುಟ್ಟಿದ ಗಡಿಗೆ ಮುಸುರೆಯಾದರೇನು? ಮಡಿಯಾದರೇನು?
ನಾಯಿ ಬಾಯ್ಗೆ ಕೋಲು ಸಿಕ್ಕಾಕ್ದಾಗೆ
ನಾಯಿಗೆ ಕೆಲಸವಿಲ್ಲ ಕುಂಡ್ರಲಿಕ್ಕೆ ಸಮಯವಿಲ್ಲ
ನಾಯಿಗೆ ನಾರಂಗದ ಉಪ್ಪಿನಕಾಯೇ?
ನಾಯಿ ತಿಂದ ಕಜ್ಜಾಯದ ಹಾಗೆ
ನಾಯಿ ಬಡಿಯಲಿಕ್ಕೆ ಬಣ್ಣದ ಕೋಲೆ
ನಾಯಿ ಬೊಗಳಿ ಪಾಳ್ಯಕ್ಕೆ ಕೇಡು ತಂತು
ನಾಯಿಯ ಬೊಜ್ಜಕ್ಕೆ ಅಮೇಧ್ಯದ ಹೋಳಿಗೆ
ನಾಯಿಯೆತ್ತ? ನಾಕ ಲೋಕವೆತ್ತ?
ನಾಯಿ ಸಂತೆಗೆ ಹೋಗಿ ನಳಿಗೇಲಿ ಬಡಿಸಿಕೊಂಡಿತು
ನಾಯಿ ತಲೆ ಮೇಲಣ ಬುತ್ತಿಯ ಹಾಗೆ
ನಾಗರ ಕಲ್ಲು ಅಂತ ನಾಯಿಗೇನುಗೊತ್ತು
ನಾಯಿಯುಳ್ಳೀ ಪಲ್ಯಕ್ಕೆ ಬೆಳ್ಳುಳ್ಳಿ ಒಗ್ಗರಣೆ
ನಾಯಿ ಕನಸೆಲ್ಲ ಮೂಳೆ
ನಾಯಿಗೆ ಕೆಲಸವಿಲ್ಲ ನಿಲ್ಲೋದಿಕ್ಕೆ ಹೊತ್ತಿಲ್ಲ
ನಾಯಿಗೆ ಚೆಲ್ಲು ಕಾಗೆಗೆ ಕಲ್ಲು
ನಾಯಿಗೆ ಹಿಟ್ಟು ಇಕ್ಕೋಕ್ಕೋಗಿ ಕೈ ಕಡಿಸಿಕೊಂಡಂಗೆ
ಕೂಳು ಕಂಡಲ್ಲಿ ನಾಯಿ
ನಾಯಿ ಬಾಲ ಡೊಂಕು

ನಾಯಿ ಕಂಡು ಬೊಗಳ್ತದೆ ನರಮನಸ ಕಾಣದೆ ಬೊಗಳ್ತಾನೆ
ನಾಯಿ ಕೊತ್ತಿ ಕಚ್ಚಾಡ್ದಂಗೆ
ನಾಯಿ ತಿನ್ನೋಕೆ, ನುಗ್ಗೆಕಾಯಿ ತಾಳದಾನೆ?
ನಾಯಿ ಬಾಯ್ಗೆ ಕೋಲು ಸಿಕ್ಕಾಕ್ದಾಗೆ
ನಾಯಿಗೆ ನರೆ ಬಂದ್ರೆ ಅಜ್ಜ ಅನ್ನಿಸಿಕೊಂಡೀತೆ?
ನಾಯಿ ಸಮುದ್ರಕ್ಕೆ ಹೋದರೂ ನೆಕ್ಕು ನೀರೆ?
ನಾಯಿಗೆ ಮಾಡಿ ನಾತ ಕುಡಿದಂಗೆ
ನಾಯಿ ಬಾಲಕ್ಕೆ ದಬ್ಬೆ ಕಟ್ಟಿದ ಹಾಗೆ
ನಾಯಿ ಬಾಲ ಕಟ್ಟಿ ನೇರ ಮಾಡಲೆಂತು
ನಾಯಿ ಹೆತ್ತು ನಾಡ ಮೇಲೆಸೆಯಿತು.
ನಾಯಿಗೆ ಬಡಿಯೋಕೆ ಬಣ್ಣದ ಬಡಿಗೆ ಬೇಕೆ?
ನಾಯಿಗೆ ಸಿಪ್ಪೆ ತೆಂಗಿನಕಾಯಿ ಸಿಕ್ದಂಗೆ
ನಾಯಿಗೆ ತಿಪ್ಪೆಯೇ ಸ್ವರ್ಗ
ನಾಯಿಗೆ ಹಾಲು ಉಳ್ಳೊಡಾವನೂಟಕ್ಕೆ ಯೋಗ್ಯಂ
ನಾಯಿ ಮೊಲೇಲಿ ಹಾಲಿದ್ರೆ ದೇವರಿಗಿಲ್ಲ, ದಿಂಡ್ರಿಗಿಲ್ಲ
ನಾಯಿ ಬಾಲಕ್ಕೆ ದಬ್ಬೆ ಕಟ್ಟಿದಷ್ಟೇ ಹೊತ್ತು ನೆಟ್ಟಗೆ
ನರನ ಸೊತ್ತು ನಾಯಿ ತಿಂದಿತು
ನಾಯಿ ತಲೇ ಮೇಲಿನ ಬುತ್ತಿ ಏನು ನೆಚ್ಚಿಗೆ
ನಾಯಿ ಕಡಿದ ಕಾಲು ನರಕಕ್ಕೆ ಹೋಗುವತನಕ ನೋವು ತಿನ್ನುವವರ್‍ಯಾರು?
ನಾಯಿಗೆ ಹೊಡೆದ್ಯೋ ನಾತ ಕುಡಿದ್ಯೋ
ನಾಯೀನ ಸಿಂಹಾಸನದ ಮೇಲೆ ಕೂರಿಸಿದ್ರೆ ಮೂಸಿ ನೋಡಿ ಉಚ್ಚೆ ಉಯ್ತಂತೆ
ನಾಯಿ ಸಂಪತ್ತು ಬೂದಿ ಗುಂಡೀಲಿ
ನಡುಮನೇಲಿ ನಾಯಿ ಕುಂತಂಗೆ
ನಾಯಿ ಕಲ್ ಕಂಡ್ರಾವು ಕಾಲೆತ್ತುತ್ತೆ
ನಾಯಿ ಬಿದ್ದುಕೊಂಡಿರುವುದು ಬೂದಿಗುಂಡೀಲಿ ಕಾಣುತ್ತಿರುವುದು ದೇವಲೋಕದ ಕನಸು
ನಾಯಿಗೆ ಹಿಟ್ಟಿಲ್ಲ ತುರುಕಪ್ಪಂಗೆ ಜುಟ್ಟಿಲ್ಲ
ನಾಯಿ ಬೊಗಳದ ಊರು ಹಾಳೂರು
ನಾಯಿಗೆ ಮಾಡಿದರೆ ನಷ್ಟ ದೇವರಿಗೆ ಮಾಡಿದರೆ ದೃಷ್ಟ
ನಾಯಿಗೆ ಹೊಲಸು ತಿಂದಿದ್ದೇ ಆನಂದ, ನರಿಗೆ ಮೋಸ ಮಾಡಿದ್ದೇ ಆನಂದ.
ನ್ಯಾಯವಿಲ್ಲದವ ನಾಯಿಗಿಂತ ಕಡೆ
ನಾಲಿಗೆ ತಪ್ಪಿದವನು ನಾಯಿಗಿಂತ ಕಡೆ
ನಾರುವುದರ ಮೇಲೆ ನಾಯಿ ಹೇತಂತೆ
ಅನ್ನ ಇದ್ದಲ್ಲಿ ನಾಯಿ, ಹುಲ್ಲಿದ್ದಲ್ಲಿ ಹಸು, ಬೆಲ್ಲವಿದ್ದಲ್ಲಿ ಇರುವೆ
ತಾಯಿಕಣ್ಣೋ ನಾಯಿಕಣ್ಣೋ

ತಾಯಿಶಾಪವೋ ನಾಯಿ ಶಾಪವೋ
ತಾಟಗಿತ್ತಿ ತಟ್ಟಾಯಲಿಲ್ಲ, ನಾಯಿ ಮದುವೆ ಆಗಲಿಲ್ಲ
ತೂಗೋಕಲ್ಲಿನ ಮೇಲೆ ನಾಯಿ ಉಚ್ಚೆ ಹುಯ್ದರೆ ತೂಕವೇ ಹೋಯ್ತು?
ನಂದರಾಜನ ಬದುಕು ನಾಯಿ ನರಿ ತಿಂದು ಹೋಯ್ತು
ಬೊಗಳೋ ನಾಯಿ ಹೊಡಿಬ್ಯಾಡ, ತಿಗಳಿತಿಬಾಯಿ ಕೆಣಕಬ್ಯಾಡ
ಸಾಕಿದ ನಾಯಿ ಕಾಲು ಕಚ್ಚಿತು
ಹಿಟ್ಟು ಕಾಣದ ನಾಯಿ ಹೆಂಟೆ ಕಚ್ಚಿದ್ಹಂಗೆ
ಸವಿಕಂಡ ನಾಯಿ ಸಟ್ಟುಗ ನೆಕ್ಕಿತು.

ಗಾದೆಗಳಲ್ಲಿ ವಿಷಯ ಹೆಚ್ಚು ಅಡಗಿರುತ್ತದೆ. ಮಾತು ಸಂಕ್ಷಿಪ್ತವಾಗಿರುತ್ತದೆ.

ಉದಾ : ನಾಯ್ಗೆ ಹಿಟ್ಟಿಲ್ಲ, ನಾರಾಯಣಂಗೆ ಭಿಕ್ಷಿಲ್ಲ
ಅಗಸನ ನಾಯಿ ಹಳ್ಳಾನು ಕಾಯಲಿಲ್ಲ, ಮನೇನೂ ಕಾಯಲಿಲ್ಲ
ಆಡಿದರೆ ಅರಗಿಣಿ ಕಾಡಿದರೆ ಮುದ್‌ನಾಯಿ
ಆನೆಗೆ ಅಂಜಿಕೆಯೇಕೆ? ಶ್ವಾನಂಗೆ ಸೊಬಗೇಕೆ?
ಆನೆಯ ಮೇಲೆ ಪೋಪನ ಶ್ವಾನ ಮುಟ್ಟಬಲ್ಲುದೆ
ಆನೆ ಮೇಲಿದ್ದವನು ಶ್ವಾನ ಕಂಡೋಡುವನೆ
ಈದ ನಾಯಂಗೆ ಆಡ್ತಾಳೆ
ಈದ ಹುಲೀನೂ ಈದ ನಾಯ್ನೂ ಕೆಣಕಬಾರದು
ಉನ್ನತ ಗಜವೇರಿ ಬಂದವನು ನಾಯಿಗಂಜುವನೆ
ಎತ್ತಾಡಿದ ನಾಯಿ ಮೊಲ ಕಚ್ಚೀತೇ
ಎಷ್ಟು ನೀವಿದರೂ ನಾಯಿ ಬಾಲ ಡೊಂಕು
ಕೇಡುಗಾಲಕ್ಕೆ ನಾಯಿ ಮೊಟ್ಟೆ ಇಕ್ಕಿತು
ಏನೂ ಅರಿಯದವ ಶ್ವಾನಕ್ಕಿಂತ ಕಡೆ
ನಾಕದ ಸುಖ ನಾಯಿಗೆ ತಿಳಿದೀತೆ?
ನಾಗಸ್ವರ ಊದಿದರೆ ನಾಯಿ ಆಡೀತೇ?
ನೆಂಟರ ಮನೆಗೆ ನಾಯಿ ಹೊಕ್ಕರೆ ಎಂಟು ಊರಿಗೆ ಬೆರಕೆ
ಬಾಲಸನ್ಯಾಸಿ ಕೆಟ್ಟರೆ ಕೂಳ ನಾಯಿಗಿಂತ ಕಡೆ
ಮಟ್ಟು ತಿಳಿದ ನಾಯಿ ಹಟ್ಟಿಲಿದ್ದೀತೇ?
ಏಳೋದು ಏಳು ಮಧ್ಯಾಹ್ನ ನೋಡೋದು ನಾಯಿ ಮುಖ
ಒಕ್ಕುವುದು ರೈತನ ಗುಣ, ನೆಕ್ಕುವುದು ನಾಯಿಗುಣ
ಓಡೋ ನಾಯಿ ಕಂಡ್ರೆ ಅಟ್ಟೋ ನಾಯಿಗೆ ಸದರ
ಸಾಕಿದ ನಾಯಿ ಮೊಲ ಹಿಡಿದೀತೆ?
ಒಂದು ಮೊಲಕ್ಕೆ ಒಂಬತ್ತು ನಾಯಿ ಕರೆದಂತೆ
ಕಜ್ಜಿ ನಾಯಿಗೆ ಕಜ್ಜಾಯ ಏಕೆ?

ಕಟ್ಟಿ ಹಾಕಿದ ನಾಯಿ ಮೊಲ ಹಿಡಿದೀತೆ?
ನರರಾಟ್ವೊ ನಾಯ್ ಶ್ಯಾಟ್ವೊ
ನಾಯಿ ಆಯ್ದುಕೊಂಡು ತಿಂದೇನು ಅನ್ನುತ್ತೆ ಬೆಕ್ಕು ಕಸಗೊಂಡು ತಿಂದೇನು ಅನ್ನುತ್ತೆ
ನಾಯ್ ಸಂಗ ಸ್ಯಾಲ್‌ಗೇಡು
ಬಾಳೋ ಮನೆಗೊಂದು ಬೊಗಳೊ ನಾಯಿ
ನಾನೆದ್ದು ಬಗುಳೋಕೆ ನಾಯಾಕೆ ಸಾಕಬೇಕು?
ನಾಯಾದರೂ ತಾಯಿ, ನೀರಾದರೂ ಮಜ್ಜಿಗೆ
ನಾಯಿ ಹೆತ್ತು ನಡು ನೀರಿಗೆ ಹಾಕಿದ್ದಂಗೆ
ನಾಯಿ ಹೇಲು ಮೂರು ತುಂಡು
ನಾಯಿ ಹೆತ್ತಂಗೆ ಹೆತ್ತೌಳೆ
ನಾಯಿ ಹುಟ್ಟಿದಂಗೆ ಹುಟ್ಟಾವೆ
ರೊಟ್ಟಿಗೆ ಬಂದ ನಾಯಿ ತುಪ್ಪಕ್ಕೆ ಬಂದೀತೇ?"

ಕೆಲವು ನಂಬಿಕೆಗಳು ಜನರನ್ನು ದಾರಿತಪ್ಪದಂತೆ ರಕ್ಷಿಸಿಕೊಂಡು ಬರುತ್ತವೆ. ಇಂದಿನ ಎಲ್ಲಾ ಸಂಪ್ರದಾಯಗಳ ಉಳಿವಿಗೂ ಈ ನಂಬಿಕೆಗಳೇ ಕಾರಣ. ಬಹುತೇಕ ನಂಬಿಕೆಗಳು ಆತ್ಮವಿಶ್ವಾಸವನ್ನು ಮೂಡಿಸಬಲ್ಲವು. ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದಿದ್ದರೂ ನಂಬಿಕೆಗಳು ನಂಬಿಕೆಗಳಾಗಿಯೇ ಇನ್ನೂ ಉಳಿದುಕೊಂಡು ಬಂದಿವೆ. ಕೆಲವು ನಂಬಿಕೆಗಳಂತೂ ವೈಜ್ಞಾನಿಕ ಹಿನ್ನೆಲೆಯಿಂದಲೂ ಮಹತ್ವ ವಾದವುಗಳಾಗಿವೆ. ನಂಬಿಕೆಗಳಲ್ಲಿ ಹಲವು ಬಗೆಗಳಿವೆ. ಉದಾ : ಕೆಲವು ವಾಸ್ತವತೆಯ ನೆಲೆಗಟ್ಟಿನ ಮೇಲೆ ನಿಂತ ನಂಬಿಕೆಗಳು. ಮತ್ತೆ ಕೆಲವು ಬದುಕಿಗೆ ತಾರ್ಕಿಕ ನೆಮ್ಮದಿಯನ್ನು ಕೊಡುವ ಭಾವನಾತ್ಮಕ ನಂಬಿಕೆಗಳು. ಇನ್ನೂ ಕೆಲವು ನಂಬಿಕೆಗಳು ಬದುಕು ಸುಭದ್ರವಾಗಿರಲೆಂಬ ಹಿನ್ನೆಲೆಯಲ್ಲಿ ಸೃಷ್ಟಿಗೊಂಡವುಗಳಾಗಿವೆ.

ನಂಬಿಕೆಗಳು ಎಂದಾಕ್ಷಣ ಅವೆಲ್ಲ ಮೂಢನಂಬಿಕೆಗಳೇ ಎಂದು ತೀರ್ಮಾನಿಸಲಾಗುವುದಿಲ್ಲ. ಹಾಗೆಂದು ಅವುಗಳನ್ನು ತಿರಸ್ಕರಿಸಲೂ ಆಗುವುದಿಲ್ಲ. ಹೀಗಾಗಿ ಮಾನವನ ಬಾಳಿನೊಡನೆ ಅತಿ ನಿಕಟವಾಗಿ ಬೆರೆತುಕೊಂಡಿರುವ ನಾಯಿಯ ಬಗೆಗೆ ಅನೇಕ ನಂಬಿಕೆಗಳೂ ಹುಟ್ಟಿಕೊಂಡಿರುವುದು ಸಹಜವೇ ಆಗಿದೆ.

ಉದಾ:

ನಾಯಿ ಎಂಜಲು ತಿನ್ನಬಾರದು
ಆಳು ನಂಬುವುದಕ್ಕಿಂತ ಒಂದು ನಾಯಿ ನಂಬು
ನಾಯಿ [illegible]
ನಾಯಿ ತಾಯಿಗೆ ಸಮ
ನಾಯಿಗಿರೋ ನಿಯತ್ತು ನರನಿಗಿಲ್ಲ

ನಾಯಿ ಕೊಂದ ಪಾಪ ತಾಯಿ ಕೊಂದ ಪಾಪಕ್ಕೆ ಸಮ
ನಾಯಿ ಮರಿ ಹಾಕಿದಾಗ ಒಂದನ್ನು ತಿಂದುಕೊಳ್ಳುತ್ತದೆ
ನಾಯಿ ಬೊಳ್ಳಾಕಿದರೆ ಕೇಡು ಖಂಡಿತ
ನಾಯಿ ಹುಣ್ಣಿಗೆ ಬೂದಿ ಮದ್ದು
ನಾಯಿ ಮೇಲಿರೋ ಪ್ರೀತಿ ತಾಯಿ ಮೇಲಿಲ್ಲ

ಮದುವೆಯಾಗಲಿರುವ ಗಂಡು-ಹೆಣ್ಣುಗಳ ನಡುವೆ ನಾಯಿ ಓಡಿ ಹೋದದ್ದಾದರೆ ಅವರಿಗೆ ಮುಂದೆ ದುರದೃಷ್ಟ ಕಾದಿರುತ್ತದೆಂಬುದು ಆಂಗ್ಲರ ನಂಬಿಕೆ.

ನಾಯಿ ತೋಟದಲ್ಲಿ ಬಿಲ ತೋಡಿದರೆ ತೋಟದ ಮಾಲೀಕನ ಕುಟುಂಬದಲ್ಲಿ ಸಾವು ಖಂಡಿತ ಎಂಬ ನಂಬಿಕೆಯಿದೆ.

ಪರಿಚಯವಿಲ್ಲದ ನಾಯಿ ಹಿಂಬಾಲಿಸಿದರೆ ಶುಭ ಹಾಗೂ ನಾಯಿ ಅತ್ತರೆ ಅಶುಭ, ಸಾವು ತಪ್ಪಿದ್ದಲ್ಲ ಎಂಬ ನಂಬಿಕೆ.

ಬೆಳಗ್ಗೆ ಎದ್ದ ಕೂಡಲೇ ಬೊಗಳುವ ನಾಯಿಯನ್ನು ಕಾಣುವುದು ಒಳ್ಳೆಯದಲ್ಲ ಎಂಬ ನಂಬಿಕೆ.

ಕೆಲವು ಬಾರಿ ನಾಯಿಯು ಮನುಷ್ಯನ, ರೋಗಗಳಿಗೆ ಪರಿಹಾರ ಔಷಧವೂ ಆಗುತ್ತಿತ್ತಂತೆ. ಉದಾ: ನಾಯಿಹಲ್ಲು. ಇದು ಮಾಂತ್ರಿಕ ಶಕ್ತಿಯನ್ನು ಹೊಂದಿರುವ ಅಂಗವಾಗಿದೆ ಎಂಬ ನಂಬಿಕೆ. ಹಾಗೆಯೇ ಚಿಕ್ಕ ಮಕ್ಕಳ ಹಟ, ಚಿಟ್ಟು, ಸಣ್ಣ ಪುಟ್ಟ ರೋಗಗಳ ರಕ್ಷಣಾರ್ಥವಾಗಿಯೂ ನಾಯಿಹಲ್ಲನ್ನು ಮಕ್ಕಳ ಕುತ್ತಿಗೆಗೆ, ಸೊಂಟದ ಉಡಿದಾರಕ್ಕೆ ಕಟ್ಟುತ್ತಾರೆ. ಇದರಲ್ಲಿ ಪ್ರಬಲವಾದ ಒಂದು ಮಾಂತ್ರಿಕ ಶಕ್ತಿ ಇದೆ ಎಂದು ಜನ ನಂಬಿದ್ದಾರೆ. ಈ ನಂಬಿಕೆ ಸುಳ್ಳೋ ನಿಜವೋ ತಿಳಿಯದು!

ಅಮಾವಾಸ್ಯೆ, ಹುಣ್ಣಿಮೆಗಳಲ್ಲಿ ಭೂತಪ್ರೇತಗಳ ಸಂಚಾರ ನಾಯಿಗಳ ಕಣ್ಣಿಗೆ ಕಾಣುತ್ತದೆಯಂತೆ. ಆದ್ದರಿಂದ ಅವುಗಳು ವಿಲಕ್ಷಣವಾಗಿ ಕೂಗಿಕೊಳ್ಳುತ್ತವೆ ಎಂದು ಹೇಳುತ್ತಾರೆ.

ನಾಯಿಯ ಬಗೆಗೆ ನಂಬಿಕೆಗಳೇ ಅಲ್ಲದೆ ನುಡಿಗಟ್ಟುಗಳೂ ಬಳಕೆಗೆ ಬಂದಿವೆ. ಉದಾ :

ನಾಯಿ ಬುದ್ಧಿ
ನಾಯ್ ತೀಟೆ
ನಾಯ್ಗೆ ಬಡ್ದಂಗೆ ಬಡೀತೀನಿ
ನಾಯ್ ಏಳ್ದಂಗೆ
ನಾಯ್ಹೆತ್ತು ನಾಡ್ಮೇಲೆ ಎಸ್ದಂಗೆ

ನಾಯಿ ಕೆಮ್ಮು
ಕಾಳನಾಯಿಗೊಂದು ಮೂಳನಾಯಿ
ನಾಯಿ ನೆಕ್ಕಿದಂಗೆ ನೆಕ್ಕು
ನಾಯಿ ನನ್ ಮಕ್ಕಳು

ಒಗಟಿನಲ್ಲಿಯೂ ನಾಯಿಯ ಚಿತ್ರಣವಿದೆ.

ಉದಾ : "ಒಣ್ಯಾಗಿರ ವಜೀರ"

ಪ್ರಾಣಿಗಳ ನಡುವೆ ಬೆಳೆದ ಮಾನವ ತನ್ನ ಗುಣಗಳನ್ನು ಅವುಗಳಿಗೂ ಆರೋಪಿಸಿದ್ದಾನೆ. ಹೀಗೆ ಮಾನವನ ನಿತ್ಯ ಜೀವನದಲ್ಲಿ ಕಾಣುವ ಗುಣ, ಸ್ವಭಾವ, ನಡೆ-ನುಡಿ, ಮಾಡುವ ಒಳಿತು ಕೆಡುಕುಗಳನ್ನು ನಾಯಿಯ ಸ್ವಭಾವಕ್ಕೆ ಹೋಲಿಸಿದಂತಹ ನಿಂದನೆಗಳು, ನಾಣ್ಣುಡಿಗಳು, ಬಯ್ಗುಳಗಳು, ಗಾದೆಗಳು, ವಚನಗಳು ಒಬ್ಬರಿಂದ ಒಬ್ಬರಿಗೆ ಹರಡುತ್ತ ಲೋಕಾರೂಢಿಗಳಂತೆ ಜೀವಂತವಾಗಿ ಉಳಿದುಕೊಂಡು ಬಂದಿವೆ. ಅಂತಹವುಗಳ ಬಗೆಗೆ ಒಂದು ಇಣುಕು ನೋಟ ಬೀರೋಣ.

೧. **ಕಂತ್ರಿನಾಯಿ** : ಆಂಗ್ಲರು ನಮ್ಮ ದೇಶವನ್ನು ಆಳುತ್ತಿದ್ದಾಗ ಒಳ್ಳೆಯ ತಳಿಯ ನಾಯಿಗಳನ್ನು 'ಜಾತಿ ನಾಯಿ'ಗಳೆಂದೂ, ನಮ್ಮ ದೇಶದ ನಾಯಿಗಳು ಒಳ್ಳೆಯ ತಳಿಯ ನಾಯಿಗಳಲ್ಲವೆಂದು ತಿಳಿದು ಅವುಗಳನ್ನು 'ಕಂಟ್ರಿಡಾಗ್ಸ್' (country dogs) ಎಂದೂ ಕರೆದರು. ಈ ಕಂಟ್ರಿಡಾಗ್ಸ್ ಎಂಬ ಪದ ಕ್ರಮೇಣ ಬಾಯಿಂದ ಬಾಯಿಗೆ ಹರಡುತ್ತಾ 'ಕಂಟ್ರಿ' ಎನ್ನುವುದು 'ಕಂತ್ರಿ'ಯಾಗಿ ಪರಿವರ್ತಿತವಾಯಿತು. ಹೀಗೆ ಕಂಟ್ರಿ ಡಾಗ್ಸ್ 'ಕಂತ್ರಿ ನಾಯಿ' ಯೆಂದು ರೂಪಾಂತರಗೊಂಡಿತು. ಈ 'ಕಂತ್ರಿ' ಎಂಬ ಶಬ್ದವು ನಾಯಿಗಳಿಂದ ಜಾರಿ ಮಾನವನನ್ನು ಬೈಯುವ ಒಂದು ಸಾಮಾನ್ಯ ನಿಂದನೆಯ ಶಬ್ದವಾಗಿ ಪರಿಣಮಿಸಿದೆ.

೨. **ನಾಯಿ ಬಾಲ ಡೊಂಕು** : ಜೀವನದಲ್ಲಿ ಪ್ರತಿಯೊಬ್ಬರೂ ತಪ್ಪು ಮಾಡುವುದು ಸಹಜ. 'ನಡೆವರೆಡಹದೆ ಕುಳಿತವರೆಡಹುವರೆ' ಎಂಬಂತೆ ತಪ್ಪು ಮಾಡದೇ ಇರುವವರು ಯಾರೂ ಇಲ್ಲ. ಆದರೆ ಆ ತಪ್ಪನ್ನು ತಿಳಿಯ ಹೇಳಿದಾಗ ತಿದ್ದಿಕೊಂಡು ಮುಂದೆ ಆ ತಪ್ಪು ಪುನರಾವರ್ತನೆಯಾಗದಂತೆ ನೋಡಿಕೊಳ್ಳುವುದು ಬುದ್ಧಿವಂತರ ಲಕ್ಷಣ. ಆದರೆ ಎಷ್ಟೋ ಜನರು ಎಷ್ಟೇ ಬುದ್ಧಿ ಹೇಳಿದರೂ ಅದನ್ನು ಅರಿತುಕೊಳ್ಳದೆ ಮಾಡಿದ್ದೇ, ಮಾಡುತ್ತಿದ್ದರೆ ಅಂತಹವರನ್ನು ಕಂಡು 'ನಾಯಿ ಬಾಲ ಡೊಂಕು', 'ನಾಯಿ ಬಾಲಕ್ಕೆ ದಬ್ಬೆ ಕಟ್ಟಿದ ಹಾಗೆ' ಎಂಬ ಮಾತಿನಿಂದ ಚುಚ್ಚುವರು. ಹೀಗೆ ಮಾನವನ ಸ್ವಭಾವವನ್ನು ಟೀಕಿಸುವಾಗ ಅವನ ದುರ್ಗುಣವನ್ನು ಸರಿಪಡಿಸಲಾಗದೇ ಹೋದ ಸಂದರ್ಭದಲ್ಲಿ ನಾಯಿಯ ಬಾಲದ ಡೊಂಕನ್ನು ಉತ್ತಮ ನಿದರ್ಶನವನ್ನಾಗಿ

ಬಳಸಿಕೊಳ್ಳಲಾಗಿದೆ. ಬಾಲಕ್ಕೆ ದಬ್ಬೆ ಕಟ್ಟಿದ್ದಾಗ ಬಾಲ ನೆಟ್ಟಗೇ ನಿಂತಿರುತ್ತದೆ. ಬಾಲ ನೆಟ್ಟಗಾಗಿದೆಯಲ್ಲ ಇನ್ನೇನು ಎಂದು ದಬ್ಬೆ ಬಿಚ್ಚಿದ ಕೂಡಲೇ ಬಾಲ ಮತ್ತೆ ಮೊದಲಿನಂತೆ ಡೊಂಕಾಗುತ್ತದೆ. ಅಂದರೆ ಏನು ಮಾಡಿದ್ರೂ ತಿದ್ದಲಾಗದವರನ್ನು ಉದ್ದೇಶಿಸಿ ಮೂಡಿಬಂದಿರುವ ಪ್ರಚಲಿತದಲ್ಲಿರುವ ನಾಣ್ಣುಡಿಯಾಗಿದೆ ಇದು. ಈ ಮಾತಿಗೆ ಎಂ.ಆರ್. ಶ್ರೀನಿವಾಸ ಮೂರ್ತಿಯವರು ಬರೆದ 'ರಂಗಣ್ಣನ ಕನಸಿನ ದಿನಗಳಲ್ಲಿ' – ಉಪಾಧ್ಯಾಯರ ಸಭೆಯೊಂದರಲ್ಲಿ ಹೇಳಿದ ಕತೆಯೊಂದು ಇಲ್ಲಿ ನೆನಪಿಗೆ ಬರುತ್ತಿದೆ. ಉದಾ : ಒಮ್ಮೆ ತ್ರಿಮೂರ್ತಿಗಳಲ್ಲಿ ಲೋಕನಾಯಕ ಯಾರು ಎಂಬ ಪ್ರಶ್ನೆ ಬಂದಾಗ ಮೂವರಿಗೂ ನಾನು, ನಾನು, ನಾನು ಎಂದು ದೊಡ್ಡ ಜಗಳ ಹತ್ತಿತು. ಆಗ ನಾರದರು ಮಧ್ಯೆ ಪ್ರವೇಶಿಸಿ ನಿಮ್ಮ ಶಕ್ತಿಯನ್ನು ಪರೀಕ್ಷೆ ಮಾಡುತ್ತೇನೆ. ನೀವು ಮೂವರೂ ಒಂದೊಂದು ಕೆಲಸವನ್ನು ಮಾಡಬೇಕು. ಅದೇನೆಂದರೆ,

ಉದಾ : ೧. ನಾಯಿ ಬಾಲದ ಡೊಂಕನ್ನು ಸರಿಪಡಿಸಬೇಕು.

೨. ಇಲ್ಲವಾದರೆ ಮೇಷ್ಟ್ರ ಬುದ್ಧಿಯ ಡೊಂಕನ್ನು ಸರಿಪಡಿಸಬೇಕು.

೩. ಅದೂ ಇಲ್ಲವಾದರೆ ಹಳ್ಳಿಯವರ ಹಠದ ಡೊಂಕನ್ನು ಸರಿಪಡಿಸಬೇಕು. ಇವುಗಳಲ್ಲಿ ಯಾವುದಾದರೊಂದನ್ನು ಮಾಡಿದರೂ ಅವರನ್ನು ದೇವತಾ ಸಾರ್ವಭೌಮರೆಂದು ನಾವು ಒಪ್ಪಿಕೊಳ್ಳುತ್ತೇವೆ" ಎಂದರು. ಆಗ ವಿಷ್ಣುವು 'ಮೇಷ್ಟ್ರ ಡೊಂಕನ್ನು ಎದುರಿಗಿದ್ದಷ್ಟು ಕಾಲ ತಿದ್ದಬಹುದು. ಆಮೇಲೆ ಎಂದಿನಂತೆಯೇ ಡೊಂಕು' ಎಂದ, ಮಹೇಶ್ವರನು 'ಹಳ್ಳಿಯವರದು ಹಲವಾರು ಡೊಂಕುಗಳು. ಒಂದು ಕಡೆ ಒಂದನ್ನು ಸರಿ ಮಾಡಿದರೆ ಮತ್ತೊಂದು ಕಡೆ ಬೇರೊಂದು ಎದ್ದುಕೊಳ್ಳುತ್ತದೆ. ಅವರನ್ನು ಸರಿಪಡಿಸಲಾಗುವುದಿಲ್ಲ' ಎಂದನು. ಆದರೆ ಬ್ರಹ್ಮ ಜಂಬದಿಂದ ಕಂಕುಳಲ್ಲಿದ್ದ ನಾಯಿಮರಿಯನ್ನು ತೋರಿ 'ಇದರ ಬಾಲ ನೆಟ್ಟಗಿದೆ' ಎಂದ. ಆಗ ನಾರದರು ನಾಯಿಯ ಬಾಲವನ್ನು ಸವರಲು ಅದರ ಕೆಳಗೆ ಕಟ್ಟಿದ್ದ ಕಂಬಿ ಸಿಕ್ಕಿತು. ನಾರದರು ಅದನ್ನು ತೆಗೆದಕೂಡಲೇ ಮತ್ತೆ ನಾಯಿಯ ಬಾಲ ಡೊಂಕಾಯಿತು. ಅದು "ನಾಯಿ ಬಾಲ ನಳಿಗೆಯಲ್ಲಿ ಹಾಕಿದರೆ ಡೊಂಕು ಬಿಟ್ಟೀತೇ?" 'ನಾಯಿ ಬಾಲಕ್ಕೆ ದಬ್ಬೆ ಕಟ್ಟಿದ ಹಾಗೆ' ಎನ್ನುವ ನಾಣ್ಣುಡಿಯನ್ನು ನೆನಪಿಸಿತ್ತು. ಹೀಗಾಗಿ ತ್ರಿಮೂರ್ತಿಗಳ ಜಗಳ ಅಲ್ಲಿಗೇ ನಿಂತಿತು.

ನಾಯಿಯ ಬಾಲವನ್ನು ಕತ್ತರಿಸಿದರೆ ಅದು ಕುದುರೆಯೂ ಆಗುವುದಿಲ್ಲ, ಕತ್ತೆಯೂ ಆಗುವುದಿಲ್ಲ. ನಾಯಿ ನಾಯಿಯೇ ಎಂಬ ಉದಾಹರಣೆಗೆ ವ್ಯಾಕರಣ ಮಹಾಭಾಷ್ಯದಲ್ಲಿ ಇದೆ.

ನಾಯಿ ಬಾಲವನ್ನು ಕುರಿತು ಹೇಳುವಾಗ ಇಂಗ್ಲಿಷಿನಲ್ಲಿ ಒಂದು ಹಳೆಯ ಮಾತಿದೆ. "ನಾಯಿ ಬಾಲವನ್ನು ಆಡಿಸಬೇಕೇ ಹೊರತು; ಬಾಲ ನಾಯಿಯನ್ನು ಆಡಿಸಬಾರದು. – ಅಂದರೆ ಮನುಷ್ಯರು ಯೋಚಿಸಿ ನಾಲಿಗೆ ನುಡಿಯುವಂತೆ ಮಾತಾಡಬೇಕೆ? ಹೊರತು ನಾಲಿಗೆಯೇ ಯೋಚನೆಯ ಒಡೆಯನಾಗಬಾರದು" ಎಂದು ಹೇಳುವ ಸಂದರ್ಭದಲ್ಲಿ ಈ ಹೋಲಿಕೆ ಧ್ವನಿಪೂರ್ಣವಾಗಿದೆ.

ಆದರೆ ನಾಯಿ ಬಾಲದ ಡೊಂಕು ನಾಯಿಯ ದೇಹದ ಮಾಟಕ್ಕೆ ಒಂದು ರೀತಿಯ ಗುಣವೇ ಹೊರತು ದೋಷವಲ್ಲ. ಇತರ ಪ್ರಾಣಿಗಳ ಬಾಲದಂತೆ ಕೆಳಕ್ಕೆ ಬೀಳದೆ, ಕೆಳಗಿಳಿದು ಮೇಲೆದ್ದಿರುವ ಅದರ ವಿನ್ಯಾಸ ಒಂದು ವಿಧವಾದ ಸೌಂದರ್ಯ ಕೊಟ್ಟಿದೆಯೆಂದರೆ ತಪ್ಪಾಗಲಾರದು. ನಾಯಿ ಮಲಗಿರುವಾಗ ಒಂದನ್ನು ಬಿಟ್ಟು ನಡೆವಾಗ, ನಿಂತಾಗ ಓಡುವಾಗಿನ ರೀತಿಯೇ ಬೇರೆ. ಹೀಗೆ ತಿದ್ದಲಾಗದ ನಾಯಿಯ ಬಾಲದ ಡೊಂಕು, ದುರ್ಗುಣಕ್ಕೆ ಒಂದು ಉತ್ತಮ ನಿದರ್ಶನವಾಗಿದ್ದರೂ ಸಹಾ ನಾಯಿಯ ಮಟ್ಟಿಗೆ ಮಾತ್ರ ಅದರ ಬಾಲದ ಡೊಂಕೇ ಅದಕ್ಕೆ ಭೂಷಣವಾಗಿದೆ ಎನ್ನಬಹುದು.

೩. ಕಚ್ಚೋ ನಾಯಿ ಬೊಗಳುವುದಿಲ್ಲ, ಬೊಗಳೋ ನಾಯಿ ಕಚ್ಚುವುದಿಲ್ಲ : 'ಅಲಲಾ ಅನ್ನೋ ಆಲದ ಮರ ನಂಬಬಹುದು, ಮೆತ್ತಗಿರೋ ಕಳ್ಳಿಗಿಡ ನಂಬಬಾರದು' ಎನ್ನುವ ಗಾದೆಯಂತೆ ಕೆಲವು ಜನರು ಎಲ್ಲವನ್ನೂ ತಿಳಿದರೂ ಏನೂ ತಿಳಿಯದವರಂತೆ ಏನೂ ಮಾತನಾಡದೆ ಮೌನವಾಗಿ ಮಳ್ಳರ ರೀತಿಯಲ್ಲಿ ಇರುತ್ತಾರೆ. ಇಂತಹವರ ಮನಸ್ಸು ಸದಾ ಕಶ್ಮಲವಾಗಿರುತ್ತದೆ. ರಾಡಿಯಾಗಿರುತ್ತದೆ. ಇಂತಹವರು ಯಾವ ರೀತಿ ಕೇಡನ್ನು ಬಗೆಯಬಹುದೆಂಬ ಆಲೋಚನೆಯಲ್ಲಿ ಮಗ್ನರಾಗಿರುತ್ತಾರೆ. ಮತ್ತೆ ಕೆಲವರಿರುತ್ತಾರೆ. ಅವರು ಮೌನವಾಗಿರುವುದಿಲ್ಲ. ಎಲ್ಲದಕ್ಕೂ ಮೂಗುತೂರಿಸಿಕೊಂಡು ಬರುತ್ತಾರೆ. ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತಾರೆ. ಎಲ್ಲರನ್ನೂ ಪ್ರೀತಿಸುತ್ತಾರೆ. ಆದರೆ ಅವರ ಬಾಯಿ ಮಾತ್ರ ಜೋರು. ಮನಸ್ಸು ನಿಷ್ಕಲ್ಮಶವಾಗಿರುತ್ತದೆ. ಯಾರಿಗೂ ಕೆಟ್ಟದ್ದನ್ನು ಮಾಡುವುದಿಲ್ಲ. ಇಂತಹವರನ್ನು ನೋಡಿಯೇ **"ಕಚ್ಚುವ ನಾಯಿ ಬೊಗಳುವುದಿಲ್ಲ. ಬೊಗಳುವ ನಾಯಿ ಕಚ್ಚುವುದಿಲ್ಲ"** ಎನ್ನುವ ಮಾತು ಪ್ರಚಲಿತವಾಗಿರುವುದು.

೪. ನಾಯಿ ಬೊಗಳಿದ ಹಾಗೆ ಬೊಗಳಬೇಡಿ : ನಾಯಿ ಕೊತ್ತಿ ಕಚ್ಚಾಡುವಂತೆ **ಕಚ್ಚಾಡಬೇಡಿ, ಕಜ್ಜಿನಾಯಿಗಳ ಹಾಗೆ ಕಿತ್ತಾಡಬೇಡಿ, ನಾಯಿ ಬುದ್ಧಿ ಎಲ್ಲಿಗೆ ಹೋಗುತ್ತೆ** ಎಂದು ಮನೆಗಳಲ್ಲಿ ಅಕ್ಕ–ತಂಗಿ, ಅಣ್ಣ–ತಮ್ಮ ಹೀಗೆ ಒಬ್ಬರಿಗೊಬ್ಬರು ಕಚ್ಚಾಡುತ್ತಿದ್ದರೆ,

ಕಿತ್ತಾಡುತ್ತಿದ್ದರೆ, ಸಣ್ಣ ಸಣ್ಣ ವಿಷಯಕ್ಕೂ ಗಟ್ಟಿಯಾಗಿ, ಜೋರಾಗಿ ಕಿರುಚಾಡುತ್ತಿದ್ದರೆ, ನೆರೆ-ಹೊರೆಯವರು, ಅಕ್ಕ ಪಕ್ಕದವರು ಜಗಳವಾಡುತ್ತಿದ್ದರೆ ಮೇಲಿನ ಮಾತುಗಳು ಕೇಳಿಬರುತ್ತವೆ.

೫. ಕಾಡುನಾಯಾದ ಕಪಿಯಾದ : ತಾಳಿಕಟ್ಟಿದ ಹೆಂಡತಿಯನ್ನು ಬಿಟ್ಟು ಪರಸ್ತ್ರೀ ಸಂಗಕ್ಕೆ ಬಲಿಬೀಳುವ ಪುರುಷರನ್ನು ಕಂಡು ಜಾನಪದರು ಅಂತಹವರಿಗೆ ಛೀಮಾರಿ ಹಾಕುವುದರ ಜೊತೆಗೆ ಸೂಳೆಯರ ಸಹವಾಸ ಮಾಡಿದವನ ಪರಿಸ್ಥಿತಿ ಹೇಗಾಗುತ್ತದೆ ಎಂಬುದನ್ನು **"ಸೂಳೇಗೆ ಹೋದೋನು ಏನಾದ ಎಂತಾದ ಕಾಡು ನಾಯಾದ ಕಪಿಯಾದ"** ಎಂದು ಸೊಗಸಾಗಿ ಹೇಳಿದ್ದಾರೆ.

೬. ಬಾಳೋ ಮನೆಗೊಂದು ಬೊಗಳೋ ನಾಯಿ : ಈ ಮಾತನ್ನು ಮನೆಯಲ್ಲಿ ಹಿರಿಯರು ಅಂದರೆ ವಯಸ್ಸಾದವರು ಇದ್ದರೆ ಪ್ರತಿಯೊಂದು ವಿಷಯಕ್ಕೂ ಮೂಗುತೂರಿಸಿ ಅದು ಮಾಡಬೇಡಿ ಇದು ಮಾಡಬೇಡಿ ಎಂದೋ, ಹೀಗೆ ಮಾಡಿ, ಹಾಗೆ ಮಾಡಿ ಎಂದೋ ಪ್ರತಿಯೊಂದು ವಿಷಯದಲ್ಲಿಯೂ ಏನಾದರೂ ಕೊಂಕು ಹುಡುಕಿ ಮಾತನಾಡುತ್ತಿದ್ದರೆ, ಸದಾ ಗೊಣಗುಟ್ಟುತ್ತಿದ್ದರೆ ಈ ಮಾತನ್ನು ಹೇಳುವರು. ಹಾಗೆಯೇ ಹಿರಿಯರು ಮನೆಯಲ್ಲಿರುವುದನ್ನು ಇತ್ತೀಚಿನವರು ಇಷ್ಟಪಡುವುದಿಲ್ಲ.

೭. ನಾಯಿ ಮೊಲೇಲಿ ಹಾಲಿದ್ದಂಗೆ : ಮನುಷ್ಯರ ಬದುಕು ನೀರಿನ ಗುಳ್ಳೆಯಂತೆ ಕ್ಷಣಿಕ. ಈ ಕ್ಷಣಿಕವಾದ ನಶ್ವರ ಬದುಕಿನಲ್ಲಿ ದುಡಿದಿದ್ದನ್ನೆಲ್ಲಾ ಕೂಡಿಸಿಟ್ಟು, ತಾನೂ ತಿನ್ನದೆ, ದಾನವೂ ಮಾಡದೆ, ಮಣ್ಣಿನಲ್ಲಿ ಮುಚ್ಚಿಟ್ಟು ಬದುಕು ಸಾಗಿಸುವವರನ್ನು ಕಂಡು, ಎಷ್ಟೇ ಧನಿಕನಾದರೂ ಇನ್ನೊಬ್ಬರ ಕಷ್ಟಕ್ಕಾಗದವರನ್ನು, ಎಂಜಲು ಕೈಯಲ್ಲಿ ಕಾಗೆ ಓಡಿಸದಂತಹ ಜನರ ಸಂಪತ್ತನ್ನು ಕಂಡು **'ನಾಯಿ ಮೊಲೇಲಿ ಹಾಲಿದ್ದಂಗೆ'** ದೇವರಿಗೂ ಸಲ್ಲಲ್ಲ, ದೆವ್ವಕ್ಕೂ ಸಲ್ಲಲ್ಲ ಎಂದು ಬಯ್ದು ಎಚ್ಚರಿಸುವರು.

೮. ಮನುಷ್ಯ ಅಜಾಗರೂಕತೆಯಿಂದ ವರ್ತಿಸಿದರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಈ ಕೆಳಗಿನ ನಾಣ್ನುಡಿಗಳಲ್ಲಿ ಕಾಣಬಹುದಾಗಿದೆ.

ಉದಾ : 'ಇರುಳುಕಾದ ಹೆಣ ಹಗಲು ನಾಯಿ ಕೊಂಡೋಯ್ತು'

'ಬೆಳಗಾನ ಕಷ್ಟಪಟ್ಟು ಹೆತ್ತ ಮಗೂನ ಬೆಳಕರೀತ್ಲೂ ನಾಯಿಕಚ್ಕೊಂಡು ಹೋಯ್ತಂತೆ.'

೯. ನಾಯಿ ಬಾಳು : ಇದು ಮನುಷ್ಯನ ನಿರಾಧಾರಿತ, ಅನಿಶ್ಚಿತ ಬದುಕಿನ ಸಂಕೇತವಾಗಿದೆ.

೧೦. ನಾಯಿ ಪಾಡು : ಮನುಷ್ಯನು ಅನುಭವಿಸುವ ಬದುಕಿನ ಜಂಜಾಟದ

ಪಾಡನ್ನು ನಾಯಿಪಾಡಿಗೆ ಹೋಲಿಸಲಾಗಿದೆ. ಇದನ್ನು ನೋಡಿದರೆ ಮನುಷ್ಯನ ಅವಸ್ಥೆಗೂ ನಾಯಿಯ ಅವಸ್ಥೆಗೂ ಏನೇನು ವ್ಯತ್ಯಾಸವಿಲ್ಲದಂತಾಗಿದೆ. ಉದ್ಯೋಗದಲ್ಲಿದ್ದರೆ ಅವರನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗ ಮಾಡಿದಾಗ ಅವರುಗಳು ಅನುಭವಿಸುವ ಪಾಡು ನಾಯಿಪಾಡಾಗಿರುತ್ತದೆ. ವಧು-ವರರ ಅನ್ವೇಷಣೆಯೂ ಒಂದು ನಾಯಿ ಪಾಡೇ. ಮದುವೆ ಮಾಡುವಾಗ, ಮನೆಕಟ್ಟುವಾಗ, ಬಾಡಿಗೆ ಮನೆ ಹುಡುಕುವಾಗ, ಉದ್ಯೋಗಕ್ಕಾಗಿ ಅಲೆಯುವಾಗ ಹೀಗೆ ಜೀವನದಲ್ಲಿ ಇದು ಪ್ರತಿಯೊಬ್ಬ ವ್ಯಕ್ತಿಗೂ ಒಂದಲ್ಲ ಒಂದು ರೀತಿ ಈ ಪಾಡು ಬಂದೇ ಬರುವುದು.

ಬಸವಣ್ಣನವರು ಪರಸ್ತ್ರೀಯರ ಬೆನ್ನು ಹತ್ತಿ ಹೋಗುವ ಕಾಮುಕರನ್ನು ಕಂಡು ಅವರನ್ನು ನಾಯಿಗೆ ಹೋಲಿಸಿ, ಟಗರುಗಳ ಹಿಂದೆ ಹೋದ ನಾಯಿಯ ಪಾಡು ಏನಾಯಿತೆಂಬುದನ್ನು ಉದಾಹರಿಸಿದ್ದಾರೆ. ನಾಯಿ ಟಗರುಗಳೆರಡು ಕಾದಾಡಿ ಸತ್ತರೆ ತಾನು ಅದನ್ನು ತಿನ್ನಬಹುದೆಂಬ ಚಪಲಕ್ಕೆ ಒಳಗಾಗಿ ಅವುಗಳ ಹಿಂದೆ ಹೋಯಿತು. ನಾಯಿ ನಿರೀಕ್ಷಿಸಿದಂತೆ ಟಗರುಗಳ ಹಣಾಹಣಿಯಾಗಿ ಅವುಗಳ ತಲೆ ಒಡೆದು ರಕ್ತ ಸುರಿಯಲಾರಂಭಿಸಿತು. ಆಗ ನಾಯಿ ಆ ರಕ್ತವನ್ನು ನೆಕ್ಕಲು ಮುನ್ನುಗ್ಗಿ ಟಗರುಗಳ ಮಧ್ಯೆ ಸಿಕ್ಕಿ ಅಸು ನೀಗಿತು. ಈ ನಾಯಿಪಾಡು ದುಶ್ಚರಿತಕ್ಕೆ ತಕ್ಕ ಶಾಸ್ತಿಯಾಯಿತು.

೧೧. **ನಾಯಿ ಮುಟ್ಟಿದ ಮಡಕೆ** : ಹೆಣ್ಣನ್ನು ಯಾರಾದರೂ ಕೆಡಿಸಿದರೆ ಆ ಹೆಣ್ಣಿಗೆ ಸಮಾಜದಲ್ಲಿ ಒಂದು ಒಳ್ಳೆಯ ಸ್ಥಾನಮಾನವಿರುವುದಿಲ್ಲ. ಅವಳನ್ನು ಎಲ್ಲರೂ ನಿಕೃಷ್ಟವಾಗಿ ಕಾಣುತ್ತಾರೆ. ಬೇರೆ ಯಾವ ವರನೂ ಅವಳ ಕೈ ಹಿಡಿಯಲು ಮುಂದೆ ಬರುವುದಿಲ್ಲ. ಅಂತಹ ಸಮಯದಲ್ಲಿ ಹೆಣ್ಣನ್ನು **'ನಾಯಿ ಮುಟ್ಟಿದ ಮಡಕೆ', ಈ 'ನಾಯಿ ಮುಟ್ಟಿದ ಮಡಕೆಯನ್ನು ನಾಯಿ ಕೊರಳಿಗೇ ಕಟ್ಟ'** ಎನ್ನುವರು. ಅಂದರೆ ಆಕೆಯನ್ನು ಯಾರು ಕೆಡಿಸಿರುತ್ತಾರೋ ಅವರಿಗೇ ಆಕೆಯನ್ನು ಕೊಟ್ಟು ವಿವಾಹ ಮಾಡಬೇಕು ಎನ್ನುವರು.

೧೨. **ನಾಯಿಗೆ ಸಲುಗೆ ಕೊಟ್ರೆ ಸೊಟ್ಟಗನ ಮೂಸಿ ನೋಡ್ತಂತೆ** : ಯಾರಿಗಾದರೂ ಪ್ರೀತಿ-ವಿಶ್ವಾಸದಿಂದ, ನಮ್ಮವರು ತಮ್ಮವರು ಎಂಬ ಭೇದಭಾವವಿಲ್ಲದೆ ಸಲುಗೆ ತೋರಿದರೇ ಸಾಕು. ಅವರು ಆ ಸಲುಗೆಯನ್ನು ದುರ್ಬಳಕೆ ಮಾಡಿಕೊಳ್ಳುವುದಿದೆ. ಅಂತಹವರನ್ನು ಕಂಡು **'ನಾಯಿಗೆ ಸಲುಗೆ ಕೊಟ್ರೆ ಸೊಟ್ಟಗನ ಮೂಸಿ ನೋಡ್ತಂತೆ'** ಎನ್ನುವರು. ಯಾರನ್ನು ಎಲ್ಲಿ ಇಟ್ಟಿರಬೇಕೋ - ಚಪ್ಪಲಿಯನ್ನು ಎಲ್ಲಿ ಇಡಬೇಕೋ

ಅಲ್ಲೇ ಇಡಬೇಕು. ಅದನ್ನು ದೇವರ ಕೋಣೆಯಲ್ಲಿ ಇಡಲಾಗುವುದೇ ಹಾಗೆ – ಅಲ್ಲೇ ಇಟ್ಟಿರುವುದು ಚೆನ್ನ ಎಂಬುದನ್ನು ಹೀಗೆ ಮಾರ್ಮಿಕವಾಗಿ ಹೇಳಿದ್ದಾರೆ, "ನಾಯಿಗೆ ಸಲುಗೆ ಕೊಟ್ರೆ ಮುಕಳಿ ಮೂಸಿ ನೋಡ್ತಂತೆ" ಎಂಬಂತೆ ನಾಯಿಗೆ ಸಲುಗೆ ಕೊಟ್ರೆ ಸೊಟ್ಗನ ಮೂಸಿ ನೋಡುವುದು.

೧೩. ಒಂದು ಮೂಳೆ ಹಾಕಿ ಎರಡು ನಾಯಿಬಿಟ್ಟಂತೆ : ಕೆಲವು ಸಾರಿ ತಮ್ಮಷ್ಟಕ್ಕೆ ತಾವು ಸುಮ್ಮನಿರದೆ – ಇರಲಾರದೆ ಇರುವೆ ಬಿಟ್ಟು ಕೊಂಡಂತೆ – ಯಾವುದಾದರೂ ಒಂದು ಸಣ್ಣ ವಿಷಯಕ್ಕೆ ಒಬ್ಬರಿಗೊಬ್ಬರನ್ನು ಎತ್ತಿಕಟ್ಟಿ ಇಬ್ಬರಿಗೂ ಜಗಳ ಅಂಟುಹಾಕಿ ಏನೂ ಕಾಣದವರಂತೆ ಸುಮ್ಮನಿರುವವರನ್ನು ಕಂಡು ಒಂದು ಮೂಳೆ ಹಾಕಿ ಎರಡು ನಾಯಿ ಬಿಟ್ಟಂತೆ ಮಾಡಿದೆ ಎಂದು ಛೀಮಾರಿ ಮಾಡುವರು.

೧೪. ನಾಯಿ ಇಲ್ಲದ ಊರಲ್ಲಿ ನರಿಯಣ್ಣನದೇ ಯಜಮಾನಿಕೆ : ಮನೆಯಲ್ಲಿ ಹಿರಿಯರಿಲ್ಲದಿದ್ದರೆ ಕಿರಿಯರದೇ ದರ್ಬಾರು. 'ಅತ್ತೆ ಇಲ್ಲದ ಮನೆಗೆ ಸೊಸೆ ಬಿತ್ತಾರಿ' ಎನ್ನುವಂತೆ. ಹೇಳುವವರು ಕೇಳುವವರು ಇಲ್ಲದಿದ್ದರೆ ನಾಯಿ ಇಲ್ಲದ ಊರಲ್ಲಿ ನರಿಯಣ್ಣನದೇ ಯಜಮಾನಿಕೆ ಎನ್ನುವರು.

೧೫. ಪಾಯಸ ಮಾಡಿ ನಾಯಿ ಬಾಲದಲ್ಲಿ ತೊಳಸಿದಂತೆ : ಪ್ರಾರಂಭದಲ್ಲಿ 'ಆರಂಭ ಶೂರತ್ವ' ಎಂಬಂತೆ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದು ಎಲ್ಲರೂ ಹೊಗಳಲು ಪ್ರಾರಂಭಿಸಿದ ಕೂಡಲೇ ಅಹಂಕಾರ ತಲೆಗೇರಿ ಮಾಡುತ್ತಿದ್ದ ಕೆಲಸವನ್ನು ಕೆಡಿಸಿಬಿಡುವುದು. ಇದನ್ನು ಗಮನಿಸಿ 'ಪಾಯಸ ಮಾಡಿ ನಾಯಿ ಬಾಲದಲ್ಲಿ ತೊಳಸಿದಂತೆ' ವ್ಯರ್ಥವಾಗುವುದೆಂದು ಹೇಳಿರುವ ಈ ಮಾತು ಮನನೀಯವಾಗಿದೆ.

೧೬. ಕಡೀಲಾಗದ ನಾಯಿ ಮೂಳೆಗುಡ್ಡೆ ಹಾಕ್ಕೊಂಡಂಗೆ : ಕೆಲವೊಮ್ಮೆ ಆ ಕೆಲಸ ನನ್ನಿಂದ ಸಾಧ್ಯವಿಲ್ಲ. ನನಗೆ ಮಾಡಲು ಆಗುವುದಿಲ್ಲ ಎಂದು ಗೊತ್ತಿದ್ದರೂ ಸಹಾ ನನಗೆ ಗೊತ್ತು, ನಾನು ಮಾಡುತ್ತೇನೆ ಎಂದು ಆ ಕೆಲಸವನ್ನು ಒಪ್ಪಿಕೊಳ್ಳುವುದು. ಕೊನೆಗೆ ಮಾಡಲಾಗದೆ ಕೈ ಚೆಲ್ಲಿ ಕೂರುವುದು. ಇಂತಹ ತಪ್ಪು ಆದರ್ಶಗಳಿಗೂ ನಾಯಿಯನ್ನು ಸಂಕೇತವಾಗಿ ಮಾಡಿಕೊಳ್ಳಲಾಗಿದೆ. "ಕಡೀಲಾಗದ ನಾಯಿ ಮೂಳೆಗುಡ್ಡೆ ಹಾಕ್ಕೊಂಡಂಗೆ" ಎಂದು.

೧೭. ನಾಯಿಬುದ್ಧಿ : ಮನೆಯಲ್ಲಿ ಹೆಂಡತಿಯಿದ್ದರೂ ಬೀದಿಯಲ್ಲಿ ಹೋಗಿ ಬರುವ ಸ್ತ್ರೀಯರನ್ನು ನೋಡಿ ಜೊಲ್ಲು ಸುರಿಸಿಕೊಂಡು ನೋಡುತ್ತಾ, ರೇಗಿಸುತ್ತಾ ಅವರ ಹಿಂದೆ ಮುಂದೆ ಸುತ್ತಾಡುತ್ತಾ ಇರುವವರನ್ನು ಕಂಡು 'ನಾಯಿ ಬುದ್ಧಿ' ಎಲ್ಲಿ ಬಿಡುತ್ತೀರಿ ಎಂದು ಬೈಯುವುದು ಸಾಮಾನ್ಯವಾಗಿದೆ. ನಾಯಿಯನ್ನು ಸಿಂಹಾಸನದ

ಮೇಲೆ ಕೂರಿಸಿದರೂ ಹೇಲುಕಂಡ ಕಡೆ ಧುಮುಕುತ್ತದೆ ಎಂಬಂತೆ ಮನುಷ್ಯನ ವಕ್ರಬುದ್ಧಿಯನ್ನು ನಾಯಿ ಬುದ್ಧಿಗೆ ಹೋಲಿಸಿದ್ದಾರೆ.

೧೮. **ತಿಕಾ ಕೆಯ್ಯೋ ನಾಯ ಸೊಂಟಕ್ಕೆ ಕಟ್ಟಿಕೊಂಡಂಗೆ :** ಅನ್ನವಿಟ್ಟವರಿಗೆ ಕೃತಜ್ಞತೆ ತೋರಿಸಿ, ಉಪಕಾರಕ್ಕೆ ಪ್ರತ್ಯುಪಕಾರ ಮಾಡುವ ಬದಲು ಕೃತಘ್ನರಾಗಿ ನಡೆದುಕೊಳ್ಳುವವರನ್ನು, ದುಷ್ಟರಾದವರಿಗೆ ಮಾಡಿದ ಉಪಕಾರವು ಹೇಗೆ ಅಪಕಾರವಾಗುತ್ತದೆಂಬುದನ್ನು 'ತಿಕಾ ಕೆಯ್ಯೋ ನಾಯ ಸೊಂಟಕ್ಕೆ ಕಟ್ಟಿಕೊಂಡಂಗೆ" ಎಂದು ಹೀನೈಸಿ ಖಂಡಿಸುವರು. ಇಲ್ಲಿ ವಾಚ್ಯಾರ್ಥಕ್ಕಿಂತ ವ್ಯಂಗ್ಯಾರ್ಥವೇ ಮುಖ್ಯವಾಗಿರುವುದನ್ನು ಕಾಣುತ್ತೇವೆ.

ನಾಯಿಗಳು ಸ್ವಾರ್ಥಪರವಾಗಿಲ್ಲ. ಅವುಗಳು ಇತರ ಸಾಧು ಪ್ರಾಣಿಗಳಿಗೂ ತಮ್ಮ ಕೈಲಾದ ಅಲ್ಪ ಸೇವೆಯನ್ನು ಮಾಡುತ್ತವೆ. ಉದಾ : ಎಮ್ಮೆ ಅಥವಾ ಹಸುವಿನ ಮೈಯಲ್ಲಿರುವ ಉಣ್ಣೆಗಳನ್ನು ಕಿತ್ತು ತಿನ್ನುತ್ತವೆ. ಇದರಿಂದ ಅವುಗಳಿಗಾಗುವ ಯಾತನೆಯನ್ನು ತಪ್ಪಿಸಿದಂತಾಗುವುದು.

ಕೆಲವೊಮ್ಮೆ ಬೆಕ್ಕಿನ ಮರಿಗಳಿಗೆ ತನ್ನ ಎದೆ ಹಾಲನ್ನು ಕುಡಿಸುತ್ತದೆ. ಅವುಗಳೊಂದಿಗೆ ಆತ್ಮೀಯತೆಯಿಂದ, ಪ್ರೀತಿಯಿಂದ ನಡೆದುಕೊಳ್ಳುತ್ತದೆ. ತನ್ನ ಬೆನ್ನ ಮೇಲೆ ಕೂರಿಸಿಕೊಂಡು ಆಟವಾಡಿಸುತ್ತದೆ. ಕೆಲವು ಪತ್ರಿಕೆಗಳಲ್ಲಿ ಈ ದೃಶ್ಯವನ್ನು ಸೆರೆ ಹಿಡಿದು ವರದಿ ಮಾಡಲಾಗಿತ್ತು. ದೂರದರ್ಶನದಲ್ಲಿಯೂ ನಾಯಿ ಇತರ ಪ್ರಾಣಿಗಳೊಂದಿಗೆ ಹೇಗೆ ಸ್ನೇಹ ಸೌಹಾರ್ದದಿಂದಿದೆ ಎಂಬುದನ್ನು ಬಿತ್ತರಿಸಿತ್ತು. ಒಮ್ಮೊಮ್ಮೆ ಇದನ್ನು ನೋಡಿದಾಗ ಅಚ್ಚರಿಯೆನಿಸುವುದೂ ಉಂಟು.

ನಾಯಿಗಳಿಗೆ ಕರುಣೆಗಿಂತ ಒಲುಮೆ ಹೆಚ್ಚು ಬೇಕು. ಅದು ತನ್ನನ್ನು ಕಂಡು ಬರಿಯ ಮರುಕ ತೋರಿಸಿ ತಿಂಡಿ ಅಥವಾ ಅನ್ನ ಹಾಕುವ ಯಜಮಾನನಿಗಿಂತಲೂ, ತನ್ನನ್ನು ಎತ್ತಿ ಮುದ್ದಾಡಿಸಿ, ಒಲುಮೆ ತೋರಿ, ಪಕ್ಕದಲ್ಲೇ ಮಲಗಿಸಿಕೊಂಡು ಪ್ರೀತಿ ಮಾಡುವವರನ್ನು ಅದು ಹೆಚ್ಚು ಪ್ರೀತಿಸುತ್ತದೆ. ಅವರಿಗೆ ತುಂಬಾ ಕೃತಜ್ಞವಾಗಿರುತ್ತದೆ. ಅವರಿಗಾಗಿ ಆತ್ಮಾರ್ಪಣೆಗೂ ಮುಂದಾಗುತ್ತದೆ. ಆದರೆ ಅದು ಅನ್ನವಿಟ್ಟವರನ್ನು ಎಂದಿಗೂ ಮರೆಯುವುದಿಲ್ಲ.

ಹೀಗೆ ನಾಯಿಯ ಬಗೆಗೆ ಮೂಡಿ ಬಂದಿರುವ ಈ ಪರಂಪರಾಗತ ಚಾಟೋಕ್ತಿಗಳು, ನಾಣ್ಣುಡಿಗಳು, ನುಡಿಗಟ್ಟುಗಳು, ಗಾದೆಗಳು ಬೈಗುಳಗಳು ಮನುಷ್ಯನ ಬದುಕಿನ ಮೌಲ್ಯಗಳ ಸಂಕೇತಗಳನ್ನಾಗಿ ಗ್ರಹಿಸಿ ಮಾನವನ ಬದುಕಿನ ಸತ್ಯಾಸತ್ಯತೆಗಳನ್ನು 'ಇಂಪರ್ಸನಲ್ ಆಗಿ' ಹೇಳುವ ತಂತ್ರ ಜನರ ಮನದಲ್ಲಿ ಅಚ್ಚರಿಯನ್ನುಂಟು ಮಾಡಿದೆ. ಹಾಗೆಯೇ ಒಂದು ರೀತಿಯಲ್ಲಿ ನಮ್ಮ ನಿತ್ಯ ಜೀವನದಲ್ಲಿನ ಕೆಲವು ವಿಚಾರಗಳ ಮೌಲ್ಯಮಾಪನಕ್ಕೆ ಇವುಗಳೆಲ್ಲಾ ಹೇಗೆ

ಸಹಾಯಕವಾಗಬಲ್ಲವು ಎಂಬುದನ್ನು ಮನಗಾಣಬಹುದಾಗಿದೆ.

ಒಟ್ಟಿನಲ್ಲಿ ನಾಯಿಯನ್ನು ಮಧ್ಯವರ್ತಿಯನ್ನಾಗಿ ಮಾಡಿಕೊಂಡು ಮನುಷ್ಯರ ಬದುಕನ್ನು ಟೀಕಿಸಲಾಗಿದೆ, ನಾಯಿಯ ಹೆಸರನ್ನು ಮನುಷ್ಯರಿಗಿಟ್ಟು ಆನಂದಿಸುವ ಕೆಲಸವಂತೂ ಅವ್ಯಾಹತವಾಗಿ ನಡೆಯುತ್ತಲೇ ಬಂದಿದೆ.

ಮೂಕ ಪ್ರಾಣಿಯಾದರೂ ನಾಯಿಯಲ್ಲಿರುವ ಸದ್ಗುಣಗಳು ಮನುಷ್ಯರಲ್ಲಿ ಇಲ್ಲ. ಆದ್ದರಿಂದಲೇ ,

"ನೀತಿ ಗೆಟ್ಟ ಮಗನಿಗಿಂತ ನಾಯಿ ಮೇಲು"
"ನಾಯಿಗಿರುವ ನಿಯತ್ತು ನರನಿಗಿಲ್ಲ"

ಎಂಬ ನುಡಿಗಟ್ಟುಗಳು ನಾಯಿಯ ನಿಷ್ಠೆ, ನಿಯತ್ತು, ನಂಬಿಕೆಗಳನ್ನು ಎತ್ತಿ ತೋರಿಸುತ್ತವೆ. ಇದಕ್ಕಿಂತ ಬೇಕೇ ನಾಯಿಯನ್ನು ಪ್ರೀತಿಸಲು !

ನಾಯಿಯ ಗಾತ್ರ, ಎತ್ತರ, ಅದು ತೋರಿಸುವ ಚಾಕಚಕ್ಯತೆ ನಿಷ್ಠೆ ಹೀಗೆ ಹಲವು ವಿಷಯಗಳು ಗಿನ್ನೀಸ್ ಪುಸ್ತಕದಲ್ಲಿಯೂ ದಾಖಲಾಗಿರುವುದು ಹೆಮ್ಮೆಯ ವಿಷಯವಾಗಿದೆ.

ಹೀಗಾಗಿ ನಾಯಿ ಸಾಕು ಪ್ರಾಣಿಗಳ ಗುಂಪಿನಲ್ಲಿ ತನ್ನದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿರುವ ಕೃತಜ್ಞತೆಯುಳ್ಳ ಪ್ರಾಣಿಯಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ! ಹಾಗೆಯೇ ನಾಯಿ ಮನುಷ್ಯನ ಪೆಟ್ ಪ್ರಾಣಿಗಳಲ್ಲಿಯೂ ಒಂದು. ಹಾಗೂ ಮನುಷ್ಯನಿಗೂ ನಾಯಿಗೂ ಒಂದು ರೀತಿಯ ಅಂಟು! ನಂಟು! ನಾಯಿಯು ಮಾನವೀಯ ಮೌಲ್ಯಕ್ಕೆ ಸಂಕೇತವಾಗಿದೆ. ಎನ್ನುವುದರಲ್ಲಿ ಉತ್ಪ್ರೇಕ್ಷೆಯೇನಿಲ್ಲ ಎನ್ನಬಹುದು. ಅಲ್ಲದೆ ಮನುಷ್ಯನಿಗೆ ಸಜ್ಜನಿಕೆಯನ್ನು ಕಲಿಸಲು ಇಂತಹ ಪ್ರಾಣಿಗಳು ಬೇಕೇಬೇಕು ಅಲ್ಲವೇ?

ಗ್ರಂಥಋಣ

೧) ಕನ್ನಡ ನಿಘಂಟು
೨) ವಿಶಿಷ್ಟ ಜಾನಪದ
೩) ಪಂಚರಂಗಿ – ಡಾ. ಕೆ. ಶ್ರೀಕಂಠಯ್ಯ
೪) ಕನ್ನಡದ ಹತ್ತು ಸಾವಿರ ಗಾದೆಗಳು
೫) ಸ್ಮರಣೆ – ಸೊಗಸು –ಡಾ. ವರದಾ ಶ್ರೀನಿವಾಸ
೬) ನಮ್ಮ ಸುತ್ತಿನ ಗಾದೆಗಳು – ಡಾ. ಸುಧಾಕರ
೭) ಕಿಟಲ್ ಕೋಶದ ಗಾದೆಗಳು – ರಾಗೌ

೩. ಹೊಯ್ಸಳ ದೇವಾಲಯಗಳಲ್ಲಿ ಕಥಾನಕ ಶಿಲ್ಪಗಳು –ಒಂದು ಅವಲೋಕನ

–ಲೋಕೇಶ ಸಿ.ಇ.

ಪೀಠಿಕೆ

ಹೊಯ್ಸಳರ ಕಾಲದ ದೇವಾಲಯಗಳು ಅವುಗಳ ವಿನ್ಯಾಸ ಹಾಗೂ ಕುಸುರಿನ ಶಿಲ್ಪಗಳಿಗೆ ಹೆಸರಾಗಿವೆ. ಸಾಮಾನ್ಯವಾಗಿ ಶಿಲ್ಪಗಳು ದೇವಾಲಯದ ಭಿತ್ತಿ, ಬೋದಿಗೆ, ಬಾಗಿಲುವಾಡ ಹಾಗೂ ಭುವನೇಶ್ವರಿಗಳಲ್ಲಿ ಬಹುತೇಕವಾಗಿ ಕಂಡುಬರುತ್ತವೆ. ವಿಶೇಷವಾಗಿ ವೀಕ್ಷಕರ ಹಾಗೂ ಆಸಕ್ತರ ಗಮನ ಸೆಳೆಯುವ ಶಿಲ್ಪಗಳೆಂದರೆ ಭಿತ್ತಿಯಲ್ಲಿ ಕಂಡುಬರುವ ದೇವಾನುದೇವತೆಯರ ಸುಂದರ ಶಿಲ್ಪಗಳು ಹಾಗೂ ಶಿಲಾಬಾಲಿಕೆಯರು ಎಂದೇ ಪ್ರಸಿದ್ಧಿಯಾಗಿರುವ ಆಕರ್ಷಕ ಮೈಮಾಟಗಳನ್ನು ಹೊಂದಿರುವ ಮದನಿಕ ಅಥವಾ ಅಪ್ಸರೆಯರ ಶಿಲ್ಪಗಳು. ಭಾರತೀಯ ಕಲೆಯನ್ನು ಕುರಿತು ಚರ್ಚಿಸುವ ಬಹುತೇಕ ಪುಸ್ತಕಗಳಲ್ಲಿ ಹೊಯ್ಸಳ ದೇವಾಲಯಗಳ ಬಗ್ಗೆ ಹೇಳುತ್ತಾ ಸಾಮಾನ್ಯವಾಗಿ ಬೇಲೂರಿನ ಚೆನ್ನಕೇಶವ ದೇವಾಲಯ ಮತ್ತು ಅದರ ಮದನಿಕ ಶಿಲ್ಪಗಳು ಅಥವಾ ಸೋಮನಾಥಪುರದ ಕೇಶವ ದೇವಾಲಯಗಳಿಗೆ ಮಾತ್ರ ಸೀಮಿತವಾದಂತೆ ಚರ್ಚಿಸಿರುವುದು ವ್ಯಕ್ತವಾಗುತ್ತದೆ. ಈ ಶಿಲ್ಪಗಳ ಪ್ರಾಮುಖ್ಯತೆ ಪ್ರಸ್ತುತ ಚರ್ಚಿಸ ಹೊರಟಿರುವ ಕಥಾನಕ ಶಿಲ್ಪಗಳನ್ನು ಸ್ವಲ್ಪಮಟ್ಟಿಗೆ ಹಿಂದೆ ಸರಿಸುತ್ತವೆ. ಬಹುಶಃ ಇದಕ್ಕೆ ಮುಖ್ಯ ಕಾರಣ ಈ ಕಥಾನಕ ಶಿಲ್ಪಗಳು ಅಲಂಕಾರಿಕ ಪಟ್ಟಿಗಳಲ್ಲಿ, ಅಧಿಷ್ಠಾನಗಳಲ್ಲಿ ಸೇರಿಹೋಗಿರುವುದೇ ಮುಖ್ಯ ಕಾರಣ ಎಂದು ತೋರುತ್ತದೆ. ನೋಡುಗನಿಗೆ ಅವುಗಳು ಅಷ್ಟೊಂದು ಬೇಗನೆ ಗೋಚರಿಸುವುದೇ ಇಲ್ಲ. ಹೀಗಾಗಿ ಇವುಗಳನ್ನು ಕುರಿತ ಅಧ್ಯಯನವು ಕೂಡ ಹೆಚ್ಚು ವಿದ್ವಾಂಸರುಗಳ ಆಸಕ್ತಿಯನ್ನು

ಸೆಳೆದಿರುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಹೊಯ್ಸಳರ ವಾಸ್ತುಶಿಲ್ಪ ಕುರಿತು ಕೈಗೊಳ್ಳಲಾಗಿರುವ ಹಲವಾರು ಪಿಎಚ್.ಡಿ. ಸಂಶೋಧನೆಗಳಲ್ಲಿ ಅಲ್ಲಲ್ಲಿ[೧] ಕಥಾನಕ ಶಿಲ್ಪಗಳ[೨] ಬಗೆಗೆ ಚರ್ಚೆಗಳಿವೆ.[೩] ಅಲ್ಲದೆ ಎಂ.ಎ.ಆರ್.[೪] ಪುಸ್ತಕಗಳೂ ಪ್ರಸ್ತುತ ಅಧ್ಯಯನಕ್ಕೆ ಅತ್ಯುಪಯುಕ್ತ ಮಾಹಿತಿ ನೀಡುತ್ತವೆ. ಮುಖ್ಯವಾಗಿ ದೇವಾಲಯಗಳಲ್ಲಿ ನಿರೂಪಿತಗೊಂಡಿರುವ ಕಥಾನಕ ಶಿಲ್ಪಗಳನ್ನು ಗುರುತಿಸಿ ಹೆಸರಿಸಿರುವ ಕಾರ್ಯ ಅತ್ಯಂತ ಶ್ಲಾಘನೀಯವಾಗಿದೆ.

ಕಥಾನಿರೂಪಣಾ ಶಿಲ್ಪಗಳ ಚರ್ಚೆ

ಕಥಾನಿರೂಪಣಾ ಶಿಲ್ಪಗಳು ದೇವಾಲಯಗಳ ಅವಿಭಾಜ್ಯ ಅಂಗವಾಗಿ ಬೆಳೆವಣಿಗೆ ಹೊಂದಿವೆ. ಇವುಗಳಲ್ಲಿ ಕಂಡುಬರುವ ಕಥೆಗಳು ಪೌರಾಣಿಕ ಹಿನ್ನೆಲೆಯನ್ನು ಹೊಂದಿವೆ. ಮುಖ್ಯವಾಗಿ ರಾಮಾಯಣ, ಮಹಾಭಾರತ, ಭಾಗವತ (ಕೃಷ್ಣ ಕಥಾ) ಪ್ರಹ್ಲಾದ ಚರಿತ, ಸಮುದ್ರಮಥನ, ಕಿರಾತಾರ್ಜುನೀಯ ಅಲ್ಲದೇ ಶಿವನಿಗೆ ಸಂಬಂಧಿಸಿದಂತಹ ಹಲವಾರು ಘಟನೆಗಳಿವೆ. ಉದಾಹರಣೆಗೆ, ತ್ರಿಪುರಾ ಸುರಸಂಹಾರ, ಗಜಾಸುರ ಸಂಹಾರ, ದೇವ – ದಾನವರ ಯುದ್ಧದ ಘಟನೆಗಳು. ಹೀಗೆ ಹಲವಾರು ಕಥಾನಕ ನಿರೂಪಣೆಗಳು ಶಿಲ್ಪಗಳ ರೂಪದಲ್ಲಿ ಕೆತ್ತಲ್ಪಟ್ಟಿವೆ.

ಕಥಾನಿರೂಪಣಾ ಶಿಲ್ಪಗಳನ್ನು ಮುಖ್ಯವಾಗಿ ಹೊಯ್ಸಳರ ಎಲ್ಲಾ ಅಲಂಕೃತ, ಅಂದರೆ ಶಿಲ್ಪಾಕೃತಿಗಳನ್ನು ಹೊಂದಿರುವಂತಹ ದೇವಾಲಯಗಳಲ್ಲಿ ಕಾಣಬಹುದು. ಮುಖ್ಯವಾಗಿ ಇವುಗಳು ಕಂಡುಬರುವ ಸ್ಥಳಗಳೆಂದರೆ ದೇವಾಲಯಗಳ ಸಭಾಮಂಟಪಗಳ ಕಕ್ಷಾಸನದ ಹೊರಭಾಗಗಳಲ್ಲಿ ಮತ್ತು ಅದರ ಮೇಲ್ಭಾಗದಲ್ಲಿಯೂ ಕಥಾನಿರೂಪಣಾ ಶಿಲ್ಪಗಳು ಕಂಡುಬರುತ್ತವೆ. ಕಥಾನಿರೂಪಣಾ ಶಿಲ್ಪಗಳು ದೇವಾಲಯದ ಅಲಂಕರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳನ್ನು ಶಿಲ್ಪರೂಪದಲ್ಲಿ ನಿರೂಪಿಸುತ್ತಿದ್ದ ಮುಖ್ಯ ಉದ್ದೇಶ ಅದುವರೆಗೂ ಕೇವಲ ಮೌಖಿಕವಾಗಿ ಪ್ರಚಾರದಲ್ಲಿದ್ದಂತಹ ಪೌರಾಣಿಕ ಕಥನಗಳು ಪ್ರಾಯಶಃ ಹೊಯ್ಸಳರ ಕಾಲದಲ್ಲಿ ಅತ್ಯಂತ ವಿವರವಾಗಿ ಶಿಲ್ಪ ರೂಪದಲ್ಲಿ ರಚನೆಗೊಂಡವು. ಇದರಿಂದ ಜನಸಾಮಾನ್ಯರಿಗೆ ಇವುಗಳ ತಿಳುವಳಿಕೆ ಹೆಚ್ಚು ಪರಿಣಾಮಕಾರಿಯಾಗಿ ಆಗುತ್ತದೆ. ಅಲ್ಲದೆ ಮೌಖಿಕವಾಗಿದ್ದಂತಹ ನಂಬಿಕೆಗಳಿಗೆ ಒಂದು ದೃಶ್ಯ ಚಿತ್ರಣ ದೊರೆಯುವುದರಿಂದ ಅಂದಿನ ಪ್ರಮುಖ ಕಥಾನಕಗಳನ್ನು ಪದೇ ಪದೇ ನೋಡಲು ಕೂಡ ದೊರೆತಂತಾಗುತ್ತದೆ.

ಕಥಾನಕ ಶಿಲ್ಪಗಳು ಕೇವಲ ಹೊಯ್ಸಳರ ಕಾಲದಲ್ಲಿಯೇ ಮೊಟ್ಟ ಮೊದಲ ಬಾರಿಗೆ ರಚನೆಗೊಂಡಿಲ್ಲ. ಕರ್ನಾಟಕದ ವಾಸ್ತುಶಿಲ್ಪಗಳ ಇತಿಹಾಸವನ್ನು ನೋಡಿದಾಗ ಕಥಾನಿರೂಪಣಾ ಶಿಲ್ಪಗಳು ಕ್ರಿ.ಶ. ಆರಂಭದಿಂದಲೇ ರಚನೆಗೊಂಡಿರುವುದು ಸನ್ನತಿಯ ಶಿಲ್ಪಗಳಲ್ಲಿ ಕಂಡುಬರುತ್ತವೆ. ಇಲ್ಲಿ ಗೌತಮಬುದ್ಧನ ಜೀವನದ ಘಟನಾವಳಿಗಳನ್ನು ಹಾಗೂ ಜಾತಕ ಕಥೆಗಳನ್ನು ಶಿಲ್ಪಗಳಲ್ಲಿ ನಿರೂಪಿಸಿರುವುದು ಇತ್ತೀಚಿನ ಅಧ್ಯಯನಗಳಿಂದ ಸಾಬೀತಾಗಿದೆ.[೫] ಹೀಗಾಗಿ ಕರ್ನಾಟಕದಲ್ಲಿ ಕಥಾನಿರೂಪಣಾ ಶಿಲ್ಪಗಳ ಆರಂಭವನ್ನು ಶಾತವಾಹನರ ಕಾಲದಿಂದಲೇ ಆಯಿತೆಂದು ಹೇಳಬಹುದು. ಆದರೆ ವೈದಿಕ ಧರ್ಮದ ಪೌರಾಣಿಕ ಕಥನಗಳು ಶಿಲ್ಪರೂಪದಲ್ಲಿ ನಿರೂಪಣೆ ಗೊಂಡಿದ್ದು, ಬಾದಾಮಿ ಚಾಲುಕ್ಯರ ಕಾಲದಿಂದಲೇ ಎಂದು ಸ್ಪಷ್ಟವಾಗಿ ಗುರುತಿಸ ಬಹುದು. ಬಾದಾಮಿ ಚಾಲುಕ್ಯರು ದಕ್ಷಿಣ ಭಾರತದಲ್ಲಿ ಪ್ರಪ್ರಥಮವಾಗಿ ಶಿಲಾ ದೇವಾಲಯಗಳನ್ನು ನಿರ್ಮಿಸಿದರು. ಅಲ್ಲದೆ ಹಲವಾರು ಸುಂದರ ಶಿಲ್ಪಗಳ ರಚನೆಗೂ ಕಾರಣರಾದರು. ಅವರ ಗುಹಾದೇವಾಲಯುಗಳಲ್ಲಿ ಮತ್ತು ನಿರ್ಮಿತಿ ದೇವಾಲಯಗಳಲ್ಲಿ ಕಥಾನಕ ಶಿಲ್ಪಗಳಲ್ಲಿ ದೇವದಾನವರ ಯುದ್ಧ, ಸಮುದ್ರಮಥನ ಹಾಗೂ ಕೃಷ್ಣಕಥನಕ್ಕೆ ಸಂಬಂಧಿಸಿದ ಶಿಲ್ಪ ನಿರೂಪಣೆಗಳು ಕಂಡುಬರುತ್ತವೆ.[೬] ಅದೇ ರೀತಿ ಮೇಗಣ ಶಿವಾಲಯಗಳಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಹಾಗೂ ಕೃಷ್ಣಕಥನದ ಆಯ್ದ ಘಟನೆಗಳು ನಿರೂಪಣೆಗೊಂಡಿವೆ. ಈ ಎಲ್ಲಾ ಶಿಲ್ಪಗಳ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಹೊಯ್ಸಳರು ದೇವಾಲಯಗಳನ್ನು ಸ್ವತಂತ್ರವಾಗಿ ನಿರ್ಮಿಸುವ ಹೊತ್ತಿಗೆ ಕಥಾನಿರೂಪಣಾ ಶಿಲ್ಪಗಳು ದೇವಾಲಯಗಳ ಅಲಂಕಾರಿಕ ಭಾಗವಾಗಿ ಬೆಳೆದುಬಂದಿದ್ದವು. ಹೀಗಾಗಿ ಹೊಯ್ಸಳ ಕಲಾವಿದರುಗಳು ನೇರವಾಗಿ ಅಂದು ಪ್ರಚಲಿತದಲ್ಲಿದ್ದ ಪೌರಾಣಿಕ ಘಟನೆಗಳನ್ನು ದೃಶ್ಯ ರೂಪದಲ್ಲಿ ಬಿಂಬಿಸಿದರು.

ಕಥೆಯ ಆಯ್ಕೆ ಮತ್ತು ನಿರೂಪಣೆ

ಶಿಲ್ಪಗಳ ರಚನೆಯಲ್ಲಿ ಯಾವ ಶಿಲ್ಪವನ್ನು ಕೆತ್ತಬೇಕು, ದೇವಾಲಯದ ಯಾವ ಭಾಗದಲ್ಲಿ ಉದ್ದೇಶಿತ ಶಿಲ್ಪಗಳಿಗೆ ಸೂಕ್ತವಾದಂತಹ ಸ್ಥಳಾವಕಾಶ ಕಲ್ಪಿಸಬೇಕು ಎಂಬುದನ್ನು ದೇವಾಲಯದ ಸ್ಥಪತಿ ಮತ್ತು ಶಿಲ್ಪಿಗಳು ಕೂಡಿ ನಿರ್ಧರಿಸುತ್ತಿದ್ದಂತೆ ತೋರುತ್ತದೆ. ಉದಾಹರಣೆಗೆ, ರಾಮಾಯಣದ ಕಥೆಯನ್ನೇ ದೇವಾಲಯದಲ್ಲಿ ನಿರೂಪಿಸಲು ಉದ್ದೇಶಿಸಿದ್ದರೆಂದು ತಿಳಿಯೋಣ. ಇಡೀ ರಾಮಾಯಣವನ್ನು ಮತ್ತು ಅದರ ಪ್ರತಿಯೊಂದು ಘಟನೆಗಳನ್ನು ಶಿಲ್ಪರೂಪದಲ್ಲಿ ಸಂಪೂರ್ಣವಾಗಿ ರಚಿಸುವುದು

ಕಷ್ಟಸಾಧ್ಯವಾಗುತ್ತದೆ. ಏಕೆಂದರೆ ಇಡೀ ರಾಮಾಯಣದ ಕಥೆ ಮತ್ತು ಘಟನೆಗಳಿಗೆ ಸ್ಥಳಾವಕಾಶ ದೊರೆಯುವುದು ಹೇಗೆ ? ಹೀಗಾಗಿ ಶಿಲ್ಪ ಕಲಾವಿದರು ಒಂದು ಪೌರಾಣಿಕ ಕಥೆಯನ್ನು ಬಿಂಬಿಸುವಾಗ ಇಡೀ ಕಥೆಯ ಅರ್ಥವನ್ನು ನೀಡುವಂತಹ ಆಯ್ದ ಪ್ರಮುಖ ಘಟನಾವಳಿಗಳನ್ನು ಮಾತ್ರ ನಿರೂಪಿಸಿರುವುದು ಕಂಡುಬರುತ್ತದೆ. ರಾಮಾಯಣದ ಪ್ರಮುಖ ಘಟನೆಗಳಾದ ಪುತ್ರ ಕಾಮೇಷ್ಠಿಯಜ್ಞ, ರಾಮಲಕ್ಷ್ಮಣ ಸೀತೆಯರ ವನವಾಸ, ಮಾರೀಚವಧ, ಶೂರ್ಪನಖಿ ಅಂಗವೈಕಲ್ಯ, ಹನುಮಂತ ಸುಗ್ರೀವರ ಭೇಟಿ, ಸಪ್ತತಾಲಹರಣ, ವಾಲಿವಧ, ರಾಮರಾವಣರ ಯುದ್ಧ, ಹೀಗೆ ಇಡೀ ರಾಮಾಯಣದ ಕಥೆಯನ್ನು ಸಂಪೂರ್ಣ ಅರ್ಥ ಬರುವ ರೀತಿಯಲ್ಲಿ ಪ್ರಮುಖ ಘಟನೆಗಳನ್ನು ಮಾತ್ರ ನಿರೂಪಿಸಿರುವುದು ಕೆಲವು ದೇವಾಲಯಗಳಲ್ಲಿ ಕಂಡುಬರುತ್ತವೆ. ಸ್ಥಳಾವಕಾಶ ಹೆಚ್ಚಿಗೆ ಲಭಿಸಿದ್ದಲ್ಲಿ ಚಲನಚಿತ್ರದ ಮಾದರಿಯಲ್ಲಿ ಹೆಚ್ಚು ವಿವರಣಾತ್ಮಕವಾಗಿ ಶಿಲ್ಪಗಳನ್ನು ನಿರೂಪಿಸಿರುವುದು ಕೂಡ ಕೆಲವು ದೇವಾಲಯಗಳಲ್ಲಿ ಗುರುತಿಸಬಹುದು. ಸಾಮಾನ್ಯವಾಗಿ ಕಥಾನಿರೂಪಣಾ ಶಿಲ್ಪಗಳನ್ನು ದೇವಾಲಯಗಳಲ್ಲಿ ಬಿಂಬಿಸುವಾಗ ಕೇವಲ ಒಂದೇ ಕಥನಕ್ಕೆ ಸೀಮಿತಗೊಳ್ಳುವುದಿಲ್ಲ. ಉದಾಹರಣೆಗೆ, ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಕಥಾನಿರೂಪಣಾ ಶಿಲ್ಪಗಳಲ್ಲಿ ಮಹಾಭಾರತ, ರಾಮಾಯಣ, ಪ್ರಹ್ಲಾದ ಚರಿತ, ಭಾಗವತ, ದೇವದಾನವರ ಯುದ್ಧ, ಕಿರಾತಾರ್ಜುನೀಯ ಕಥಾನಕ ಶಿಲ್ಪಗಳು ಕಂಡುಬರುತ್ತವೆ. ಅಲ್ಲದೆ ಆ ಕಾಲದ ಜನಮಾನಸದಲ್ಲಿ ಪ್ರಚಲಿತದಲ್ಲಿದ್ದಂತಹ ನೀತಿಕಥೆಗಳಾದ ಪಂಚತಂತ್ರದ ಕಥೆಗಳು ಕೂಡ ದೃಶ್ಯರೂಪದಲ್ಲಿ ನಿರೂಪಣೆಗೊಂಡಿವೆ. ಹೊಯ್ಸಳೇಶ್ವರ ದೇವಾಲಯದ ಅಧಿಷ್ಠಾನದ ಅಲಂಕಾರಿಕ ಪಟ್ಟಿಯಲ್ಲಿ ಈ ಎಲ್ಲಾ ಕಥನಗಳು ನಿರೂಪಣೆಗೊಂಡಿರುವುದು ವಿಶೇಷವಾಗಿ ಕಂಡುಬರುತ್ತವೆ. ಹೊಯ್ಸಳ ಕಲಾವಿದರುಗಳು ತಮ್ಮ ಕೆತ್ತನೆಯ ತಂತ್ರಗಾರಿಕೆಯಲ್ಲಿ ಅತ್ಯಂತ ನಿಷ್ಣಾತರಾಗಿದ್ದರು. ಕಥಾನಕ ಶಿಲ್ಪಗಳು ಮೇಲೆ ಹೇಳಿದಂತೆ ಅಧಿಷ್ಠಾನದ ಅಲಂಕಾರಿಕ ಪಟ್ಟಿಕೆಯಲ್ಲಿ ಕೆತ್ತಲಾಗಿವೆ. ಈ ಶಿಲ್ಪಗಳ ಅಳತೆ ಸುಮಾರು ೫ ಅಂಗುಲ ಇವೆ. ಅಂದರೆ ೫ ಅಂಗುಲ ಅಗಲದ ಪಟ್ಟಿಕೆಯಲ್ಲಿ ಅತ್ಯಂತ ಸೊಗಸಾಗಿ ಹಾಗೂ ವಿವರಣಾತ್ಮಕವಾಗಿ ಬಿಂಬಿಸಿರುವ ರೀತಿಯನ್ನು ಗಮನಿಸಬೇಕು. ಇರುವಂತಹ ಸ್ವಲ್ಪವೇ ಸ್ಥಳಾವಕಾಶದಲ್ಲಿ ತಾಂತ್ರಿಕವಾಗಿ ಅತ್ಯಂತ ಜಾಣ್ಮೆಯಿಂದ ಶಿಲ್ಪ ಕಲಾವಿದರುಗಳು ಈ ಕಥಾನಕ ಶಿಲ್ಪಗಳನ್ನು ಬಿಂಬಿಸಿರುವುದು ಅರ್ಥಪೂರ್ಣವಾಗಿದೆ.

ಹೊಯ್ಸಳ ದೇವಾಲಯಗಳಲ್ಲಿ ಕೆಲವೇ ಕೆಲವು ಕಥಾನಿರೂಪಣೆಗಳು ಇರುವಂತಹ ಉದಾಹರಣೆಗಳೂ ಇವೆ. ಉದಾ: ಕೋರವಂಗಲದ ಬುಚ್ಚೇಶ್ವರ ದೇವಾಲಯದ ಭಿತ್ತಿಯಲ್ಲಿ ಕೇವಲ ಪ್ರಹ್ಲಾದ ಚರಿತ ಮತ್ತು ಭಾಗವತದ ಆಯ್ದ ಘಟನೆಗಳನ್ನು ಮಾತ್ರ ಬಿಂಬಿಸಲಾಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಅಂದರೆ ನೇರವಾಗಿ ಭಿತ್ತಿಯನ್ನೇ ಕಥಾನಕ ಶಿಲ್ಪಗಳ ನಿರೂಪಣೆಗೆ ಬಳಸಿ ಕೊಂಡಿರುವುದು.

ಸಭಾಮಂಟಪದ ಕಕ್ಷಾಸನದ ಹೊರಭಾಗದಲ್ಲಿ ರಾಮಾಯಣ ಭಾಗವತ ಹಾಗೂ ಮಹಾಭಾರತದ ಘಟನೆಗಳನ್ನು ಅತ್ಯಂತ ಸೊಗಸಾಗಿ ಹಲವಾರು ದೇವಾಲಯಗಳಲ್ಲಿ ರಚಿಸಲಾಗಿದೆ. ಅಮೃತಾಪುರದ ಶಿಲ್ಪಗಳನ್ನು ಅಧ್ಯಯನ ಮಾಡಿದ 'ಕ್ರಿಸ್ಟಿ ಇವಾನ್ಸ್' ಎಂಬ ವಿದ್ವಾಂಸರು ಅವುಗಳ ನಿರೂಪಣಾ ತಂತ್ರಗಾರಿಕೆ ಹಾಗೂ ರಚನಾ ವಿಧಿಗಳನ್ನು ಕುರಿತಂತೆ ಬೆಳಕು ಚೆಲ್ಲಿದ್ದಾರೆ.[೭] ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ (ಹಾಸನ), ಜಾವಗಲ್ಲಿನ ಲಕ್ಷ್ಮೀನರಸಿಂಹ (ಹಾಸನ), ಹೊಸಹೊಳಲಿನ ಲಕ್ಷ್ಮೀನಾರಾಯಣ (ಮಂಡ್ಯ), ಬಸರಾಳಿನ ಮಲ್ಲಿಕಾರ್ಜುನ (ಮಂಡ್ಯ), ಸೋಮನಾಥಪುರದ ಕೇಶವ (ಮೈಸೂರು) ದೇವಾಲಯಗಳಲ್ಲಿ ಕಥಾನಕ ಶಿಲ್ಪಗಳು ಕಂಡುಬರುತ್ತವೆ. ಇವುಗಳಲ್ಲದೆ ಹಾರ್ನಹಳ್ಳಿ (ಹಾಸನ), ಕಿಕ್ಕೇರಿ (ಮಂಡ್ಯ), ಬೆಳವಾಡಿ (ಚಿಕ್ಕಮಗಳೂರು) ಈ ದೇವಾಲಯಗಳಲ್ಲಿಯೂ ಹಲವಾರು ಕಥಾನಕ ಶಿಲ್ಪಗಳು ಕಂಡುಬರುತ್ತವೆ. ಒಟ್ಟಾರೆಯಾಗಿ ಗಮನಿಸಿದಾಗ ಹೊಯ್ಸಳ ದೇವಾಲಯಗಳಲ್ಲಿ ರಾಮಾಯಣ ಮಹಾಭಾರತ ಹಾಗೂ ಭಾಗವತದ ಕಥೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆತಿರುವುದು ಶಿಲ್ಪಗಳ ಒಟ್ಟಾರೆ ಅಧ್ಯಯನದಿಂದ ತಿಳಿದುಬರುತ್ತದೆ.

ಐತಿಹಾಸಿಕವಾಗಿ ಹೊಯ್ಸಳರು ದೇವಾಲಯಗಳ ನಿರ್ಮಾಣವನ್ನು ಹೆಚ್ಚು ಪ್ರಚಲಿತವಾಗಿ ವಿಷ್ಣುವರ್ಧನ ಕಾಲದಿಂದ ನಿರ್ಮಿಸಲು ಪ್ರಾರಂಭಿಸಿದರೆಂದು ತಿಳಿದುಬರುತ್ತದೆ. ಕಾಲಘಟ್ಟಗಳ ಪ್ರಕಾರ ಕ್ರಿ.ಶ. ೧೧೧೩ರಲ್ಲಿ ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮಿದೇವಾಲಯ ನಿರ್ಮಾಣ ಮೊದಲ ಉದಾಹರಣೆ. ಕ್ರಿ.ಶ. ೧೧೧೭ರಲ್ಲಿ ನಿರ್ಮಾಣವಾದ ಬೇಲೂರಿನ ಚನ್ನಕೇಶವ ದೇವಾಲಯದಲ್ಲಿ ಮೊಟ್ಟ ಮೊದಲ ಬಾರಿಗೆ ಕಥಾನಕ ಶಿಲ್ಪಗಳು ಕಂಡುಬರುತ್ತವೆ. ಈ ದೇವಾಲಯದ ಭಿತ್ತಿಯಲ್ಲಿ ಪ್ರಹ್ಲಾದ ಚರಿತ ಹಾಗೂ ರಾಮಾಯಣದ ಕೆಲವು ಘಟನೆಗಳು ಕಂಡುಬರುತ್ತವೆ. ವಿಶೇಷವಾಗಿ ರಾಮಾಯಣದ ಅರಣ್ಯ ಕಾಂಡಕ್ಕೆ ಸಂಬಂಧಿಸಿದಂತಹ ವಾನರ ಭೇಟಿ ಹಾಗೂ ಹನುಮಂತನ ಲಂಕಾದಹನ ಮೊದಲಾದ ದೃಶ್ಯಗಳಿವೆ. ಪ್ರಹ್ಲಾದ

ಚರಿತೆಗೆ ಸಂಬಂಧಿಸಿದಂತೆ ಪ್ರಹ್ಲಾದನನ್ನು ಹಿರಣ್ಯಕಶಿಪು ಹಲವಾರು ಪರೀಕ್ಷೆಗಳಿಗೆ ಒಡ್ಡುತ್ತಿರುವ ದೃಶ್ಯಗಳಿವೆ.

ಕ್ರಿ.ಶ. ೧೧೨೧ರಲ್ಲಿ ನಿರ್ಮಾಣವಾದ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಅಲಂಕಾರಿಕ ಪಟ್ಟಿಕೆಗಳ ಮೇಲೆ ಅತ್ಯಂತ ವಿವರಣಾತ್ಮಕವಾದ ಹಲವಾರು ನಿರೂಪಣೆಗಳನ್ನು ನಾವು ಕಾಣಬಹುದು.[೮] ಮುಖ್ಯವಾಗಿ ರಾಮಾಯಣದ ಬಹುತೇಕ ಎಲ್ಲಾ ಪ್ರಮುಖ ಘಟನಾವಳಿಗಳು ಇಲ್ಲಿ ಕಂಡುಬರುತ್ತವೆ. ಅಲ್ಲದೆ ಮಹಾಭಾರತಕ್ಕೆ ಸಂಬಂಧಿಸಿದಂತಹ ಪಾಂಡವರು ಬಾಲಕರಾಗಿದ್ದುದು ಅವರ ಗುರುಕುಲವಾಸ, ವನವಾಸ, ದ್ರೌಪದಿ ವಸ್ತ್ರಾಪಹರಣ, ಲಾಕ್ಷಾಗೃಹ (ಅರಗಿನ ಮನೆ), ಕುರುಕ್ಷೇತ್ರ ಯುದ್ಧ, ಭಗವಾನ್ ಕೃಷ್ಣನಿಂದ ಅರ್ಜುನನಿಗೆ ಗೀತೋಪದೇಶ, ಅರಣ್ಯಪರ್ವಕ್ಕೆ ಪೂರಕವಾಗಿ, ಕಿರಾತಾರ್ಜುನೀಯ ಘಟನೆಗಳು ಅಲ್ಲದೆ ಚಕ್ರವ್ಯೂಹವನ್ನು ಅಭಿಮನ್ಯು ಭೇದಿಸುತ್ತಿರುವುದು ಅಭಿಮನ್ಯುವಧೆ, ಭೀಷ್ಮಾಚಾರ್ಯರು ಶರಶಯ್ಯೆಯ ಮೇಲೆ ಮಲಗಿರುವ ದೃಶ್ಯ ಹಾಗೂ ದುರ್ಯೋಧನ ವಧ ಹೀಗೆ ಮಹಾಭಾರತದ ಸಂಪೂರ್ಣ ಚಿತ್ರಣ ನೀಡುವ ಘಟನಾವಳಿಗಳು ಕಥಾ ನಿರೂಪಣೆಯಲ್ಲಿ ಕಂಡುಬರುತ್ತವೆ. ಇವುಗಳ ಜೊತೆಗೆ ಪ್ರಹ್ಲಾದ ಚರಿತೆಯೂ ಕೂಡ ಸಾಕಷ್ಟು ವಿವರಣಾತ್ಮಕವಾಗಿ ಮೂಡಿ ಬಂದಿರುವುದನ್ನು ಗಮನಿಸಬಹುದು. ಇವುಗಳಲ್ಲಿ ವಿಶೇಷವಾಗಿ ಕಿರಾತಾರ್ಜುನೀಯ ನಿರೂಪಣೆಯ ಶಿಲ್ಪಗಳು ವಿಶೇಷ ಗಮನ ಸೆಳೆಯುತ್ತವೆ. ಪಾಶುಪತ ಪಡೆಯಲು ಶಿವನನ್ನು ಕುರಿತು ತಪಸ್ಸು ಮಾಡುವ ಅರ್ಜುನ ಹಾಗೂ ಅರ್ಜುನನ ಬೆನ್ನ ಮೇಲೆ ಇರುವ "ಅಕ್ಷಿಯನ್ನು" ನೋಡುವ ಪಾರ್ವತಿಯ ಮನದಾಸೆ ಈ ಘಟನೆಗೆ ಕಾರಣವಾಗುತ್ತದೆ. ಕಾಡಿನಲ್ಲಿ ಒಂಟಿಕಾಲಿನ ಮೇಲೆ ತಪಸ್ಸನ್ನಾಚರಿಸುತ್ತಿದ್ದ ಅರ್ಜುನನನ್ನು ವಿಚಲಿತಗೊಳಿಸುವಂತೆ ಶಿವನೇ ಸೃಷ್ಟಿಸಿದ "ಕಾಡುಹಂದಿ"ಯ ತಪಸ್ಸನ್ನು ಭಂಗಗೊಳಿಸಿ ಕಾಡಿನಲ್ಲಿ ಓಡಿ ಹೋಗುತ್ತದೆ. ಶಬ್ದವೇದಿ ಬಾಣದಿಂದ ಹಂದಿಯನ್ನು ಕೊಲ್ಲಲಾಗಿ ಹಂದಿಗೆ ಎರಡು ಬಾಣಗಳು ನಾಟಿರುವುದನ್ನು ಅರ್ಜುನನು ಗಮನಿಸುತ್ತಾನೆ. ಆಗ ಪ್ರತ್ಯಕ್ಷನಾದ ಕಿರಾತಕ ವೇಷದ ಶಿವನು ಅಲ್ಲಿಗೆ ಪಾರ್ವತಿಯೊಂದಿಗೆ ಬರುತ್ತಾನೆ. ಆಗ ಶಿವ ಮತ್ತು ಅರ್ಜುನರ ಮಧ್ಯೆ ಬಾಣ ಹೊಡೆದಿರುವುದು ತಾನು ತಾನೆಂಬ ಚರ್ಚೆ ಮಲ್ಲಯುದ್ಧಕ್ಕೆ ತಿರುಗುತ್ತದೆ. ಈ ಯುದ್ಧದಲ್ಲಿ ಶಿವನು ಕೆಳಗೆ ಬೀಳಲಾಗಿ ಪಾರ್ವತಿಯು ಅರ್ಜುನನ ಬೆನ್ನ ಮೇಲಿನ ಅಕ್ಷಿಯನ್ನು ನೋಡುತ್ತಾಳೆ. ಕೊನೆಗೆ ಕಿರಾತಕ ವೇಷದ ಶಿವನ ನಿಜರೂಪ ಪ್ರಕಟವಾಗಿ ಅರ್ಜುನನಿಗೆ ಪಾಶುಪತಾಸ್ತ್ರವನ್ನು ನೀಡುತ್ತಾನೆ. ಈ ಘಟನೆ ಮೂಲತಃ

ಮಹಾಭಾರತದ ಕಥನವಾಗಿ ಮೂಡಿಬಂದಿದ್ದು ಐದನೆಯ ಶತಮಾನದ ಕವಿ ಭಾರವಿ ಈ ಘಟನೆಯನ್ನೇ ಅತ್ಯಂತ ಸುಂದರ ಕಾವ್ಯವನ್ನಾಗಿ ರಚಿಸಿದನು.[೯] ಕರ್ನಾಟಕದ ದೇವಾಲಯಗಳಲ್ಲಿ ಈ ಕಥನವು ಅತ್ಯಂತ ಸ್ವಾರಸ್ಯಕರವಾಗಿ ಮೂಡಿಬಂದಿರುವುದನ್ನು ಪ್ರಸ್ತುತ ಶಿಲ್ಪಗಳ ಉದಾಹರಣೆಯಿಂದ ನೋಡಬಹುದು.

ಹೊಯ್ಸಳ ದೇವಾಲಯಗಳಲ್ಲಿನ ಕಥಾನಕ ಶಿಲ್ಪಗಳಲ್ಲಿ ಅಮೃತಾಪುರದ ಅಮೃತೇಶ್ವರ (ಚಿಕ್ಕಮಗಳೂರು) ದೇವಾಲಯದ ಕಕ್ಷಾಸನದ ಶಿಲ್ಪಗಳು ಸಂಯೋಜನೆಯ ದೃಷ್ಟಿಯಿಂದ ಹಾಗೂ ನಿರೂಪಣಾ ತಂತ್ರಗಾರಿಕೆಯಿಂದ ಸಾಕಷ್ಟು ಆಸಕ್ತಿಯನ್ನು ಕೆರಳಿಸುತ್ತವೆ. ವಿಶೇಷವಾಗಿ ಇಲ್ಲಿಯೂ ಕೂಡ ರಾಮಾಯಣ ಭಾಗವತ ಹಾಗೂ ಮಹಾಭಾರತದ ಆಯ್ದ ಘಟನೆಗಳು ರಚನೆಯಾಗಿವೆ. ಇಲ್ಲಿನ ಕಥಾನಕ ಶಿಲ್ಪಗಳು ಕಕ್ಷಾಸನದ ಹೊರಭಾಗದಲ್ಲಿರುವುದನ್ನು ಮೇಲೆ ಹೇಳಿದ್ದೇವೆ. ರಾಮಾಯಣಕ್ಕೆ ಸಂಬಂಧಿಸಿದಂತೆ ಒಟ್ಟು ೭೧ ನಿರೂಪಣೆಗಳು ಭಾಗವತಕ್ಕೆ ಸಂಬಂಧಿಸಿದಂತೆ ಒಟ್ಟು ೨೬ ನಿರೂಪಣೆಗಳು ಹಾಗೂ ಮಹಾಭಾರತಕ್ಕೆ ಸಂಬಂಧಿಸಿದಂತೆ ಒಟ್ಟು ೩೪ ನಿರೂಪಣೆಗಳು ರಚನೆಗೊಂಡಿವೆ.[೧೦]

ರಾಮಾಯಣದ ಆರಂಭ ದಶರಥನ ಪುತ್ರ ಕಾಮೇಷ್ಟಿಯಜ್ಞದ ದೃಶ್ಯದಿಂದ ಪ್ರಾರಂಭವಾಗಿ ರಾವಣವಧೆ, ರಾಮಸೀತೆಯರ ಪುನರ್ಮಿಲನ ಹಾಗೂ ರಾಮಸೀತೆಯರು ವಾನರ ಮಧ್ಯೆ ಇರುವಂತೆ ಒಟ್ಟು ಸಾಕಷ್ಟು ವಿವರಣಾತ್ಮಕವಾಗಿ ಘಟನೆಗಳು ನಿರೂಪಣೆಗೊಂಡಿವೆ. ಭಾಗವತದ ಕಥೆಯಲ್ಲಿ ಕೃಷ್ಣನ ಜನನ, ಕೃಷ್ಣನನ್ನು ಗೋಕುಲಕ್ಕೆ ಕೊಂಡೊಯ್ಯುವುದು, ಕೃಷ್ಣನ ಬಾಲ್ಯದ ಘಟನಾವಳಿಗಳು ಹಾಗೂ ಕಂಸವಧದವರೆಗೆ ನಿರೂಪಣೆಗಳು ಕಂಡುಬರುತ್ತವೆ. ಮಹಾಭಾರತಕ್ಕೆ ಸಂಬಂಧಿಸಿದಂತೆ, ಬಾಲಪಾಂಡವರು ಭೀಷ್ಮನ ಹತ್ತಿರ ಇರುವುದು, ಲಾಕ್ಷಾಗೃಹ (ಅರಗಿನ ಮನೆ), ಹಿಡಿಂಬಾ ಮತ್ತು ಬಕಾಸುರವಧ, ದ್ರೌಪದಿ ವಸ್ತ್ರಾಪಹರಣ, ಕಿರಾತಾರ್ಜುನೀಯ ಹಾಗೂ ಶಿವನು ಅರ್ಜುನನಿಗೆ ಪಾಶುಪತಾಸ್ತ್ರವನ್ನು ನೀಡುವ ಸನ್ನಿವೇಶದೊಂದಿಗೆ ಮಹಾಭಾರತದ ಕಥೆ ಇಲ್ಲಿನ ದೃಶ್ಯ ನಿರೂಪಣೆಯಲ್ಲಿ ಮುಗಿಯುತ್ತದೆ. ಇಲ್ಲಿ ಗಮನಿಸಬೇಕಾದ ಅಂಶ ಅಂದರೆ ಈ ದೇವಾಲಯದಲ್ಲಿ ಮಾತ್ರ ಮಹಾಭಾರತದ ಸಂಪೂರ್ಣ ಕಥನ ಇರುವುದಿಲ್ಲ. ಹಳೇಬೀಡು, ನುಗ್ಗೇಹಳ್ಳಿ, ಸೋಮನಾಥಪುರ ಮೊದಲಾದ ದೇವಾಲಯಗಳಲ್ಲಿ ಮಹಾಭಾರತದ ನಂತರದ ಘಟನಾವಳಿಗಳು ಕೂಡ ಮೂಡಿಬಂದಿವೆ.

ಒಟ್ಟಾರೆಯಾಗಿ ಹೊಯ್ಸಳ ದೇವಾಲಯಗಳಲ್ಲಿ ಕಥಾನಕ ಶಿಲ್ಪಗಳು ದೇವಾಲಯ ಶಿಲ್ಪಗಳ ಭಾಗವಾದರೂ ಅಂದಿನ ಜನಸಮುದಾಯಕ್ಕೆ ನೀತಿಪಾಠವನ್ನು ಹೇಳುವಂತಹ ದೃಶ್ಯನಿರೂಪಣೆಗಳ ದಾಖಲೆಗಳಾಗಿವೆ.

ಅಡಿಟಿಪ್ಪಣಿಗಳು

೧. ದಯಾನಂದ ಪಟೇಲ್ : ಕೇಶವಾ ಟೆಂಪಲ್ ಸೋಮನಾಥಪುರ, ಎ ಕಲ್ಚರಲ್ ಸ್ಟಡಿ, ದಿಲ್ಲಿ.

೨. ರಂಗರಾಜು ಎನ್.ಎಸ್. : ದಿ ಹೊಯ್ಸಳಾ ಟೆಂಪಲ್ಸ್ ಇನ್ ಮಂಡ್ಯ ಅಂಡ್ ತುಮಕೂರು ಡಿಸ್ಟ್ರಿಕ್ಟ್, ಮೈಸೂರು ವಿಶ್ವವಿದ್ಯಾನಿಲಯ.

೩. ಮೋಹನ್ ಬಿ.ಕೆ. : ೨೦೦೫, ನುಗ್ಗೆಹಳ್ಳಿಯ ದೇವಾಲಯಗಳು ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ.

೪. ಎಂ.ಎ.ಆರ್.ಗಳಲ್ಲಿ : ಆರ್. ನರಸಿಂಹಾಚಾರ್ ಮತ್ತು ಡಾ. ಎಂ.ಎಚ್. ಕೃಷ್ಣರವರು ಬಹುತೇಕ ಹೊಯ್ಸಳ ದೇವಾಲಯಗಳ ಕಥಾನಿರೂಪಣಾ ಶಿಲ್ಪಗಳನ್ನು ಗುರುತಿಸಿ ಎಂ.ಎ.ಆರ್.ಗಳಲ್ಲಿ ಪ್ರಕಟಿಸಿದ್ದಾರೆ.

೫. ಕುಲಕರ್ಣಿ ಆರ್.ಎಚ್. : ೨೦೦೮, ಕರ್ನಾಟಕದ ಆರಂಭಿಕ ಶಿಲ್ಪಕಲೆ, ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

೬. ಬ್ಯಾನರ್ಜಿ ಆರ್.ಡಿ : ೧೯೨೮, ಬಾಸ್ ರಿಲೀಫ್ಸ್ ಆಫ್ ಬಾದಾಮಿ, ASI, MASI-27.

೭. ಕ್ರಿಸ್ಟಿ ಇವಾನ್ಸ್ : ೧೯೯೭, ಎಪಿಕ್ ನರೇಟಿವ್ಸ್ ಇನ್ ದಿ ಹೊಯ್ಸಳಾ ಟೆಂಪಲ್ಸ್.

೮. ಎಂ.ಎ.ಆರ್. ೧೯೩೦, ಪು. ೩೪-೪೯.

೯. ಎಂ.ಎಸ್. ನಾಗರಾಜರಾವ್ ಕಿರಾತಾರ್ಜುನಿಯಂ ಇನ್ ಇಂಡಿಯನ್ ಆರ್ಟ್.

೧೦. ಎಂ.ಎ.ಆರ್. ೧೯೩೧ ಹಾಗೂ ಕ್ರಿಸ್ಟಿ ಇವಾನ್ಸ್ : ಪೂರ್ವೋಕ್ತ.

೮. ಪತ್ರಿಕೋದ್ಯಮಿಯಾಗಿ ಗಾಂಧೀಜಿ

– ಡಾ. ಸಿ.ಕೆ. ಪುಟ್ಟಸ್ವಾಮಿ

ಭಾರತೀಯ ಪತ್ರಿಕೋದ್ಯಮದ ಉಗಮ ರೋಮಾಂಚನಕಾರಿ. ಪತ್ರಿಕಾ ರಂಗದಿಂದ ಜನ ಸೇವೆ ಮಾಡಿದವರು ಅನೇಕ ಮಂದಿ ಇದ್ದಾರೆ. ಅಂತಹವರಲ್ಲಿ ರಾಜರಾಮ್ ಮೋಹನರಾಯ್, ತಿಲಕ್, ಗೋಖಲೆ, ಮೌಲಾನಾ ಅಬ್ದುಲ್ ಕಲಾಂ, ಅಜಾದ್, ಜವಾಹರಲಾಲ್ ನೆಹರೂ ಮತ್ತು ಡಾ. ಬಿ.ಆರ್. ಅಂಬೇಡ್ಕರ್‌ರವರೇ ಮುಂತಾದವರು. ಇವರೆಲ್ಲರೂ ಭಾರತೀಯ ಪತ್ರಿಕೋದ್ಯಮ ಕ್ಷೇತ್ರವನ್ನು ಶ್ರೀಮಂತಗೊಳಿಸಿದರು. ಇವರಂತೆಯೇ ಮಹಾತ್ಮ ಗಾಂಧಿಯೂ ಒಬ್ಬರು. ಅವರು ಈ ಕ್ಷೇತ್ರಕ್ಕೆ ಕಾಲಿಟ್ಟಿದ್ದು ಹಣ ಗಳಿಸಲು ಅಲ್ಲ ತಮ್ಮ ಜೀವನದ ಆದರ್ಶಗಳು ಮತ್ತು ಮೌಲ್ಯಗಳನ್ನು ಪ್ರಚಾರಪಡಿಸಲು ಮುಂದೆ ಬಂದರು.

ಗಾಂಧೀಜಿಗೆ ಪತ್ರಿಕೋದ್ಯಮದಲ್ಲಿ ಆಸಕ್ತಿ ಹುಟ್ಟಿದ್ದು ಆಕಸ್ಮಿಕ. ಅವರು ಕಾನೂನು ಅಭ್ಯಾಸಕ್ಕಾಗಿ ಲಂಡನ್ನಿಗೆ ಹೋದಾಗ ಅಲ್ಲಿನ ಪತ್ರಿಕೆಗಳಾದ ಲಂಡನ್ ಟೈಮ್ಸ್, ಡೈಲಿ ಟೆಲಿಗ್ರಾಫ್ ಮತ್ತು ಪಾಲ್ ಮಾಲ್ ಗೆಜೆಟ್ ಅನ್ನು ಮೊದಲಬಾರಿಗೆ ಓದುವ ಹವ್ಯಾಸ ಬೆಳೆಸಿಕೊಂಡರು. ಪತ್ರಿಕೆ ಓದಿದ ನಂತರ ಲೇಖನಗಳನ್ನು ಬರೆಯುವ ಹುಮ್ಮಸ್ಸು ಮೂಡಿಸಿಕೊಂಡಿದ್ದರು. ಲಂಡನ್‌ನಲ್ಲಿ ವೆಜಿಟೇರಿಯನ್ ಸೊಸೈಟಿಯವರು ಹೊರಡಿಸುತ್ತಿದ್ದ ವೆಜಿಟೇರಿಯನ್ ಎಂಬ ಪತ್ರಿಕೆಯಲ್ಲಿ ಸಸ್ಯಾಹಾರ ಕುರಿತು ಮೊದಲ ಲೇಖನ ಪ್ರಕಟಿಸಿದರು. ಅಲ್ಲದೆ ಬಹುತೇಕ ಲೇಖನಗಳನ್ನು ಭಾರತೀಯ ಸಂಸ್ಕೃತಿ ಮತ್ತು ಆಚಾರ ವಿಚಾರಗಳ ಬಗ್ಗೆಯೂ ಬರೆಯುತ್ತಿದ್ದರು. ಹೀಗೆ ವಿದೇಶದಲ್ಲಿದ್ದಾಗ ಗಾಂಧೀಜಿಯವರು ಹವ್ಯಾಸಿ ಪತ್ರಕರ್ತರಾಗಿ ಪತ್ರಿಕೆಗಳಿಗೆ ಬರೆಯುತ್ತಿದ್ದರು.

ಗಾಂಧೀಜಿಯವರು ಪತ್ರಕರ್ತರಾಗಬೇಕೆಂದು ಕನಸು ಕಾಣುತ್ತಿರಲಿಲ್ಲ. ಆದರೆ ಪತ್ರಿಕೋದ್ಯಮ ಅವರನ್ನು ಸೆಳೆಯಿತು. ಇದು ಅವರ ಮುಂದಿನ ಸ್ವಾತಂತ್ರ್ಯ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿತು.

ದಕ್ಷಿಣ ಆಫ್ರಿಕಾಕ್ಕೆ ಮೊಕದ್ದಮೆಯೊಂದರ ಪರ ವಕಾಲತ್ತು ವಹಿಸಲು ಹೊರಟಾಗ ಅವರಿಗೆ ಪತ್ರಿಕೋದ್ಯಮದ ನಿರ್ದಿಷ್ಟ ರೂಪ ತಿಳಿಯಿತು. ದಕ್ಷಿಣ ಆಫ್ರಿಕಾದಲ್ಲಿದ್ದ ಭಾರತೀಯರ ಪರಿಸ್ಥಿತಿ ತುಂಬಾ ಹೀನಾಯವಾಗಿದ್ದಿತ್ತು. ವರ್ಣಭೇದ ಮತ್ತು ಜನಾಂಗ ಭೇದದ ವಿರುದ್ಧ ಹೋರಾಡಲು ಅವರು ನಿರ್ಧರಿಸಿದರು. ಅವರಿಗೆ ರಾಜಕೀಯ ಜೀವನದ ಮೊದಲ ದೀಕ್ಷೆಯು ದೊರೆಯಿತು.

ತಮ್ಮ ಹೋರಾಟದಲ್ಲಿ ಪತ್ರಿಕೆಗಳ ಮಹತ್ವದ ಪಾತ್ರವನ್ನು ಗಾಂಧೀಜಿ ಅರಿತಿದ್ದರು. ಅವರು ಸ್ಥಳೀಯ ಪತ್ರಿಕೆಗಳನ್ನು ಪೂರ್ಣವಾಗಿ ಓದಿ, ಅದನ್ನು ವಿಶ್ಲೇಷಿಸುತ್ತಿದ್ದರು. ತಮ್ಮ ಹೋರಾಟಕ್ಕೆ ಬೆಂಬಲಗಳಿಸಿಕೊಳ್ಳಲು ಭಾರತದಾದ್ಯಂತ ಪ್ರವಾಸ ಮಾಡಿದರು. ಆಗ ಟೈಮ್ ಆಫ್ ಇಂಡಿಯಾ ಪತ್ರಿಕೆಗೆ ಬರೆದ ಒಂದು ಪತ್ರದಲ್ಲಿ ಬ್ರಿಟಿಷರಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಪ್ರಚಾರವೇ ಅತ್ಯುತ್ತಮ ಸಾಧನ ಮತ್ತು ಏಕೈಕ ಅಸ್ತ್ರ.... ಎಂದು ತಿಳಿಸಿದರು. ಆಗ ಅಲಹಾಬಾದಿನಿಂದ ಪ್ರಕಟವಾಗುತ್ತಿದ್ದ 'ದಿ ಪಯನೀರ್' ಪತ್ರಿಕೆಯಲ್ಲಿ ದಕ್ಷಿಣ ಆಫ್ರಿಕಾದ ಭಾರತೀಯ ಪರಿಸ್ಥಿತಿಯ ಬಗ್ಗೆ ಗ್ರೀನ್ ಪಾಂಪ್ಲೇಟ್ (ಹಸಿರು ಕರಪತ್ರ) ಎಂಬ ವಿಷಯವನ್ನು ಪತ್ರಿಕೆಯ ಸಂಪಾದಕ ಜೆನ್ನಿಯವರು ಸಂಪಾದಕೀಯದಲ್ಲಿ ಬರೆದಿದ್ದರು. 'ಮದ್ರಾಸ್ ಸ್ಟ್ಯಾಂಡರ್ಡ್' ಪತ್ರಿಕೆಯು ಗಾಂಧೀಜಿಯವರ ಹೋರಾಟಕ್ಕೆ ಮೀಸಲಿಟ್ಟಿತು. 'ದಿ ಹಿಂದೂ' ಪತ್ರಿಕೆಯ ಸಂಪಾದಕರೂ ಸಹ ಸಹಕಾರ ನೀಡಿದರು. ಕಲ್ಕತ್ತಾದ ಅಮೃತ ಬಜಾರ್ ಪತ್ರಿಕೆಯು ಗಾಂಧೀಜಿಯವರ ಸಂಪರ್ಕ ಬೆಳೆಸಿಕೊಂಡವು. ಸ್ಟೇಟ್ಸ್‌ಮನ್ ಪತ್ರಿಕೆಯು ಉತ್ತಮ ಬಾಂಧವ್ಯವನ್ನು ಬೆಳೆಸಿಕೊಂಡಿತು. ಎಲ್ಲಾ ಪತ್ರಿಕೆಗಳಿಂದ ಗಾಂಧೀಜಿಗೆ ಅಪೂರ್ವ ಬೆಂಬಲ ದೊರೆಯಿತು. ಹೀಗೆ ಎಲ್ಲಾ ಪತ್ರಿಕೆಗಳಿಗೆ ಗಾಂಧೀಜಿ ತಮ್ಮ ಹೋರಾಟದ ಬಗ್ಗೆ ಸಂಪಾದಕೀಯಗಳನ್ನು ಬರೆಯಲು ಹಿನ್ನೆಲೆ ಸಾಮಗ್ರಿಯನ್ನು ಒದಗಿಸುತ್ತಿದ್ದರು.

ಗಾಂಧೀಜಿಯವರಿಗೆ ಪತ್ರಿಕೆ ಆರಂಭಿಸುವ ಆಲೋಚನೆ ಬಂದದ್ದು ದಕ್ಷಿಣ ಆಫ್ರಿಕಾಕೆ ತೆರಳಿದಾಗ ದಾದಾಬಾಯಿನವರೋಜಿಯವರು ಇಂಗ್ಲೆಂಡಿನಲ್ಲಿ 'ಇಂಡಿಯಾ' ಪತ್ರಿಕೆಯನ್ನು ೧೮೯೦ರಲ್ಲಿ ಆರಂಭಿಸಿದರು. ಗಾಂಧೀಜಿಯವರು ಈ ಪತ್ರಿಕೆಯ ಬಾತ್ಮೀದಾರರಾಗಿ ಡರ್ಬಾನ್, ಜೋಹಾನ್ಸ್‌ಬರ್ಗ್‌ನಿಂದ ಕೆಲಸ ಮಾಡಿದರು. ತಮ್ಮ ವರದಿಯಲ್ಲಿ ದಕ್ಷಿಣ ಆಫ್ರಿಕಾದ ಭಾರತೀಯರ ಸಮಸ್ಯೆಗಳನ್ನು ಮತ್ತು ಕಷ್ಟಗಳನ್ನು

ವಿವರವಾಗಿ ಚಿತ್ರಿಸುತ್ತಿದ್ದರು. ೧೮೯೭ರಲ್ಲಿ ಭಾರತದಲ್ಲಿ ಬರಗಾಲ ಪೀಡಿತವಾಗಿದ್ದರಿಂದ ವಿದೇಶದಲ್ಲಿದ್ದ ಭಾರತೀಯರ ಸಹಾಯಕ್ಕೆ ಗಾಂಧೀಜಿ ನೇತಾಲ್ ಮರ್ಕ್ಯುರಿ ಪತ್ರಿಕೆಗೆ ಒಂದು ಲೇಖನ ಬರೆದರು. ೧೮೯೯ರಲ್ಲಿ ಬೋಯರ್ ಯುದ್ಧ ಆರಂಭವಾದಾಗ ಗಾಂಧೀ ಗಾಯಾಳುಗಳ ಸೇವೆಗೆ ಮುಂದೆ ಬಂದರು. ಯುದ್ಧಭೂಮಿಯಿಂದ ಮುಂಬಯಿ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗೆ ವರದಿಗಳನ್ನು ಕಳುಹಿಸುತ್ತಿದ್ದರು.

ಗಾಂಧೀಜಿಯವರು ಮತ್ತು ನೇತಾಲ್ ಕಾಂಗ್ರೆಸ್‌ನ ಪ್ರಚಾರ ಸಾಹಿತ್ಯವೆಲ್ಲಾ 'ದಿ ಇಂಟರ್‌ನ್ಯಾಷನಲ್ ಪ್ರಿಂಟಿಂಗ್ ಪ್ರೆಸ್ ಡರ್ಬಾನ್'ನಲ್ಲಿ ಮುದ್ರಿತವಾಗುತ್ತಿದ್ದವು. ಆಗ ಒಂದು ಸಾಪ್ತಾಹಿಕ ಪತ್ರಿಕೆಯನ್ನು ನಡೆಸಲು ಗಾಂಧೀ ಮದನಜಿತ್‌ರವರಿಗೆ ಪ್ರೇರೇಪಿಸಿದರು. ಆಗ 'ಇಂಡಿಯನ್ ಒಪಿನಿಯನ್' ಪತ್ರಿಕೆ ಜೂನ್ ೪, ೧೯೦೩ರಲ್ಲಿ ಅಸ್ತಿತ್ವಕ್ಕೆ ಬಂದಿತು. ಆಗ ಮದನ್‌ಜಿತ್ ಪತ್ರಿಕೆಯ ಮಾಲೀಕ. ಮೊದಲ ಸಂಚಿಕೆಯ ಅಗ್ರ ಲೇಖನವನ್ನು ಗಾಂಧೀಜಿಯು ಬರೆದರು. ಯಂಗ್ ಇಂಡಿಯಾ ಸಾಪ್ತಾಹಿಕವನ್ನು ಅರ್ಧ ಸಾಪ್ತಾಹಿಕವನ್ನಾಗಿ ಪ್ರಕಟಿಸಬೇಕೆಂದು ನಿರ್ಧರಿಸಿ ಗಾಂಧೀಜಿಯವರು ಸಂಪಾದಕರಾಗಿ ನೇಮಕಗೊಂಡರು. ಇದರ ಜೊತೆಗೆ ಗುಜರಾತಿ ಪತ್ರಿಕೆಯೊಂದನ್ನು ನಡೆಸಲು ಗಾಂಧೀಜಿ ಮುಂದೆ ಬಂದರು. ಇವರ ಆಸೆಗೆ ಇಂದೂಲಾಲ್ ಯಾಜ್ಞಿಕ್ ಉಮರ್ ಸೋಬಾನಿ ಮತ್ತು ಶಂಕರಲಾಲ್ ಬ್ಯಾಂಕರ್‌ರವರು 'ಸಂತ ಜೀವನ್' ಎಂಬ ಗುಜರಾತಿ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಈ ಪತ್ರಿಕೆಯನ್ನೂ ಸಹ ಗಾಂಧೀಜಿಯವರಿಗೆ ವಹಿಸಿದರು. ಗಾಂಧಿಯವರು ಈ ಪತ್ರಿಕೆಯನ್ನು ಸಾಪ್ತಾಹಿಕವಾಗಿ ಪರಿವರ್ತಿಸಿದರು.

೫. ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವ
- ಒಂದು ಸ್ಥೂಲ ನೋಟ

-ಅರುಳಪ್ಪ ಪಿ.

ಜೀವನವು ಅನ್ವೇಷಣೆಯ ಪರಂಪರೆ. ಸತ್ಯವನ್ನು ಹುಡುಕುವುದು ಅದರ ಗುರಿ. ಈ ರೀತಿ ಹುಡುಕುವ ಪ್ರಕ್ರಿಯೆಯಲ್ಲಿ ಚರಿತ್ರೆ, ತತ್ತ್ವಶಾಸ್ತ್ರ - ಹೀಗೆ ಅನೇಕ ವಿಭಾಗಗಳು ಹುಟ್ಟಿಕೊಂಡವು. ಇವುಗಳಲ್ಲಿ ವಿಜ್ಞಾನವು ಒಂದು. ವಿಜ್ಞಾನವೆಂದರೇನು? ವಿಜ್ಞಾನವೆಂಬುದನ್ನು ಅದು ಹುಡುಕುವ ವಿಷಯದಿಂದ ಗೊತ್ತು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ವಿಜ್ಞಾನಕ್ಕೆ ಇಂಥದೇ ಎಂದು ಗೊತ್ತಾದ ವಿಷಯವಿಲ್ಲ. ಪ್ರಪಂಚದ ಯಾವ ವಸ್ತುವೇ ಆಗಲಿ, ಯಾವ ಕ್ರಿಯೆಯೇ ಆಗಲಿ ಇದು ಅದು ಎನ್ನದೆ ಎಲ್ಲವೂ ವಿಜ್ಞಾನದ ವಿಷಯವಾಗಬಹುದು. ಜಡವಾದ ಅಣುವಿನಿಂದ ಹಿಡಿದು ಚೇತನರೂಪವಾದ ಆತ್ಮದವರೆಗೆ, ತೃಣಕಾಷ್ಠಗಳಿಂದ ಹಿಡಿದು ಋಗ್ವೇದದ ದೇವರುಗಳ ಬೆಳೆವಣಿಗೆಯವರೆಗೆ, ಎಲ್ಲವೂ ವಿಜ್ಞಾನದ ವಿಚಾರಕ್ಕೆ ಒಳಪಡುತ್ತವೆ. ಒಂದೇ ವಿಷಯವು ಇತಿಹಾಸ ಕ್ಷೇತ್ರದಲ್ಲೂ ಬರಬಹುದು. ಸಾಹಿತ್ಯ ಕ್ಷೇತ್ರದಲ್ಲೂ ಬರಬಹುದು, ವಿಜ್ಞಾನ ಕ್ಷೇತ್ರದಲ್ಲೂ ಬರಬಹುದು, ಆದುದರಿಂದ ವಿಜ್ಞಾನ, ಚರಿತ್ರೆ, ಸಾಹಿತ್ಯ ಇವುಗಳಲ್ಲಿರುವ ವ್ಯತ್ಯಾಸವು ಅವು ವಿಚಾರಮಾಡುವ ವಸ್ತುವಿನಲ್ಲಿಲ್ಲ, ಅವು ನೋಡುವ ದೃಷ್ಟಿಯಲ್ಲಿದೆ. ಅವು ಉಪಯೋಗಿಸುವ ಕ್ರಮದಲ್ಲಿದೆ. ಆಯಾ ದೃಷ್ಟಿಗೆ ತಕ್ಕಂತೆ ಅದರ ಅನ್ವೇಷಣೆಯೂ ವ್ಯತ್ಯಾಸ ಹೊಂದುತ್ತದೆ. ಆದುದರಿಂದ ವಿಜ್ಞಾನವೇನು ಎಂಬುದನ್ನು ತಿಳಿಯಬೇಕಾದರೆ ಅದರ ದೃಷ್ಟಿ ಏನು, ಅದು ಉಪಯೋಗಿಸುವ ಅನ್ವೇಷಣ ಕ್ರಮಗಳು ಯಾವುವು ಎಂಬುದನ್ನು ನಾವು ನಿರ್ಧರಿಸಬೇಕು.

ಮೊದಲು ವೈಜ್ಞಾನಿಕ ದೃಷ್ಟಿಯನ್ನು ತೆಗೆದುಕೊಳ್ಳೋಣ. ಸತ್ಯ ಪ್ರೇಮವೇ ಯಥಾರ್ಥ, ಜ್ಞಾನಾನುರಾಗವೇ ಇದರ ಮುಖ್ಯ ಲಕ್ಷಣ. ಯಥಾರ್ಥಜ್ಞಾನವೆಂದರೆ ಇದ್ದ ವಿಷಯವನ್ನು ಇದ್ದ ಹಾಗೆ ತಿಳಿದುಕೊಳ್ಳುವುದು, ಇದ್ದ ಹಾಗೆ ಹೇಳುವುದು. ಇದೇನು ಮಹಾ ವಿಷಯವೆನ್ನಬಹುದು. ಆದರೆ ನಮ್ಮ ಮನಸ್ಸನ್ನು ಒಳಹೊಕ್ಕು ಪರೀಕ್ಷೆ ಮಾಡಿಕೊಂಡರೆ, ಯಥಾರ್ಥಜ್ಞಾನವು ಎಷ್ಟು ಕಷ್ಟಸಾಧ್ಯವೆಂದು ಗೊತ್ತಾಗುವುದು. ಯಥಾರ್ಥ ಜ್ಞಾನವು ಮನುಷ್ಯನಿಗೆ ಹುಟ್ಟಿಬಂದ ಪ್ರವೃತ್ತಿಯಲ್ಲ. ಅದು ವಿಶೇಷವಾದ ಕೃಷಿಯಿಂದ ಪಡೆಯತಕ್ಕದ್ದು. ಅದು ಸಿದ್ಧಿಸಬೇಕಾದರೆ ವಿಜ್ಞಾನಿಯು ಅನೇಕ ವರ್ಷಗಳ ಕಾಲ ಸಾಧನೆ ಮಾಡಬೇಕು. ಏಕೆಂದರೆ ನಾವು ಹುಟ್ಟಿದಂದಿನಿಂದ ಹಲವು ಅಭಿಮಾನಪರಂಪರೆಗಳಿಗೆ ಅಧೀನರಾಗುತ್ತಲೇ ಇದ್ದೇವೆ. ನಾನು, ನನ್ನದು, ನನ್ನ ಮನೆ, ನನ್ನ ಜಾತಿ, ನನ್ನ ಮತ, ನನ್ನ ದೇಶ ಈ ರೀತಿಯಾಗಿ ಎಲ್ಲವೂ ನಮ್ಮ ಬದುಕಿಗೆ ಹತ್ತಿಬಂದ ಚಾಳಿ. ಈ ಅಭಿಮಾನವು, ಈ ಮಮತೆಯು – ಒಂದು ದೃಷ್ಟಿಯಿಂದ ಅವಶ್ಯಕ. ನಮ್ಮ ಸಾಂಸಾರಿಕ ಜೀವನವೂ ಸಾಮಾಜಿಕ ವ್ಯವಹಾರಗಳೂ ನಿಂತಿರುವುದು ಈ ಮಮತೆಯ ಅಸ್ತಿಭಾರದ ಮೇಲೆ.

ನಮಗೆ ಹಿತವಾದುದನ್ನು ಅಪ್ಪಿಕೊಳ್ಳುವುದೂ ಅಹಿತವಾದುದನ್ನು ಅಳಿಸಿಬಿಡುವುದೂ ನಮ್ಮ ಮನಸ್ಸಿನ ಲಕ್ಷಣ. ನಮಗೆ ಬೇಡವಾದುದನ್ನು ಬಿಡುವಂತೆಯೇ ಬೇಕಾದುದನ್ನು ಸೇರಿಸಿಕೊಳ್ಳುವುದೂ ನಮ್ಮ ಮನಸ್ಸಿಗೆ ಹತ್ತಿಬಂದ ಇನ್ನೊಂದು ದೋಷ. ಇವುಗಳನ್ನು ರಾಗದ್ವೇಷಗಳೆಂದು ಕರೆಯುತ್ತಾರೆ.

ಆದರೆ ಅನವೇಕ್ಷಣ ಅತ್ಯವೇಕ್ಷಣಗಳನ್ನು ತಡೆದು ಯಥಾರ್ಥಜ್ಞಾನವನ್ನು ಸಾಧಿಸಿದ ಮಾತ್ರಕ್ಕೆ ಸತ್ಯ ಪ್ರೇಮವು ಪೂರ್ಣವಾಗುವುದಿಲ್ಲ. ಅದು ಪೂರ್ಣವಾಗ ಬೇಕಾದರೆ ಕಂಡುದನ್ನು ಕಂಡ ಹಾಗೆ ಹೇಳುವ ಧೈರ್ಯವೂ ಬೇಕು.

ಹಾಗೆ ನೋಡಿದರೆ ನಮ್ಮ ದೇಶದವರೆಷ್ಟೋ ವಾಸಿ. ಯಥಾರ್ಥವಾಗಿ ನುಡಿದವರನ್ನು ಶೂಲಕ್ಕೆ ಏರಿಸುವುದಿಲ್ಲ. ಬದುಕಿದ್ದವರನ್ನೇ ಸುಡುವುದಿಲ್ಲ. ಆದರೆ, ಪಾಶ್ಚಾತ್ಯ ದೇಶಗಳಲ್ಲಿ ಯಥಾರ್ಥವಾದುದನ್ನು ನುಡಿದುದಕ್ಕಾಗಿ ಅನೇಕ ವಿಜ್ಞಾನಿಗಳು ಮರಣದಂಡನೆಗೆ ಗುರಿಯಾಗಬೇಕಾಯ್ತು. ಗೆಲಿಲಿಯೋ ಎಂಬ ಪ್ರಖ್ಯಾತ ಖಗೋಳ ಶಾಸ್ತ್ರಜ್ಞನು ಕ್ರೈಸ್ತ ವೇದಕ್ಕೆ ವಿರೋಧವಾಗಿ, ಭೂಮಿಯು ಸೂರ್ಯನ ಸುತ್ತ ಸುತ್ತುತ್ತದೆ ಎಂದು ಹೇಳಿದನು. ಅದಕ್ಕಾಗಿ ಕ್ರೈಸ್ತ ಸ್ವಾಮಿಗಳು ಅವನನ್ನು ಚಿತ್ರಹಿಂಸೆಗೆ ಗುರಿಮಾಡಿದರು. ಹಾಗೆಯೇ ಸಾಕ್ರಟೀಸನಿಗೆ ಹೆಮ್ಲಾಕ್ ವಿಷವನ್ನು ಉಣಿಸಿದರು. ವಿಶದೈಕ್ಯವಾದವನ್ನು ಪ್ರತಿಪಾದಿಸಿದ ಬ್ರೂನೋ ಎಂಬ ತಾತ್ವಿಕನು ದೋಷ

ಪೂರಿತವಾದ ಜಗತ್ತನ್ನು ದೇವರೊಂದಿಗೆ ಏಕೀಕರಿಸಿದ ಎಂಬ ಕಾರಣಕ್ಕಾಗಿ ಅವನನ್ನು ಸಜೀವದಹನ ಮಾಡಿದರು. ಈ ಅಸಹನೆ ಇನ್ನೂ ಪಾಶ್ಚಾತ್ಯರನ್ನು ಪೂರ್ಣವಾಗಿ ಬಿಟ್ಟಿಲ್ಲ. ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಒಂದಾದ ಟೆನಿಸ್ಸಿಯಲ್ಲಿ ಒಬ್ಬ ಉಪಾಧ್ಯಾಯನು ಪರಿಣಾಮವಾದವನ್ನು ಬೋಧಿಸಿದಾಗ ಅಲ್ಲಿಯ ಜನಗಳಿಗೆ ತಾವು ಕಪಿಲನ ಜ್ಞಾತಿಗಳೆಂದು ಕೇಳುವುದು ಅಸಹ್ಯವಾಗಿ ಆ ವಾದವನ್ನೇ ಕಾನೂನಿನ ಮೂಲಕ ವಿರೋಧಿಸಿದರು. ಈ ಬಗೆಯ ಚಿತ್ರಹಿಂಸೆ ಪ್ರತಿಭಟನೆಗಳಿಗೆಲ್ಲ ಹೆದರದೆ ವೈಜ್ಞಾನಿಕರು ತಾವು ಕಂಡ ಸತ್ಯವನ್ನು ಸಾರಿದುದರಿಂದಲೇ ವಿಜ್ಞಾನವು ಇಷ್ಟು ಮುಂದುವರಿದಿದೆ. ಅರಮನೆಯವರಿಗೂ ಗುರುಮನೆಯವರಿಗೂ ಹೆದರಿಕೊಂಡು ಬಾಯಿಬಿಡದೆ ಇದ್ದಿದ್ದರೆ ವಿಜ್ಞಾನದ ಹೆಸರೇ ಉಳಿಯುತ್ತಿರಲಿಲ್ಲ. ಯಾವ ಕಾಲದಲ್ಲಿ ಯಾವ ಅಂಧಶ್ರದ್ಧೆಗಳಿಗೆ ಯಾವ ವೈಜ್ಞಾನಿಕ ವಿಷಯವು ವಿರೋಧಿಯಾಗುವುದೋ ಹೇಳುವುದಕ್ಕಾಗುವುದಿಲ್ಲ. ಹಾಗೇ ವಿರೋಧ ಬರುವುದು ಮಾತ್ರ ನಿಶ್ಚಯ; ಅದರಿಂದ ವಿಜ್ಞಾನಿಗೆ ಕಷ್ಟಾನಿಷ್ಟಗಳೊದಗುವುದೂ ನಿಶ್ಚಯ. ಇದಕ್ಕೆಲ್ಲಾ ಹೆದರದೆ ಯಥಾರ್ಥ ವಾದವನ್ನು ನುಡಿಯುವುದು ವಿಜ್ಞಾನಿಯ ಕರ್ತವ್ಯ.

ಸತ್ಯದಲ್ಲಿ ಪ್ರೀತಿಯೂ ಇರಬಹುದು. ನಿಜವನ್ನು ಹೇಳುವ ಧೈರ್ಯವೂ ಇರಬಹುದು. ಅಷ್ಟುಮಾತ್ರಕ್ಕೆ ಒಬ್ಬನು ವಿಜ್ಞಾನಿಯಾಗುವುದಿಲ್ಲ. ಏಕೆಂದರೆ ಪ್ರೀತಿ ಧೈರ್ಯೋತ್ಸಾಹಗಳು ಸತ್ಯಕ್ಕೆ ಸಹಕಾರಿಗಳಾಗದೆ ಅದಕ್ಕೆ ಅಡಚಣೆಗಳಾಗುವ ಸಂಭವವೂ ಉಂಟು. ತಾಯಿಗೆ ಮಗುವಿನ ಮೇಲೆ ಪ್ರೀತಿ ಇರುವುದು ಅದರ ಅಭ್ಯುದಯಕ್ಕೆ ಅಗತ್ಯ. ಆದರೆ ತಾಯಿಗೆ ಪ್ರೀತಿಯೊಂದಿದ್ದ ಮಾತ್ರಕ್ಕೆ ಅವಳು ಮಗುವನ್ನು ವಿಚಕ್ಷಣೆಯಿಂದ ಪೋಷಿಸಬಲ್ಲಳೆಂದು ಹೇಳಲಾಗುವುದಿಲ್ಲ. ಕೆಲವು ವೇಳೆ ತಾಯಿಯ ಪ್ರೀತಿ ಮಗುವಿನ ಪ್ರಾಣವನ್ನು ತಿನ್ನುವ ಸಂಭವವುಂಟು. ಸತ್ಯಪ್ರೇಮವು ನಿಜವಾಗಿ ಫಲದಾಯಕವಾಗಬೇಕಾಗಿದ್ದರೆ ವಿಜ್ಞಾನಿಗೆ ವಿಶೇಷವಾದ ಮನೋಜಾಗೃತಿ ಇರಬೇಕು. ಅವನ ಕೆಲಸವು ನೆರವಾಗಬೇಕಾದರೆ ಮನಸ್ಸು ಯಾವಾಗಲೂ ಎಚ್ಚರಗೊಂಡಿರಬೇಕು. ಮನಸ್ಸು ತೂಕಡಿಸುವುದನ್ನು ತಡೆದು, ಯಾವ ಸೂಚನೆಯೇ ಬರಲಿ ಯಾವ ಸಿದ್ಧಾಂತವೇ ಹೊಳೆಯಲಿ ಅದನ್ನು ವಿಚಾರದ ಒರೆಗಲ್ಲಿಗಿಟ್ಟು ನೋಡುವುದು ಎಚ್ಚೆತ್ತ ವಿಜ್ಞಾನಿಯ ಲಕ್ಷಣ. ಸಂಶಯವನ್ನು ಮುಂದು ಮಾಡಿ ಸಿದ್ಧಾಂತವನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಪಳಗಿದ ವೈಜ್ಞಾನಿಕ ಮನೋವೃತ್ತಿಯ ಕುರುಹು. ಆದರೆ ಸಂಶಯವನ್ನು ಮುಂದು ಮಾಡುವುದು ಸುಲಭದ ಕೆಲಸವಲ್ಲ. ಅದರ ಬಲದಿಂದ ನಂಬಿಕೆಯನ್ನು ಒಂದು ಕಡೆ ಹಿಡಿದು ನಿಲ್ಲಿಸಿದರೆ ಅದು

ಇನ್ನೊಂದು ಕಡೆಯಿಂದ ಹೊರಹೊಮ್ಮುತ್ತದೆ. ವಿಶ್ವವೆಲ್ಲಾ ಚಿತ್ಸ್ವರೂಪವಾದುದು, ಬ್ರಹ್ಮಮಯವಾದುದು ಎನ್ನುವುದು ಒಂದು ಪಕ್ಷ. ವಿಶ್ವವೆಲ್ಲಾ ಭೌತವಾದುದು ಎನ್ನುವುದು ಇನ್ನೊಂದು ಪಕ್ಷ. ಇವೆರಡರಲ್ಲಿ ಒಂದರಕಡೆಗೆ ಹರಿಯದಂತೆ ನಂಬಿಕೆಯನ್ನು ತಡೆದು ನಿಲ್ಲಿಸಿದರೆ, ಅದು ಇನ್ನೊಂದರ ಕಡೆಗೆ ಸುರಿಯುವುದು, ದೇವರಿದ್ದಾನೆ ಎಂಬುದಕ್ಕೆ ರುಜುವಾತು ಸಾಲದೆನ್ನುವುದನ್ನೇ ವಿಶ್ವವೆಲ್ಲಾ ಭೌತವಾದುದು ಎಂಬ ನಂಬಿಕೆಗೆ ರುಜುವಾತಾಗಿ ಇಟ್ಟುಕೊಳ್ಳುವವರಿದ್ದಾರೆ. ಹಕ್ಲೆ ಹೇಳುವಂತೆ "ರುಜುವಾತಿನ ಎಲ್ಲೆಯನ್ನು ಮೀರಿದ ಸಿದ್ಧಾಂತವು ಬರಿಯ ಪ್ರಮಾದವಲ್ಲ, ಅದು ಒಂದು ದೊಡ್ಡ ಪಾತಕ". ನಿಜವಾದ ವಿಜ್ಞಾನಿಯ ಲಕ್ಷಣಗಳನ್ನು ವಿವರಿಸುತ್ತಾ ಫ್ಯಾರೆಡೆ ಹೀಗೆ ಹೇಳಿರುವನು – "ಯಾರು ಏನು ಸೂಚನೆಯನ್ನಾದರೂ ಕೊಡಲಿ, ವಿಜ್ಞಾನಿಯಾದವನು ಅದಕ್ಕೆ ಕಿವಿಗೊಟ್ಟು ಕೇಳಬೇಕು. ಆದರೆ ಅದನ್ನು ವಿಚಾರಮಾಡಿ ಅಂಗೀಕರಿಸುವ ಅಥವಾ ಬಿಡುವ ಅಧಿಕಾರವನ್ನು ಮಾತ್ರ ತಾನೇ ಉಳಿಸಿಕೊಳ್ಳಬೇಕು. ಬರಿಯ ತೋರ್ಕೆಯಿಂದ ಮೋಸ ಹೋಗಬಾರದು. ಇದು ನನ್ನ ಸೂಚನೆ ಎಂಬ ಮಮತೆಗೆ ಈಡಾಗಬಾರದು. ಎಷ್ಟೇ ಗಣ್ಯವಾದುದಾಗಲಿ ಯಾವ ಒಂದು ಮತಕ್ಕೂ ಮನ ಸೋಲಬಾರದು. ಎಷ್ಟು ಗಟ್ಟಿಗನಾದರೂ ಆಗಲಿ ಅವನನ್ನು ಗುರುವಾಗಿ ಎಣಿಸಕೂಡದು. ಪೂಜ್ಯ ಭಾವವೇನಿದ್ದರೂ ಅದನ್ನು ವಿಚಾರ ಮಾಡುವ ವಸ್ತುವಿನಲ್ಲಿ ತೋರಿಸಬೇಕೇ ಹೊರತು ಯಾವ ಒಬ್ಬ ವ್ಯಕ್ತಿಯಲ್ಲೂ ತೋರಿಸಲಾಗದು. ಸತ್ಯವೊಂದೇ ವಿಜ್ಞಾನಿಯ ಪರಮಧ್ಯೇಯವಾಗಿರಬೇಕು. ಇದರ ಜತೆಗೆ ಶ್ರಮಪಟ್ಟು ಕೆಲಸ ಮಾಡುವ ಅಭ್ಯಾಸವು ಇದ್ದರೆ, ಅವನು ಪ್ರಕೃತಿ ದೇವಿಯ ಮಂದಿರದ ಪ್ರಕಾರದಲ್ಲಿ ಸುಳಿದಾಡಲಿಚ್ಛಿಸಬಹುದು."

ಸಂಶಯಮಾರ್ಗವು ಸತ್ಯದ ಹೆದ್ದಾರಿ. ಆದರೆ ಸಂಶಯಕ್ಕೂ ಮಿತಿಯುಂಟು. ಆ ಮಿತಿಯನ್ನು ಮೀರಿದರೆ ಅದು ಶೂನ್ಯವಾಗಿ ಪರಿಣಮಿಸುವುದು. ಸಂಶಯವು ವಿಜ್ಞಾನದ ಅಂಗವಾಗಿರಬೇಕೇ ಹೊರತು ಅದರ ಧ್ಯೇಯವಾಗಬಾರದು. ಹೀಗೆ ವಿಷಯವನ್ನು ಸ್ಪಷ್ಟವಾಗಿ ಗ್ರಹಿಸಬೇಕೆಂದರೆ, ವಿಜ್ಞಾನಿಯು ಸರ್ವಜ್ಞನಾಗಬೇಕೆಂದು ಅರ್ಥವಲ್ಲ. ವಿಜ್ಞಾನಿಯ ದೃಷ್ಟಿಯು ಪೂರ್ಣದೃಷ್ಟಿಯಲ್ಲ. ಅದು ಅಂಶ ದೃಷ್ಟಿ ಎಲ್ಲವನ್ನೂ ಒಟ್ಟಿಗೆ ತಿಳಿಯಬೇಕೆಂಬ ಆಸೆ ಅವನಿಗಿಲ್ಲ. ಅವನು ಕೋರುವುದು ಒಂದು ಅಂಶದ ಜ್ಞಾನ, ಆದರೆ ಈ ಅಂಶ ಜ್ಞಾನವು ಮಾತ್ರ ಸುಸ್ಪಷ್ಟವಾಗಿರಬೇಕೆಂದು ಇವನ ಇಚ್ಛೆ

ಹೆಗಲ್ ಎಂಬ ಪ್ರಸಿದ್ಧ ತಾತ್ವಿಕನು ಹೇಳುವಂತೆ-ಮಾತುಗಳಿಗೆ ಕೈಕಾಲುಗಳಿವೆ. ಸನ್ನಿವೇಶದಿಂದ ಸನ್ನಿವೇಶಕ್ಕೆ, ಕಾಲದಿಂದ ಕಾಲಕ್ಕೆ ಇವು ಬದಲಾಯಿಸುವುದು. ಈಗ ಸಂಕೋಚವಾಗುವುವು. ಇನ್ನೊಂದು ವೇಳೆಗೆ ವಿಕಾಸವಾಗುವುವು. ಮಾತಿನ ಈ ಶಕ್ತಿಯು ಸಾಹಿತ್ಯದಲ್ಲಿ ಅರ್ಥಪುಷ್ಟಿಗೆ ಸಹಕಾರಿಯಾಗಿ ಪರಿಣಮಿಸುತ್ತದೆ. ಆದರೆ ವಿಜ್ಞಾನದಲ್ಲಿ ಅದು ಅಸ್ಪಷ್ಟತೆಗೂ ಮಿಥ್ಯಾಜ್ಞಾನಕ್ಕೂ ತವರುಮನೆಯಾಗುತ್ತದೆ. ಆದುದರಿಂದ ವಿಜ್ಞಾನಿ ತನ್ನ ಭಾವಗಳನ್ನು ತಿಳಿಯಾಗಿ ಮಾಡಲು ತನ್ನದೇ ಒಂದು ಭಾಷೆಯನ್ನು ಮಾಡಿಕೊಂಡಿದ್ದಾನೆ. ಈ ಭಾಷೆಯು ಸಾಹಿತ್ಯ ದೃಷ್ಟಿಯಿಂದ ಎಷ್ಟೇ ನೀರಸವಾಗಿ ಕಂಡರೂ ಶಾಸ್ತ್ರ ದೃಷ್ಟಿಯಿಂದ ಅದರಲ್ಲಿ ವಿಶೇಷ ಸೌಲಭ್ಯವಿದೆ.

ವೈಜ್ಞಾನಿಕ ದೃಷ್ಟಿ ಪೂರ್ಣವಾಗಬೇಕಾದರೆ ಅದಕ್ಕೆ ಬೇಕಾದ ಇನ್ನೊಂದು ಅಂಶವುಂಟು. ಇದು ಪರಸ್ಪರ ಸಂಬಂಧ ಜ್ಞಾನ ಪ್ರಕೃತಿಯಲ್ಲಿ ಒಂದು ಕ್ರಮವಿದೆ, ಒಂದು ರಚನೆ ಇದೆ. ಅದರಲ್ಲಿ ವಿಷಯಗಳು ಹಾಸುಹೊಕ್ಕುಗಳಂತೆ ಒಂದಕ್ಕೊಂದು ಹೆಣೆದುಕೊಂಡಿವೆ ಎಂಬ ಈ ನಂಬಿಕೆ ವಿಜ್ಞಾನಿಯ ಸಕಲ ಅನ್ವೇಷಣಗಳಿಗೂ ಉದ್ಯಮಗಳಿಗೂ ಪ್ರೇರಕ. ಈ ಪರಸ್ಪರ ಸಂಬಂಧಜ್ಞಾನವು ಎಲ್ಲಾ ವಿಜ್ಞಾನಿಗಳಲ್ಲೂ ಇದೆ. ಆದರೆ ಇದು ಡಾರ್ವಿನ್ನಿನ ಕೆಲಸದಲ್ಲಿ ಎದ್ದು ಕಾಣುತ್ತದೆ, ಅವನ ಕೆಲಸಕ್ಕೆಲ್ಲಾ ಹಿನ್ನೆಲೆಯಾಗಿ ನಿಂತು ಅವನ ಒಂದೊಂದು ಊಹೆಯನ್ನೂ ಪುಷ್ಟೀಕರಿಸಿದೆ. ಅವನ ಪುಸ್ತಕಗಳ ಪುಟಪುಟದಲ್ಲಿಯೂ ಅತಿ ವಿಸ್ಮಯಕರವಾದ, ಊಹಿಸುವುದಕ್ಕೂ ಆಗದಂಥ ಸಂಬಂಧ ವಿಶೇಷಗಳು ತುಂಬಿ ತುಳುಕುತ್ತಿವೆ. ವಿಜ್ಞಾನವು ಬೆಳೆದ ಹಾಗೆಲ್ಲಾ, ವಿಶ್ವದಲ್ಲಿ ಎಲ್ಲವೂ ಬಾಂಧವ್ಯದಲ್ಲಿ ಬೆರೆತಿವೆ ಎಂಬ ವೈಜ್ಞಾನಿಕ ಭಾವವು ಕ್ರಮಕ್ರಮವಾಗಿ ಸಾಮಾನ್ಯ ಜನರಲ್ಲೂ ಮೂಡುತ್ತಿವೆ.

ಇದುವರೆಗೂ ವೈಜ್ಞಾನಿಕ ಮನೋಧರ್ಮವನ್ನು ನಿರೂಪಿಸಿದುದಾಯಿತು. ಇನ್ನು ವಿಜ್ಞಾನಿಯು ಉಪಯೋಗಿಸುವ ಕ್ರಮಗಳನ್ನು ಕುರಿತು ಸಂಗ್ರಹವಾಗಿ ವಿಚಾರ ಮಾಡೋಣ.

ಪ್ರಕೃತಿ ಬಹು ವಿಸ್ತಾರವಾಗಿದೆ. ಅದರಲ್ಲಿ ವಿಷಯಗಳು ಒಂದಕ್ಕೊಂದಕ್ಕೆ ದಟ್ಟವಾಗಿ ಹೆಣೆದುಕೊಂಡಿವೆ. ನಮ್ಮ ಬುದ್ಧಿಶಕ್ತಿ ಅಲ್ಪವಾದುದು. ವಿಶಾಲವೂ ಜಟಿಲವೂ ಆದ ವಿಷಯ ಪ್ರಪಂಚವನ್ನು ಮಾನವನು ತನ್ನ ಅಲ್ಪವಾದ ಬುದ್ಧಿಯ ಹಿಡಿತಕ್ಕೆ ತಂದುಕೊಳ್ಳುವುದು ಹೇಗೆ ಎಂಬ ಸಮಸ್ಯೆ ಸಹಜವಾಗಿ ಹುಟ್ಟಿತು. ಇದಕ್ಕೆ ಪರಿಹಾರವಾಗಿ ವೈಜ್ಞಾನಿಕರು ಒಂದು ಉಪಾಯವನ್ನು ಹುಡುಕಿದರು. ಅದೇ ವಿಭಜನಾಕ್ರಮ. ನಾವು ನಿತ್ಯವೂ ಮಾಡುವ ಕೆಲಸದಲ್ಲೂ ವಿಭಜನೆಯುಂಟು.

ಉಂಡೆಯಾದುದನ್ನು ಒಡೆದು ತಿನ್ನುತ್ತೇವೆ. ಹಾಲಿನಿಂದ ಬೆಣ್ಣೆ ತೆಗೆಯುತ್ತೇವೆ. ಸಮುದ್ರದ ನೀರಿನಿಂದ ಉಪ್ಪನ್ನು ಮಾಡುತ್ತೇವೆ. ಅದುರಿನಿಂದ ಲೋಹವನ್ನು ಪ್ರತ್ಯೇಕಿಸುತ್ತೇವೆ. ಒಗ್ಗಟ್ಟಾಗಿರುವ ಶತ್ರುಗಳನ್ನು ಭೇದಿಸಿ ಜಯಿಸುತ್ತೇವೆ. ಹೀಗೆ ಉಂಡೆಯಾಗಿರುವುದನ್ನು ವಿಭಾಗ ಮಾಡುವುದೂ, ತೊಡಕಾದುದನ್ನು ಬಿಡಿಸುವುದೂ, ಕೂಡಿರುವುದನ್ನು ಬೇರೆಮಾಡುವುದೂ ನಮ್ಮ ನಿತ್ಯ ಕಾರ್ಯ. ಇದರ ರೂಪಾಂತರವೇ ವೈಜ್ಞಾನಿಕರ ವಿಭಜನಾಕ್ರಮ.

ಹೀಗೆ, ವಿಭಜನೆಯು ವಿಶೇಷವಾಗಿ ಮುಂದುವರಿಯುತ್ತಿರುವುದು ಯಂತ್ರಗಳು, ಉಪಕರಣಗಳ ಸಹಾಯದಿಂದ. ಮಾನವನ ಇಂದ್ರಿಯ ಬುದ್ಧಿಗಳೇ ಈ ಕಾರ್ಯದಲ್ಲಿ ಮೊಟ್ಟಮೊದಲನೆಯ ಉಪಕರಣಗಳೆನ್ನಬಹುದು. ವಿಭಜನೆಯು ವಿಜ್ಞಾನದ ಅಂಗವಾಗುವುದಕ್ಕೆ ಮೊದಲೇ ಜೀವನದ ಅಂಗವಾಗಿತ್ತು. ಜೀವನದ ಶಿಖರದಲ್ಲಿ ನಿಂತಿರುವ ಮನುಷ್ಯನಲ್ಲಿ ಜ್ಞಾನೇಂದ್ರಿಯಗಳೆಂಬ ಅನೇಕ ಇಂದ್ರಿಯ ವಿಶೇಷಗಳು ಉದ್ಭವಿಸಿವೆ. ದೂರದರ್ಶಿನಿ, ಸೂಕ್ಷ್ಮದರ್ಶಿನಿ, ವೈರ್‌ಲೆಸ್, ಎಕ್ಸ್-ರೇ ಇತ್ಯಾದಿ ಉಪಕರಣಗಳ ಸಹಾಯದಿಂದ ಪ್ರಕೃತಿಯ ವಿಭಜನೆಯನ್ನು ಮುಂದುವರೆಸಿ, ಅದರ ಮೇಲೆ ತನ್ನ ಹಿಡಿತವನ್ನು ಹೆಚ್ಚಿಸಿಕೊಂಡನು.

ತನ್ನ ವಿಭಜನೆಯ ಕೆಲಸವನ್ನು ಮುಂದುವರಿಸಲು ವಿಜ್ಞಾನಿಯು ಭೌತಯಂತ್ರಗಳನ್ನು ಮಾತ್ರವಲ್ಲ, ಮಾನಸಿಕ ಯಂತ್ರಗಳನ್ನೂ ಏರ್ಪಡಿಸಿಕೊಂಡನು. ಈ ಮಾನಸಿಕ ಯಂತ್ರಗಳಲ್ಲಿ ಎಣಿಕೆ ಒಂದು.

ವಿಷಯಗಳನ್ನು ವಿಭಜನೆ ಮಾಡಬಹುದು. ಯಂತ್ರಗಳ ಸಹಾಯದಿಂದ ಅವುಗಳ ರಹಸ್ಯವನ್ನು ಭೇದಿಸಬಹುದು. ಎಣಿಕೆ ಮಾಡಿ ಅವುಗಳನ್ನು ಗಣಿತಸೂತ್ರದಲ್ಲಿ ಕಟ್ಟಿ ಬಿಗಿಯಬಹುದು. ಇಷ್ಟಾದರೂ ಆ ವಿಷಯಗಳ ಜ್ಞಾನವು ವಿಜ್ಞಾನವಾಗದಿರಬಹುದು.

ವ್ಯಾಪ್ತಿ ಜ್ಞಾನಕ್ಕೆ ಮುಖ್ಯ ಸಾಧನವು ಭಾವನಾಶಕ್ತಿ-ಪ್ರತಿಭೆ. ಭಾವನಾಶಕ್ತಿಯು ಕವಿಗೆ ಎಷ್ಟು ಅವಶ್ಯಕವೋ ವೈಜ್ಞಾನಿಕನಿಗೂ ಅಷ್ಟೇ ಅವಶ್ಯಕ. ನ್ಯೂಟನ್ನನಿಗೆ ಈ ಭಾವನಾಶಕ್ತಿ ಇದ್ದುದರಿಂದಲೇ ಒಂದು ಸೇಬಿನ ಹಣ್ಣು ಬಿದ್ದುದನ್ನು ನೋಡಿದ ಮಾತ್ರಕ್ಕೆ ಸಮಗ್ರ ವಿಶ್ವವನ್ನೇ ವ್ಯಾಪಿಸುವಂಥ ವಿಶಾಲವಾದ ಸೂಚನೆ ಅವನ ಮನಸ್ಸಿಗೆ ಹೊಳೆದುದು.

ಈ ಭಾವನಾಶಕ್ತಿಯ ಪ್ರಭಾವದಿಂದಲೇ ಫ್ಯಾರಡೇ, ಡಾರ್ವಿನ್, ಕೆಲ್ವಿನ್, ಕ್ಲಾರ್ಕ್ ಮ್ಯಾಕ್‌ಸ್ವೆಲ್ ಇತ್ಯಾದಿ ವಿಜ್ಞಾನಿಗಳು ಅತಿ ವಿಸ್ಮಯಕರವಾದ, ವಿಶ್ವವ್ಯಾಪಕವಾದ

ಸಂಬಂಧವನ್ನು ಕಂಡುಹಿಡಿದುದು. ಹೀಗೆ ಕವಿಗೂ ವಿಜ್ಞಾನಿಗೂ ಭಾವನಾಶಕ್ತಿಯು ಸಮಾನವಾದರೂ ಅದು ಅವರಿಬ್ಬರಲ್ಲೂ ಬೇರೆ ಬೇರೆ ರೀತಿಯಾಗಿ ಕೆಲಸ ಮಾಡುತ್ತದೆ. ಕವಿಯ ಕಲ್ಪನೆಯ ಗುರಿಯೇ ಬೇರೆ, ವೈಜ್ಞಾನಿಕನ ಕಲ್ಪನೆಯ ಗುರಿಯೇ ಬೇರೆ. ಕವಿಯ ಧ್ಯೇಯ ಸೌಂದರ್ಯ, ವೈಜ್ಞಾನಿಕನ ಧ್ಯೇಯ ಸತ್ಯ. ಕವಿ ಕಲ್ಪಿಸಿದುದು ಪ್ರಪಂಚದಲ್ಲಿ ಇದ್ದರೂ ಇರಬಹುದು. ಇಲ್ಲದಿದ್ದರೂ ಇರಬಹುದು. ಅದು ಸುಂದರವಾಗಿದ್ದರೆ ಸರಿ. ವೈಜ್ಞಾನಿಕನು ಕಲ್ಪಿಸಿದುದಾದರೂ ಪ್ರಪಂಚದಲ್ಲಿ ಇದ್ದೇ ಇರಬೇಕು. ಅದು ಸುಂದರವಾಗಿರಬಹುದು ಇಲ್ಲದಿರಬಹುದು. ಆದರೆ ಅದು ಸತ್ಯವಾಗಿರಬೇಕು. ವೈಜ್ಞಾನಿಕ ಭಾವನೆಯು ಎಷ್ಟು ಎತ್ತರಕ್ಕೆ ಬೇಕಾದರೂ ಏರಬಹುದು. ಎಷ್ಟು ಆಳಕ್ಕೆ ಬೇಕಾದರೂ ಇಳಿಯಬಹುದು. ಎಷ್ಟು ವಿಸ್ಮಯವನ್ನಾದರೂ ಉದ್ರೇಕಿಸಬಹುದು. ಕೊನೆಯಲ್ಲಿ ಅದು ಯಥಾರ್ಥವಾಗಿ ಮಾತ್ರ ಇರಬೇಕು.

ಭಾವನಾಶಕ್ತಿಯಿಂದ ಹುಟ್ಟಿದ ಕಲ್ಪನೆಯು ಯಥಾರ್ಥವಾಗಲು ಅದಕ್ಕೆ ರುಜುವಾತುಗಳು ಬೇಕು. ರುಜುವಾತಿಗೆ ಮುಖ್ಯವಾದ ಸಾಧನಗಳು ಎರಡು, ತರ್ಕ ಮತ್ತು ಪ್ರಯೋಗ.

ಪ್ರಯೋಗದಿಂದ ನಮಗೆ ಆಗುವ ಉಪಯೋಗವು ಅದು ಅನೇಕ ಸಿದ್ಧಿಗಳನ್ನು ಒದಗಿಸಿಕೊಟ್ಟಿದೆ. ಪ್ರಯೋಗದ ಬಲದಿಂದ ವಿಜ್ಞಾನವು ಒಂದು ಬೆಳಕಾದುದಲ್ಲದೆ, ಒಂದು ದೊಡ್ಡ ಶಕ್ತಿಯೂ ಆಗಿದೆ. ಪ್ರಯೋಗದ ಪ್ರಭಾವದಿಂದ ನಮಗೆ ಪ್ರಕೃತಿಯ ಗುಟ್ಟೆಲ್ಲಾ ಬಯಲಾದುದಲ್ಲದೆ, ಪ್ರಕೃತಿಗೆ ಲಗಾಮು ಹಾಕಿಕಟ್ಟಿ ನಮಗೆ ಬೇಕು ಬೇಕಾದ ಹಾಗೆ ಅದನ್ನು ತಿರುಗಿಸಿಕೊಳ್ಳುವ ಶಕ್ತಿಯೂ ದೊರೆತಿದೆ.

ವಿಜ್ಞಾನವು ಜ್ಞಾನವೂ ಹೌದು, ಶಕ್ತಿಯೂ ಹೌದು. ಆದರೆ ವಿಜ್ಞಾನ ಸಿದ್ಧಿಶಕ್ತಿಗೆ ಮರುಳಾಗಿ ಅದು ಪ್ರಥಮತಃ ಜ್ಞಾನವೆಂಬುದನ್ನು ಮರೆಯುವ ಸಂಭವವುಂಟು. ದುಷ್ಪರಿಣಾಮಗಳಿಗೆ ವಿಜ್ಞಾನವಾಗಲಿ, ವೈಜ್ಞಾನಿಕವಾಗಲಿ ನಿಜವಾದ ಕಾರಣವಲ್ಲ. ಈ ತಪ್ಪು ಅವರದಲ್ಲ; ಆಧುನಿಕ ಸಂಸ್ಕೃತಿಯದು. ವಿಜ್ಞಾನವು ಮತದಂತೆ ಪವಿತ್ರ ವಾದುದು. ಆದರೆ ಒಂದು ಕಾಲದಲ್ಲಿ ಅಂಧರಾದ ಅರ್ಥಕಾಮಿಗಳಾದ ಅರ್ಚಕ ಪುರೋಹಿತರ ಒಳಸಂಚಿನಿಂದ ಮತವೂ ಧರ್ಮವೂ ಅಪವಿತ್ರವಾದುವು. ಹಾಗೆಯೇ ಈಗ ಅರ್ಥಕಾಮಿಗಳಾದ ವರ್ತಕರು, ಅವರ ಅನುಯಾಯಿಗಳಾದ ರಾಜಕಾರಣ ಪಟುಗಳು ಇವರ ಒಳಸಂಚಿನಿಂದ ವಿಜ್ಞಾನವು ಅಪವಿತ್ರವಾಗಿದೆ. ವಿಜ್ಞಾನವು ಜೀವನದ ಸರ್ವಾಧಿಕಾರಿಯಾಗಲು ಬಯಸಿದರೆ ಜೀವನದ ಶ್ರೇಯಸ್ಸಿಗೆ ಭಂಗಬರುವುದು. ಇದಕ್ಕೆ ಪ್ರತಿಯಾಗಿ ಜೀವನದ ಇತರ ಅಧಿಕಾರಿಗಳೊಡನೆ ತಾನು ಸಹಕರಿಸಿದರೆ, ಆದರೆ ಶ್ರೇಯಸ್ಸಿಗೆ ಒಂದು ಆಧಾರಸ್ತಂಭವಾಗುವುದು.

ಮುಂದೆ ಇದರಲ್ಲಿಯೇ ವಿಜ್ಞಾನವು ಬೆಳೆವಣಿಗೆ ಎಂಬ ವಿಷಯದ ಬಗ್ಗೆ ತಿಳಿಯೋಣ. ಈಜಿಪ್ಟ್ ಬ್ಯಾಬಿಲೋನಿಯಾ ಮತ್ತು ಗ್ರೀಕ್ ವಿಜ್ಞಾನ ಯಾವುದಾದರೂ ಒಂದು ಪದಾರ್ಥವನ್ನು ವಿವರಿಸಬೇಕಾದರೆ ಒಬ್ಬೊಬ್ಬನು ಒಂದೊಂದು ಕ್ರಮವನ್ನು ಹಿಡಿದು ಅದನ್ನು ವರ್ಣಿಸುವನು. ಒಬ್ಬನು ಅದನ್ನು ಭಾಗಭಾಗವಾಗಿ ವಿಂಗಡಿಸಿ ಅದರ ಅಂಗರಚನೆಯನ್ನು ತೋರಿಸುವನು. ಇನ್ನೊಬ್ಬನು ಅದು ಹುಟ್ಟಿದುದು ಹೇಗೆ, ಬೆಳೆದುದು ಹೇಗೆ, ಅದು ಈಗಿರುವ ರೂಪವನ್ನು ತಾಳಿದ ಬಗೆ ಹೇಗೆ ಎಂಬುದಕ್ಕೆಲ್ಲಾ ಅದರ ಜೀವನ ಚರಿತ್ರೆಯ ರೂಪದಲ್ಲಿ ನಮ್ಮ ಮುಂದೆ ಇಡುವನು. ಮತ್ತೊಬ್ಬನು ಅದರ ರೂಪು, ರಚನೆ, ಹುಟ್ಟು – ಬೆಳೆವಣಿಗೆಗಳ ವಿಚಾರವನ್ನೇ ಎತ್ತದೆ, ಅದರಿಂದ ಆಗುವ ಪ್ರಯೋಜನವನ್ನು ಮಾತ್ರ ಹೇಳುವನು. ಪೂರ್ಣ ಸ್ವರೂಪ ಜ್ಞಾನಕ್ಕೆ ಈ ಮೂರು ವಿಧವಾದ ವಿವರಣೆಗಳೂ ಬೇಕು. ಹಾಗೆಯೇ ವಿಜ್ಞಾನವೇನು ಎಂಬುದನ್ನು ಅರಿಯಬೇಕಾದರೆ ಇವೆಲ್ಲವನ್ನೂ ವಿಮರ್ಶೆ ಮಾಡಬೇಕು. ಹಿಂದಿನ ಲೇಖನದಲ್ಲಿ ವಿಜ್ಞಾನ ವಿವರಿಸಿದೆವು ಎಂಬುದನ್ನು ವಿಚಾರ ಮಾಡುತ್ತಾ ಅದರ ಅಂಗರಚನೆಯನ್ನು ವಿವರಿಸಿದೆವು. ಇದರಿಂದ ಓದುಗರಿಗೆ ವಿಜ್ಞಾನವು ಒಂದು ವಿಧವಾದ ಜ್ಞಾತಪ್ರೇತವೆಂದು ಬೋಧೆಯಾಯಿತೇ ಹೊರತು, ಅದೂ ಬದುಕಿ–ಬಾಳಿದೆ. ಅದಕ್ಕೂ ನಮ್ಮ ಜೀವನದಲ್ಲಿ ಸ್ಥಾನವಿದೆ ಎಂಬುದು ಬೋಧೆಯಾಗಲಿಲ್ಲ.

ವಿಜ್ಞಾನದ ಹೆಸರು ಜನರ ಕಿವಿಗೆ ಹೆಚ್ಚಾಗಿ ಬೀಳಲು ಪ್ರಾರಂಭವಾದುದು, ಈಗ ನೂರಿನ್ನೂರು ವರ್ಷಗಳಿಂದ ಈಚೆಗೆ. ಮುನ್ನೂರು ವರ್ಷಗಳ ಹಿಂದೆ ಇದು ಒಂದು ವಿಧವಾದ ಜ್ಞಾನ. ಇದಕ್ಕೂ ಜ್ಞಾನ ಸಾಮ್ರಾಜ್ಯದಲ್ಲಿ ಒಂದು ಸ್ಥಾನವಿದೆ ಎಂಬುದು ಕೂಡ ಚರ್ಚಾಸ್ಪದವಾಗಿತ್ತು. ಆಗ ಅದು ದಾಯಾದಿ ಜಗಳದಲ್ಲಿ ಸಿಕ್ಕಿ ನರಳುತ್ತಿತ್ತು. ಅದರಿಂದ ಹಿಂದೆ ಅದು ಮಠಾಧಿಪತಿಗಳ ಆಗ್ರಹಕ್ಕೆ ಆಹುತಿಯಾಗಿತ್ತು. ಯುರೋಪಿನಲ್ಲಿ ಅನೇಕ ಶತಮಾನಗಳ ಕಾಲ ನಾಮಾವಶೇಷವಾಗಿಬಿಟ್ಟಂತಿತ್ತು. ಇನ್ನೂ ಹಿಂದೆ ಗ್ರೀಕರ ಕಾಲದಲ್ಲಿ ಶಾಸ್ತ್ರಗಳಿಗೆಲ್ಲಾ ರಾಣಿ ಎನಿಸಿಕೊಂಡಿದ್ದ ತತ್ತ್ವಶಾಸ್ತ್ರದ ಖಾಸಾ ಚೇಟಿಯಾಗಿತ್ತು. ಅದಕ್ಕೂ ಹಿಂದೆ ಈಜಿಪ್ಟರ, ಬ್ಯಾಬಿಲೋನಿಯದವರ ಕಾಲದಲ್ಲಿ ಮತ ಮತ್ತು ವ್ಯವಸಾಯ ವಾಣಿಜ್ಯಗಳಲ್ಲಿ ಐಕ್ಯವಾಗಿ ಹೋಗಿತ್ತು. ಅಲ್ಲಿಂದೀಚೆಗೆ ಅದರ ಹೆಸರೇ ಇರಲಿಲ್ಲ.

ಹೆಸರಿಲ್ಲದಿದ್ದರೂ ಅದು ಬದುಕಿಲ್ಲದೆ ಇರಲಿಲ್ಲ. ಯಾವ ದಿವಸ ಮನುಷ್ಯನು ಮನುಷ್ಯ ಜನ್ಮವನ್ನು ಪಡೆದನೋ ಅಂದೇ ಅವನು ವಿಜ್ಞಾನಿಯೂ ಆದನು.

ಅವನು ಕವಿಯಾದುದೂ ಅಂದೇ. ತಾತ್ವಿಕನಾದುದೂ ಅಂದೇ. ಕವಿತ್ವ, ವಿಜ್ಞಾನ, ತತ್ವಜ್ಞಾನ– ಇವೆಲ್ಲವೂ ಅವನ ಜೀವನದಲ್ಲಿ ಹುದುಗಿದ್ದುವು.

ಮಾನವಶಾಸ್ತ್ರಕಾರರು ಹೇಳುವುದು ನಿಜವಾದರೆ ನಮ್ಮ ಮೊದಲನೆಯ ವಿಜ್ಞಾನಿ ಆಸ್ಟ್ರೆಲೋಪಿಥಿಕಸ್ ಆಫ್ರಿಕಾನಸ್ ಎಂಬ ಜಾತಿಯ ಪ್ರಾಚೀನ ಮಾನವ. ಇವನು ಇದ್ದುದು ಬಹುಶಃ ಐದು ಲಕ್ಷ ವರುಷಗಳ ಹಿಂದೆ ಎಂದು ಊಹಿಸಬಹುದು. ಇವನ ಯುಗ ಆದಿಶಿಲಾಯುಗ. ಕಲ್ಲನ್ನು ಆಯುಧವಾಗಿ ಉಪಯೋಗಮಾಡಲು ಮೊದಲಾದುದು ಇವನ ಕಾಲದಲ್ಲೇ.

ಈ ಆಕಾಶ ಪುರಾಣವೆಲ್ಲ ವಿಜ್ಞಾನವೇ? ಇದಕ್ಕೂ ವಿಜ್ಞಾನಕ್ಕೂ ಏನು ಸಂಬಂಧ? ಎಂದು ಕೆಲವರ ಮನಸ್ಸಿನಲ್ಲಿ ಪ್ರಶ್ನೆ ಹುಟ್ಟಬಹುದು. ಈ ಪ್ರಶ್ನೆಗೆ ನಮ್ಮ ಸಂಕುಚಿತ ದೃಷ್ಟಿಯೇ ಕಾರಣ. ಈಗ ನಮ್ಮ ಮುಂದೆ ಪ್ರಯೋಗಶಾಲೆಗಳಲ್ಲಿ ನಡೆಯುತ್ತಿರುವುದೇ ವಿಜ್ಞಾನ. ನಮ್ಮ ವೈಜ್ಞಾನಿಕ ಪಠ್ಯಪುಸ್ತಕಗಳಲ್ಲಿ ವಿವರಿಸಿರುವ ವಿಷಯಗಳೇ ವೈಜ್ಞಾನಿಕ ವಿಷಯಗಳು : ಗಾಜಿನ ಕೊಳವೆ ಇದ್ದರೆ ವಿಜ್ಞಾನ. ಅದಿಲ್ಲದಿದ್ದೆಡೆಯಲ್ಲಿ ವಿಜ್ಞಾನದ ಸುಳಿವೇ ಇಲ್ಲ ಎಂಬ ಭಾವನೆ ನಮ್ಮ ಪಾಠಶಾಲೆಗಳಲ್ಲಿ ಓದುವ ಅನೇಕ ವಿದ್ಯಾರ್ಥಿಗಳಲ್ಲಿದೆ. ಇದು ತಪ್ಪು ತಿಳಿವಳಿಕೆ. ಪುಸ್ತಕಗಳು, ಉಪಕರಣಗಳು ಜ್ಞಾನಕ್ಕೆ ಕೇವಲ ಸಹಕಾರಿಗಳು. ಇವುಗಳ ರೂಪು ಕಾಲದಿಂದ ಕಾಲಕ್ಕೆ ಬದಲಾಯಿಸತಕ್ಕದ್ದು. ಬರಿಯ ಉಪಕರಣಗಳನ್ನು ನೋಡಿಕೊಂಡು ಇದ್ದರೆ ವಿಜ್ಞಾನ, ಇವಿಲ್ಲದಿದ್ದರೆ ವಿಜ್ಞಾನವಿಲ್ಲ ಎಂದು ಭಾವಿಸಬಾರದು.

ಕರಣಗಳಿಗಿಂತಲೂ ಮುಖ್ಯವಾದುವು ವೈಜ್ಞಾನಿಕ ಪ್ರತಿಭೆ. ಪ್ರಾಯೋಗಿಕ ಕುಶಲತೆ, ಇವಿಲ್ಲದ ಮನುಷ್ಯನನ್ನು ಪ್ರಾಯೋಗಿಕ ಉಪಕರಣಗಳಿಂದ ತುಂಬಿದ ಕಟ್ಟದಲ್ಲಿ ನೂರು ವರ್ಷ ಕೂಡಿದ್ದರೂ ಅವನ ಮೆದುಳಿನಲ್ಲಿ ವಿಜ್ಞಾನವು ಬೇರೆ ಹುಟ್ಟದು. ವೈಜ್ಞಾನಿಕ ಪ್ರತಿಭೆ ಪ್ರಾಯೋಗಿಕ ಕುಶಲತೆಗಳನ್ನುಳ್ಳ ಮನುಷ್ಯನನ್ನು ಕಾಡಿನಲ್ಲಿ ಬಿಟ್ಟರೂ ಅವನು ದೊರೆತುದನ್ನೇ ಕರಣವಾಗಿ ಮಾಡಿಕೊಂಡು ಏನನ್ನಾದರೂ ಕಂಡು ಹಿಡಿಯುವನು. ಬೆಂಕಿಯನ್ನು ಕಂಡು ಹಿಡಿದವನಿಗೆ ಯಾವ ಉಪಕರಣವೂ ಇರಲಿಲ್ಲ. ಆದರೂ ಅವನು ಕಂಡುಹಿಡಿದ ವಿಷಯವು ಎಷ್ಟು ಮಹತ್ತರವಾದುದು. ಕಾಲವನ್ನು ಉಳಿಸುವ, ದೂರವನ್ನು ಗೆಲ್ಲುವ, ಎಲ್ಲವನ್ನು ಹಿಡಿತಕ್ಕೆ ತರುವ ಜ್ಞಾನವೇ ವಿಜ್ಞಾನ. ಇದನ್ನುಳ್ಳವನೇ ವಿಜ್ಞಾನಿ. ವಿದ್ಯುಚ್ಛಕ್ತಿಯನ್ನು ಕಂಡು ಹಿಡಿದವನ ಹೆಸರು ಗೊತ್ತಿದೆ; ಬೆಂಕಿಯನ್ನು ಕಂಡು ಹಿಡಿದವನು ಯಾರು? ವಿಜ್ಞಾನಿ ಎಂಬುದು ಗೊತ್ತಿತ್ತು. ಎರಡನೆಯವನಿಗೆ ತಾನು ಕಂಡು ಹಿಡಿದುದು

ಜ್ಞಾನವೋ ಕರ್ಮವೋ ಎಂಬುದು ಕೂಡ ಗೊತ್ತಿರಲಿಲ್ಲ. ಇವೆರಡಕ್ಕಿಂತಲೂ ಮುಖ್ಯವಾದ ಇನ್ನೊಂದು ವ್ಯತ್ಯಾಸವುಂಟು. ವಿದ್ಯುಚ್ಛಕ್ತಿಯನ್ನು ಕಂಡುಹಿಡಿದವನಿಗೆ ಅದು ಕೇವಲ 'ಭೌತಶಕ್ತಿ' ಎಂಬುದು ತಿಳಿದಿತ್ತು; ಬೆಂಕಿಯನ್ನು ಕಂಡು ಹಿಡಿದವನಾದರೋ ಅದನ್ನು 'ಸಜೀವ ಶಕ್ತಿ' ಎಂದು ಭಾವಿಸಿದ್ದನು. ಇವುಗಳಿಗಿರುವ ಪರಸ್ಪರ ವ್ಯತ್ಯಾಸವನ್ನು ವ್ಯಕ್ತಪಡಿಸಿದವನು ಪ್ರಸಿದ್ಧ ಗ್ರೀಕ್ ವೈಜ್ಞಾನಿಕನೂ, ತಾತ್ವಿಕನೂ ಆದ ಅರಿಸ್ಟಾಟಲ್.

ಹೀಗೆ ವಿಜ್ಞಾನವು ಜೀವನ ಸತ್ಯವನ್ನು ಹುಡುಕುವ ಉದ್ದೇಶವನ್ನು ಹೊಂದಿವೆ. ಜ್ಞಾನಾನ್ವೇಷಣೆಯೇ ವಿಜ್ಞಾನ. ಈ ಅನ್ವೇಷಣೆಗೆ ಕೊನೆಯಿಲ್ಲ. ಈ ವಿಷಯದಲ್ಲಿ ತತ್ವಶಾಸ್ತ್ರ ಮತ್ತು ವಿಜ್ಞಾನಗಳ ಗುರಿಯು ಬೇರಲ್ಲವೆನ್ನಬಹುದು.

ಆಕರ ಗ್ರಂಥಗಳು

೧. ಜಿ. ಹನುಮಂತರಾವ್, ವಿಜ್ಞಾನ, ಮೈಸೂರು ೧೯೪೫
೨. I.M. Copi, An Introduction of Logic and Scientific method.

೭. ಭಾರತದ ದೇವಾಲಯಗಳಲ್ಲಿ ಮಿಥುನ (ಶೃಂಗಾರ) ಶಿಲ್ಪಗಳು
– ಒಂದು ಅಧ್ಯಯನ

– ಎ. ಶ್ರೀಧರಮೂರ್ತಿ

ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾದ ದೇವಾಲಯಗಳು ಭಾರತೀಯರ ಒಟ್ಟಾರೆ ಜೀವನ ಶೈಲಿ, ಕಲೆ, ವಿಜ್ಞಾನ, ವಿವಿಧ ರೀತಿಯ ನಂಬಿಕೆಗಳು, ಯುದ್ಧ ವಿವರಗಳು, ಅನೇಕ ಸಂಸ್ಕೃತಿಗಳ ಪ್ರಭಾವಗಳು ಹೀಗೆ ಇವುಗಳಂತಹ ಹಲವಾರು ವಿಚಾರಗಳನ್ನು ಪ್ರತಿನಿಧಿಸುತ್ತವೆ. ಭಾರತೀಯ ನೆಲದಲ್ಲಿ ಹುಟ್ಟಿ ಬೆಳೆದ ಹಿಂದು, ಬೌದ್ಧ, ಜೈನ ಧರ್ಮಗಳಲ್ಲದೇ ಅವುಗಳ ಶಾಖೆ ಉಪಶಾಖೆಗಳ ಒಂದು ವಿಸ್ತಾರ, ವಿಸ್ಮಯ ಪ್ರಪಂಚವೇ ಬೆಳೆವಣಿಗೆಯಾಗಿದೆ. ಮಧ್ಯಯುಗ ಅಂದರೆ ಸುಮಾರು ಕ್ರಿ.ಶ. ೫೦೦ ರಿಂದಲೇ ಅನೇಕ ದೇವಾಲಯಗಳು ಭಾರತದ ಮೂಲೆ ಮೂಲೆಗಳಲ್ಲಿ ನಿರ್ಮಾಣಗೊಂಡಿವೆ ಮತ್ತು ಇವುಗಳು ಆ ಕಾಲಗಳ ಸಾಂಸ್ಕೃತಿಕ ಸ್ಮಾರಕಗಳಾಗಿವೆ.

ಪ್ರಸ್ತುತ ಲೇಖನದಲ್ಲಿ ಭಾರತದ ದೇವಾಲಯಗಳಲ್ಲಿ ಮಿಥುನ (ಶೃಂಗಾರ) ಶಿಲ್ಪಗಳ ಉಗಮ ಮತ್ತು ಬೆಳೆವಣಿಗೆಯ ಬಗ್ಗೆ ಒಂದು ಅವಲೋಕನ ಮಾಡಲಾಗಿದೆ.

ಮಾನವನ ಮೂಲ ಪ್ರವೃತ್ತಿಗಳಾದ ಲೈಂಗಿಕತೆ, ಹಸಿವು, ಭಯ ಮತ್ತು ಹುಟ್ಟು – ಸಾವುಗಳಂತಹ ವಿಚಾರಗಳು ಮಾನವನ ಕಲೆ, ವಿಜ್ಞಾನ ಹಾಗೂ ಸಂಸ್ಕೃತಿಗಳನ್ನು ಪ್ರಭಾವಿಸುತ್ತವೆ. ಹಾಗಾಗಿ ಪ್ರಪಂಚದ ಎಲ್ಲ ಜನಾಂಗಗಳ ಬೆಳೆವಣಿಗೆಯ ಪ್ರಾರಂಭದಲ್ಲಿ ಸೃಷ್ಟಿಯನ್ನು ಸೂಚಿಸುವ ದೊಡ್ಡ ಹೊಟ್ಟೆ ಹೊಂದಿರುವಂತಹ ನಗ್ನ 'ಸ್ತ್ರೀ ಶಿಲ್ಪಗಳು' (ಮಾತೃ ಶಿಲ್ಪಗಳು) ಕಂಡುಬರುತ್ತವೆ.[೧] ಈ ಶಿಲ್ಪಗಳು ಲೈಂಗಿಕತೆಗಿಂತಲೂ ಮುಖ್ಯವಾಗಿ ಪ್ರಕೃತಿಯ ಸಮೃದ್ಧಿಯನ್ನು ಹಾಗೂ ಸಂತಾನೋತ್ಪತ್ತಿಯನ್ನು ಹೆಣ್ಣಿನ ದೇಹದ ಮೂಲಕ ಆಹ್ವಾನಿಸಿ, ಪೂಜಿಸುವ ಧಾರ್ಮಿಕ ಶಿಲ್ಪಗಳು.

ಅನಂತರದಲ್ಲಿ ಇವುಗಳು ನಾಗರಿಕತೆ ಬೆಳೆದಂತೆ ಲೈಂಗಿಕ ಶಿಲ್ಪಗಳು ಮೂಡಿ ಬರಲು ಮೂಲ ಆಕಾರಗಳಾಗಿರುವ ಸಾಧ್ಯತೆಗಳಿವೆ. ಭಾರತದಲ್ಲಿಯೂ ಕೂಡ ಪ್ರಾಗ್ಯೆತಿಹಾಸಿಕ (Pre Historic) ಕಾಲದ ನಗ್ನ ಸ್ತ್ರೀಯ ರೂಪದಲ್ಲಿ ಕಾಣಿಸಿಕೊಂಡಿದ್ದ ಮಾತೃ ದೇವತಾ ಶಿಲ್ಪಗಳು, ನಂತರದಲ್ಲಿ ಶೃಂಗಾರ ಶಿಲ್ಪಗಳ ದೃಶ್ಯ ದಾಖಲೆಗಳಾಗಿವೆ ಎಂದರೆ ತಪ್ಪಾಗಲಾರದು. ಪ್ರಾಯಶಃ ಇವುಗಳೇ ಕಾಲಕ್ರಮದಲ್ಲಿ ಶಿಷ್ಟ ಸಂಪ್ರದಾಯದಲ್ಲಿ ಲೈಂಗಿಕ ಅಥವಾ ಶೃಂಗಾರ ಶಿಲ್ಪಗಳಾಗಿ ಪರಿವರ್ತನೆ ಹೊಂದಿರುವಂತೆ ತೋರುತ್ತದೆ.[೨]

ವಿಶಿಷ್ಟ ಮತ್ತು ಚರ್ಚಾಸ್ಪದವಾಗಿರುವಂತಹ ಶೃಂಗಾರ ಶಿಲ್ಪಗಳು ಬಹುತೇಕ ಎಲ್ಲಾ ದೇವಾಲಯಗಳು, – ಸ್ತೂಪ, ವಿಹಾರಗಳ ಅಲಂಕರಣದಲ್ಲಿ ಹಾಗೂ ಮಧ್ಯಯುಗದ ಅನೇಕ ದೇವಾಲಯಗಳಲ್ಲಿ ಕಂಡುಬರುತ್ತವೆ. ಪ್ರಮುಖವಾಗಿ ಬಾರ್ಹುತ್, ಮಥುರಾ, ಅಮರಾವತಿ, ನಾಗಾರ್ಜುನಕೊಂಡ, ಅಜಂತ, ಖಜುರಾಹೋ, ಭುವನೇಶ್ವರ, ಕೊನಾರ್ಕ್, ಮೊಢೇರಾ ಹಾಗೂ ಕರ್ನಾಟಕದಲ್ಲಿ ಬಾದಾಮಿ ಗುಹೆಗಳು, ಪಟ್ಟದಕಲ್ಲು, ಐಹೊಳೆ, ಬೇಲೂರು ಮತ್ತು ಹಳೇಬೀಡು ಈ ಪ್ರದೇಶಗಳಲ್ಲಿ ಇರುವ ದೇವಾಲಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿವರವಾಗಿ – ಈ ರೀತಿಯ ಶಿಲ್ಪಗಳು ಕಂಡುಬರುತ್ತವೆ. ಇವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅನೇಕ ಸಾಮ್ಯತೆಗಳು, ವ್ಯತ್ಯಾಸಗಳು ಹಾಗೂ ವಿರೋಧಾಭಾಸಗಳು ಕಂಡುಬರುತ್ತವೆ. ಈ ರೀತಿಯ ಶಿಲ್ಪಗಳ ರಚನೆಗೆ ಆಗಿನ ಧಾರ್ಮಿಕ, ಸಾಮಾಜಿಕ ರಾಜಕೀಯವಾದ ಅನೇಕ ವಿಷಯಗಳು ಪ್ರಭಾವ ಬೀರಿರುವುದು ಗೋಚರವಾಗುತ್ತದೆ.

ಭಾರತದ ದೇವಾಲಯಗಳ ಶೃಂಗಾರ ಶಿಲ್ಪಗಳನ್ನು ಮೂರು ರೀತಿಯಾಗಿ ವಿಂಗಡಿಸಬಹುದು ೧. ಮಿಥುನ ಅಥವಾ ದೇವಾಂಗನ ಶಿಲ್ಪಗಳು ೨. ಮೈಥುನ ಶಿಲ್ಪಗಳು ೩. ಅಪ್ಸರೆಯರು. ಮಿಥುನ ಶಿಲ್ಪಗಳಲ್ಲಿ ಗಂಡು ಹೆಣ್ಣುಗಳು ಆಲಂಗಿಸಿಕೊಂಡು ಶೃಂಗಾರ ಭಾವವನ್ನು ವ್ಯಕ್ತಪಡಿಸುತ್ತಿರುವಂತೆ ರಚಿಸಿರುವಂತಹ ಶಿಲ್ಪಗಳು. ಮೈಥುನ ಶಿಲ್ಪಗಳು ಸಂಭೋಗದಲ್ಲಿ ನಿರತವಾಗಿರುವಂತಹ ಸ್ತ್ರೀ-ಪುರುಷರ ಶಿಲ್ಪಗಳು. ಅಪ್ಸರ ಶಿಲ್ಪಗಳು, ಹೆಸರೇ ಹೇಳುವಂತೆ ಸುಂದರವಾದ ಸ್ತ್ರೀಯ ವಿವಿಧ ಭಂಗಿಗಳ ಶಿಲ್ಪಗಳು, ಬೇಲೂರಿನ ಶಿಲಾಬಾಲಿಕೆಯರು ಈ ರೀತಿಯ ಶಿಲ್ಪಗಳಿಗೆ ಉತ್ತಮ ಉದಾಹರಣೆಗಳಾಗಿವೆ. ಒಟ್ಟಾರೆಯಾಗಿ ಈ ರೀತಿಯ ಎಲ್ಲಾ ಶಿಲ್ಪಗಳನ್ನು ಕ್ರೋಢೀಕರಿಸಿ 'ಶೃಂಗಾರ ಶಿಲ್ಪಗಳು' ಎಂದು ಕರೆಯುವುದು ಹೆಚ್ಚು ಸೂಕ್ತವೆನಿಸುತ್ತದೆ.

ಶೃಂಗಾರ ಶಿಲ್ಪಗಳನ್ನು ವೈಶಿಷ್ಟ್ಯಪೂರ್ಣವಾಗಿಯೂ ಮತ್ತು ಸುಂದರವಾಗಿಯೂ ಕಾಣಲು ದೇವಾಲಯಗಳಲ್ಲಿ ಸ್ಥಳಾವಕಾಶಕ್ಕೆ ಸರಿಹೊಂದುವಂತೆ ಸಂಯೋಜಿಸಲಾಗಿವೆ ಮತ್ತು ಕೆಲವು ಕಡೆ ಆಲಂಕಾರಿಕವಾಗಿಯೂ ಉಪಯೋಗವಾಗಿವೆ. ಒಟ್ಟಾರೆ ಪ್ರಮುಖ ದೇವರುಗಳನ್ನು ಸಂತುಷ್ಟಗೊಳಿಸುವ, ರಂಜಿಸುವ ಉಪದೇವರುಗಳಂತೆ, ನೃತ್ಯ ಸಂಗೀತಗಾರರಂತೆ, ನಾಗದೇವತೆಗಳಂತೆ, ಹಂಸ-ಮಿಥುನಗಳಂತೆ, ಯೋಗ-ಯೋಗಿನಿಯರಂತೆಯೂ ಶೃಂಗಾರ ಶಿಲ್ಪಗಳು ರಚಿಸಲ್ಪಟ್ಟಿವೆ. ಈ ರೀತಿಯ ಶಿಲ್ಪಗಳು ದೇವಾಲಯಗಳ ಬಹುತೇಕ ಎಲ್ಲಾ ಸ್ಥಳಗಳಲ್ಲಿಯೂ ಕಂಡುಬರುತ್ತವೆ. ಮುಖ್ಯವಾಗಿ ದೇವಾಲಯದ ಹೊರಭಾಗದಲ್ಲಿ, ನವರಂಗ ಮಂಟಪದಲ್ಲಿ, ಕಂಬಗಳ ಮೇಲೆ ಹೆಚ್ಚಾಗಿ ಕಂಡುಬರುತ್ತವೆ. ಕೆಲವೆಡೆ ಗರ್ಭಗೃಹದ ಗೋಡೆಗಳ ಮೇಲೆಯೂ ಕೂಡ ಶೃಂಗಾರ ಶಿಲ್ಪಗಳು ಕಂಡು ಬರುತ್ತವೆ. ಭಾರತೀಯ ದೇವಾಲಯಗಳಲ್ಲಿ 'ಸೃಷ್ಟಿ'ಯನ್ನು ಪೂಜಿಸುವ ಮತ್ತು ಪ್ರಚೋದಿಸುವ ಉದ್ದೇಶದಿಂದ ಶೃಂಗಾರ ಶಿಲ್ಪಗಳು ಪ್ರಾರಂಭವಾಗಿರುವ ಸಾಧ್ಯತೆಗಳಿವೆ. ಈ ಶಿಲ್ಪಗಳನ್ನು ಅಭ್ಯಾಸ ಮಾಡಿದ ದೇವಾಂಗನ ದೇಸಾಯಿಯವರು ಮಾನುಷ ಭಕ್ತಿಯಿಂದ ನಷ್ಟವಾಗುವುದನ್ನು ತಪ್ಪಿಸಲು ಸಾಂಕೇತಿಕವಾಗಿ ಶೃಂಗಾರ ಶಿಲ್ಪಗಳನ್ನು ಕೆತ್ತಿರಬಹುದೆಂಬ ಒಂದು ವಾದವಿದೆ.[೨] ದೇವರನ್ನು ಕಾಣಲು ಅಥವಾ 'ಮೋಕ್ಷ' ಹೊಂದಲು ಸುಖ ಮತ್ತು ದುಃಖ ಎರಡನ್ನೂ ಅನುಭವಿಸಬೇಕು ಎಂಬ ಕಲ್ಪನೆ ಕೂಡ ಈ ರೀತಿಯ ಶೃಂಗಾರ ಶಿಲ್ಪಗಳ ಉಗಮಕ್ಕೆ ಕಾರಣವಾಗಿರಬಹುದು ಎಂಬ ಅಭಿಪ್ರಾಯ ನೀಡಿದ್ದಾರೆ. ದೇವಾಲಯ ಒಂದರಲ್ಲಿ ಪ್ರಭಾವಶಾಲಿಯಾಗಿ ಮೂಡಿಬಂದ ಶಿಲ್ಪಕೃತಿಯೊಂದು ನಂತರದಲ್ಲಿ ಬೇರೆ ಬೇರೆ ದೇವಾಲಯಗಳಲ್ಲಿ ಪ್ರತಿಕೃತಿಯಾಗಿ ರಚಿಸಲ್ಪಟ್ಟಿರುವುದು ಸಾಮಾನ್ಯವಾಗಿದೆ. ಹಾಗೆಯೇ ಒಂದು ದೇವಾಲಯದಲ್ಲಿ ಕೆತ್ತಿದ ಶೃಂಗಾರ ಶಿಲ್ಪವು ಒಂದು ಸಂಪ್ರದಾಯವನ್ನು ಹುಟ್ಟುಹಾಕಿರುವ ಸಾಧ್ಯತೆ ಇದೆ. ನಂತರದಲ್ಲಿ ಒಮ್ಮೆ ಸಂಪ್ರದಾಯದ ಸುಳಿಗೆ ಸಿಕ್ಕಿದ ಆಕಾರವು ಮೂಲದಿಂದ ಬೇರ್ಪಟ್ಟು, ವೈಭವೀಕರಣಗೊಂಡು ಬೇರೆ ಬೇರೆ ರೂಪಾಂತರವಾಗಿರುವಂತೆ ತೋರುತ್ತದೆ. ಹೀಗಾಗಿ ವಿವಿಧ ರೀತಿಯ ಮುಕ್ತ ಸಂಭೋಗದಲ್ಲಿ ನಿರತರಾದ ಶಿಲ್ಪಗಳ ಸಮೂಹವೇ ನಿರ್ಮಾಣಗೊಂಡಿರಬಹುದು ಮತ್ತು ಅವುಗಳನ್ನು ವೈಭವೀಕರಿಸಿ, ಕುತೂಹಲವನ್ನು ಸೃಷ್ಟಿಸಿ ಜನಸಾಮಾನ್ಯರನ್ನು ಧರ್ಮದ ಕಡೆಗೆ ಅಥವಾ ದೇವಾಲಯದ ಕಡೆಗೆ ತಾವಾಗಿಯೇ ಬರುವಂತೆ ಮಾಡಲು ಇಂದಿನ ಕಾಲದ ಜಾಹಿರಾತುಗಳಂತೆ ಅವುಗಳನ್ನು ಬಳಸಿರುವ ಸಾಧ್ಯತೆ

ಇದೆ. ಹೀಗಾಗಿ ಶೃಂಗಾರ ಶಿಲ್ಪಗಳು ಒಟ್ಟಾರೆ ದೇವಾಲಯದ ಸೌಂದರ್ಯ ಮತ್ತು ವಿವಿಧತೆಯನ್ನು ಹೆಚ್ಚಿಸಿ ಸುಖಜೀವನ, ಸುಖಸಂಸಾರ, ವೈಭೋಗ ಹಾಗೂ ಧಾರ್ಮಿಕ ಸಂಕೇತಗಳಾಗಿ ಬೆಳೆವಣಿಗೆ ಹೊಂದಿವೆ.

ಶೃಂಗಾರ ಶಿಲ್ಪಗಳ ಉಗಮ ಮತ್ತು ಅವುಗಳ ಬೆಳೆವಣಿಗೆಯನ್ನು ಅಭ್ಯಸಿಸಲು ಮಧ್ಯಯುಗದ ಭಾರತದ ಜೀವನ ಶೈಲಿಯನ್ನು ಗಮನಿಸುವುದು ಬಹಳ ಮುಖ್ಯವಾಗಿರುತ್ತದೆ. ರಾಜಕೀಯವಾಗಿ ಒಂದು ರೀತಿಯ 'ಫ್ಯೂಡಲ್ ಸಿಸ್ಟಂ'[೪] ಅಥವಾ ಜಮೀನ್ದಾರಿ ಪದ್ಧತಿಯು ಪ್ರಸ್ತುತಿಯಲ್ಲಿತ್ತು. ಅದು ಪಾಶ್ಚಾತ್ಯ ಶೈಲಿಯ 'ಫ್ಯೂಡಲಿಸಂ' ಅಲ್ಲದಿದ್ದರೂ ಒಂದು ರೀತಿಯ ಸಂಕೀರ್ಣ ವರ್ಣಾಶ್ರಮ ಧರ್ಮವಾಗಿ ಜಾರಿಯಲ್ಲಿತ್ತು. ಕ್ಷತ್ರಿಯರು, ಬ್ರಾಹ್ಮಣರು ಸಮಾಜದ ಅತ್ಯಂತ ಮೇಲ್ವರ್ಗದಲ್ಲಿದ್ದರು. ಸಮಾಜದ ಎಲ್ಲ ಆಗುಹೋಗುಗಳನ್ನು ನಿಯಂತ್ರಿಸುತ್ತಿದ್ದರು. ದೇವಾಲಯಗಳ ನಿರ್ಮಾಣಕ್ಕೆ ಕ್ಷತ್ರಿಯರು ಮತ್ತು ವೈಶ್ಯರು ಬಹಳಷ್ಟು ಧನ ಸಹಾಯ ಮಾಡುತ್ತಿದ್ದರು. ಅದಕ್ಕೆ ಎರಡು ಪ್ರಮುಖ ಕಾರಣಗಳನ್ನು ಊಹಿಸಬಹುದಾಗಿದೆ. ಮೊದಲನೆಯದಾಗಿ, ಹಿಂದೂ ಧರ್ಮದಲ್ಲಿ ದೇವಾಲಯಗಳನ್ನು ನಿರ್ಮಿಸುವುದು ಪುಣ್ಯದ ಕೆಲಸವೆಂದೂ ಅದರಿಂದ 'ಮೋಕ್ಷ' ದೊರಕುತ್ತದೆಂಬ ಗಾಢವಾದ ನಂಬಿಕೆ ಇದೆ. ಇದರಿಂದಾಗಿ ದೇವಾಲಯಗಳ ನಿರ್ಮಾಣಕ್ಕೆ ಹಣವಂತರಾದ ಕ್ಷತ್ರಿಯರು ಮತ್ತು ವೈಶ್ಯರು ಹಣವನ್ನು ಧಾರಾಳವಾಗಿ ನೀಡುತ್ತಿದ್ದರು. ಅಲ್ಲದೆ ದೇವಾಲಯವು ಆರ್ಥಿಕವಾಗಿ ಸ್ವತಂತ್ರವಾಗಿರಲು ದಾನದತ್ತಿಗಳನ್ನು ನೀಡುತ್ತಿದ್ದರು. ಹೀಗಾಗಿ ದೇವಾಲಯಗಳಿಗೆ ಪ್ರೋತ್ಸಾಹ ನೀಡುವುದು ಒಂದು ಪ್ರತಿಷ್ಠೆಯ ವಿಷಯವಾಗಿತ್ತು. ಎರಡನೆಯದಾಗಿ, ಒಮ್ಮೆ ದೇವಾಲಯವು ನಿರ್ಮಾಣವಾದ ನಂತರ ಆ ಸ್ಥಳವು ಪ್ರಸಿದ್ಧಿಗೆ ಬರುತ್ತಿತ್ತು. ಸಾವಿರಾರು ಸಂಖ್ಯೆಯಲ್ಲಿ ಯಾತ್ರಿಕರು ಪುಣ್ಯ ಸಂಪಾದನೆಗಾಗಿ ದೇವರ ದರ್ಶನಕ್ಕೆ ಬರುತ್ತಿದ್ದರು. ಹಾಗಾಗಿ ದೇವಾಲಯದ ಸುತ್ತಮುತ್ತಲ ವ್ಯಾಪಾರ ವಹಿವಾಟುಗಳು ಹೆಚ್ಚಾಗುತ್ತಿದ್ದವು. ಇದರಿಂದಾಗಿ ಆರ್ಥಿಕವಾಗಿ ಆ ಪ್ರದೇಶವು ಸದೃಢವಾಗುತ್ತಿತ್ತು. ಹಣದ ವಿನಿಮಯ ಹೆಚ್ಚಾಗಿ ರಾಜ ಬೊಕ್ಕಸಕ್ಕೆ ತೆರಿಗೆಯ ರೂಪದಿಂದ ಹೆಚ್ಚು ಹಣವು ಬರುತ್ತಿತ್ತು.[೫] ಈ ರೀತಿಯ ಆರ್ಥಿಕ ಬೆಳೆವಣಿಗೆಯನ್ನು ನಾವು ದೇವಾಲಯಗಳ ಸುತ್ತಮುತ್ತಲು ಇಂದಿಗೂ ಗಮನಿಸಬಹುದಾಗಿದೆ. ಇದಕ್ಕೆ ಅತ್ಯುತ್ತಮ ಸಮಕಾಲೀನ ಉದಾಹರಣೆಗಳು ಎಂದರೆ ತಿರುಪತಿಯ ದೇವಸ್ಥಾನ, ಧರ್ಮಸ್ಥಳ, ಶೃಂಗೇರಿ ಮುಂತಾದವು.

ಪುರುಷ ಪ್ರಧಾನವಾಗಿದ್ದ ಭಾರತೀಯ ಮಧ್ಯಯುಗದಲ್ಲಿ ರಾಜಕೀಯವಾಗಿ ವಿಶಾಲ ಪ್ರದೇಶವನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಂತಹ ಚಕ್ರವರ್ತಿ ಅಥವಾ ಪ್ರಮುಖ ರಾಜನಿದ್ದು ಅವನ ಆದೇಶ ಪಾಲಿಸುವ ಅನೇಕ ಸಾಮಂತ ರಾಜರುಗಳಿದ್ದರು ಹಾಗೂ ನಂತರದ ಹಂತದಲ್ಲಿ ಸಣ್ಣಪುಟ್ಟ ಜಮೀನುದಾರರುಗಳಿರುತ್ತಿದ್ದರು. ಈ ರೀತಿಯಾಗಿ ದೇಶವು ಹಲವಾರು ರಾಜರು ಮತ್ತು ಸಾಮಂತರುಗಳಿಂದ ವಿಭಜನೆಗೊಂಡಿತ್ತು. ಎಲ್ಲ ಸಾಮಂತ ರಾಜರಿಗೂ ಸ್ವತಂತ್ರವಾಗಿ ಚಕ್ರವರ್ತಿಯಾಗುವ ಸುಪ್ತ ಆಸೆ ಇರುತ್ತಿತ್ತು. ಹಾಗಾಗಿ ಯುದ್ಧವು ಒಂದು ಅನಿವಾರ್ಯ ಅವಶ್ಯಕತೆಯಾಗಿದ್ದು ಆಗಿಂದಾಗ್ಗೆ ಸಾಮಂತರು ದಂಗೆ ಏಳುವುದು ಅಥವಾ ಸಾಮಂತರು ಮತ್ತು ಸಾಮಂತರ ನಡುವೆ ಹಣ, ಜಾಗ ಮತ್ತು ಪ್ರತಿಷ್ಠೆಗಾಗಿ ಯುದ್ಧವಾಗುವುದು ಸಾಮಾನ್ಯವಾಗಿತ್ತು. ಯುದ್ಧಾ ನಂತರದಲ್ಲಿ ಗೆದ್ದ ರಾಜರುಗಳು ವಿಜಯದ ನೆನಪಿಗಾಗಿ ದೇವಾಲಯಗಳನ್ನು ನಿರ್ಮಿಸುತ್ತಿದ್ದರು ಮತ್ತು ಈ ದೇವಾಲಯಗಳು ಯುದ್ಧಾ ನಂತರದ ಆರ್ಥಿಕ ವ್ಯವಸ್ಥೆಯನ್ನು ಸಮತೋಲನ ಗೊಳಿಸುತ್ತಿದ್ದವು.

ಯುದ್ಧ ಇಲ್ಲವೆ ಐಹಿಕ ಸುಖಭೋಗದಲ್ಲಿ, ಶೃಂಗಾರ ನರ್ತನ ಮಧುಪಾನ ಗೋಷ್ಠಿಗಳಲ್ಲಿ ಹಾಗೂ ಬೇಟೆಯಾಡುವುದರಲ್ಲಿ ತೊಡಗುವುದು ಮೇಲಿನ ಸ್ತರದ ಜನರ ಜೀವನ ಶೈಲಿಯಾಗಿತ್ತು. ಶೃಂಗಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಸಿಗುತ್ತಿತ್ತು. ಹೀಗಾಗಿ ದೇವಾಲಯಗಳಲ್ಲಿಯೂ ಕೂಡ ಧಾರ್ಮಿಕ ಚೌಕಟ್ಟಿನಲ್ಲಿ ಮಾನ್ಯತೆ ಪಡೆದಿದ್ದು ಮುಕ್ತ ಲೈಂಗಿಕತೆಗೆ ಅವಕಾಶವಿತ್ತು. ಈ ಒಂದು ಪರಿಸರವು ಬಹುಶಃ ಶೃಂಗಾರ ಶಿಲ್ಪಗಳ ಪ್ರೋತ್ಸಾಹಕ್ಕೆ ದಾರಿ ಮಾಡಿಕೊಟ್ಟಂತೆ ಮತ್ತು ಧಾರ್ಮಿಕ ಒಪ್ಪಿಗೆಯನ್ನು ಸೂಚಿಸಿದಂತೆ ತೋರುತ್ತದೆ. ಬಹುಪತ್ನಿಯರನ್ನು ಹೊಂದಿರುವುದು ರಾಜರುಗಳಿಗೆ ಗೌರವದ ವಿಚಾರವಾಗಿತ್ತು. 'ರಾಜಾ ಪ್ರತ್ಯಕ್ಷ ದೇವತಾ' ಎನ್ನುವ ಮಾತಿನಂತೆ ದೇವತೆಗಳ ಹೆಸರಿನಲ್ಲಿ ರಾಜನನ್ನು ತೃಪ್ತಿಪಡಿಸಲೆಂಬಂತೆ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಶೃಂಗಾರ ಶಿಲ್ಪಗಳು ದೇವಾಲಯದಲ್ಲಿ ಕೆತ್ತಲ್ಪಟ್ಟವು.

ಯುದ್ಧಗಳು ಅತಿಯಾದಾಗ ಜನರಲ್ಲಿ ವೈರಾಗ್ಯ ಭಾವನೆ ಮೂಡುವುದು ಅನಿವಾರ್ಯವಾಗುತ್ತದೆ ಮತ್ತು ಜನಸಂಖ್ಯೆಯಲ್ಲಿ ಏರುಪೇರಾಗುವುದು ಸಾಮಾನ್ಯ. ಜನರ ವೈರಾಗ್ಯವನ್ನು ಹೋಗಲಾಡಿಸಿ ಮತ್ತೆ ಲೌಕಿಕ ಸಮಾಜಕ್ಕೆ ಬರಲು ಅವರನ್ನು ಪ್ರೇರೇಪಿಸಲು ದೇವಾಲಯಗಳಲ್ಲಿ ಶೃಂಗಾರಭರಿತ ಶಿಲ್ಪಗಳನ್ನು ಕೆತ್ತುತ್ತಿದ್ದರೆಂದು ಒಂದು ಜಾನಪದ ನಂಬಿಕೆ. ದೇವಾಲಯಗಳು ಆ ಕಾಲದ ಎಲ್ಲ ಆಗುಹೋಗುಗಳ ಮೇಲೆ ಪ್ರಭಾವ ಬೀರುತ್ತಿದ್ದರಿಂದ ಎಲ್ಲ ವಿಷಯಗಳ ಮೇಲೆ ದೇವಾಲಯಗಳಲ್ಲಿ

ಶಿಲ್ಪಗಳು ಸೃಷ್ಟಿಯಾಗುತ್ತಿದ್ದವು ಲೈಂಗಿಕತೆಯು ಕೂಡಾ ಒಂದು ಪ್ರಮುಖ ವಿಷಯವಾಗಿದುದ್ದು ಕಂಡುಬರುತ್ತದೆ.

ಶಿಲ್ಪ ಕಲಾವಿದನ ಸೃಜನಶೀಲತೆಗೆ ಎಲ್ಲ ನವರಸಗಳು ಅಗತ್ಯವಾಗಿದ್ದು ಹಾಗೆಯೇ ಶೃಂಗಾರರಸವು ಕೂಡ ಶಿಲ್ಪ ಸಂಯೋಜನೆಯ ದೃಷ್ಟಿಯಿಂದ ಹೆಚ್ಚು ಹೆಚ್ಚು ವಿಷಯಗಳನ್ನು ಮತ್ತು ಸೂಕ್ಷ್ಮ ವಿವರಗಳನ್ನು ಒದಗಿಸುತ್ತದೆ. ಹೀಗಾಗಿ ಕಲಾವಿದರು ಶೃಂಗಾರ ಶಿಲ್ಪಗಳನ್ನು ಹೆಚ್ಚಾಗಿ ಬಳಸಿ ಮೊದಲಿಗೆ ಲೌಕಿಕತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ, ಆ ಮೂಲಕ ನಂತರದ ಹಂತದಲ್ಲಿ ಅಲೌಕಿಕದ ಕಡೆಗೆ ಹೋಗುವಂತೆ ಮಾರ್ಗವನ್ನು ಸೂಚಿಸಿರುವಂತಿದೆ.

ಆಗಿನ ಸಮಕಾಲೀನವಾಗಿದ್ದಂತಹ ಅನೇಕ ಶೃಂಗಾರಭರಿತ ರೋಚಕ ಸಾಹಿತ್ಯ ಕೃತಿಗಳು ಕೂಡ ಶೃಂಗಾರ ಶಿಲ್ಪಗಳಿಗೆ ವಸ್ತು-ವಿಷಯವನ್ನು ಒದಗಿಸಿ ತೀವ್ರ ಪ್ರಭಾವವನ್ನು ಬೀರಿರುವಂತೆ ತೋರುತ್ತವೆ. ಇದಕ್ಕೆ ಉತ್ತಮ ಉದಾಹರಣೆ ವಾತ್ಸ್ಯಾಯನನು ರಚಿಸಿರುವ ಕಾಮಶಾಸ್ತ್ರದಲ್ಲಿ ವಿವರಿಸಿರುವ ಅನೇಕ ಸಂಭೋಗದ ಭಂಗಿಗಳು ಹಲವಾರು ದೇವಾಲಯಗಳಲ್ಲಿ ಚಿತ್ರಿತವಾಗಿವೆ. ಇವು ಒಂದು ರೀತಿಯ ಲೈಂಗಿಕ ಶಿಕ್ಷಣದಂತೆಯೂ ಕೆಲಸ ಮಾಡುತ್ತವೆ. ಭರತನ ನಾಟ್ಯಶಾಸ್ತ್ರ ಮತ್ತು ಕಾಳಿದಾಸನ 'ಋತುಸಂಹಾರ' ಮುಂತಾದ ಕೃತಿಗಳು ಈ ನಿಟ್ಟಿನಲ್ಲಿ ಗಮನಾರ್ಹ ಕಾಣಿಕೆ ನೀಡಿವೆ.[೬]

ಹಿಂದೂ ಮತ್ತು ಬೌದ್ಧ ತಾಂತ್ರಿಕರು ಮತ್ತು ಅವರ ತಂತ್ರ ಮಾರ್ಗಗಳು ಹಾಗೂ ಅವರು ಆಚರಿಸುತ್ತಿದ್ದ ಸಂಭೋಗ ಸಿದ್ಧಿಗಳು, ಯೋನಿ ಪೂಜೆ ಮುಂತಾದ ಆಚರಣೆಗಳು ಕೂಡ ಶೃಂಗಾರ ಶಿಲ್ಪಗಳ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿವೆ. ತಂತ್ರಮಾರ್ಗವೂ ಸಾಂಕೇತಿಕವೂ ಮತ್ತು ನಿಗೂಢವೂ ಆಗಿರುವ ಆಚರಣೆಯಾಗಿದೆ. ಈ ಹಿನ್ನೆಲೆಯಲ್ಲಿ ದೇವಾಲಯಗಳನ್ನು ಗಮನಿಸಿದಾಗ ಅನೇಕ ಅಚ್ಚರಿ ಹುಟ್ಟಿಸುವ ಸಂಗತಿಗಳು ಗೋಚರವಾಗುತ್ತವೆ. ಕೆಲವೊಮ್ಮೆ ಈ ಶೃಂಗಾರ ಶಿಲ್ಪಗಳನ್ನು ಕೆತ್ತಿರುವ ಶಿಲ್ಪಿಗಳೂ ಕೂಡಾ ತಾಂತ್ರಿಕರಾಗಿದ್ದಿರಬಹುದು ಅಥವಾ ಅವರ ಪ್ರಭಾವಕ್ಕೆ ಒಳಗಾಗಿದ್ದಿರಬಹುದೆಂಬ ಭಾವನೆಯುಂಟಾಗುತ್ತದೆ. ಶೃಂಗಾರ ಶಿಲ್ಪಗಳನ್ನು ತಾಂತ್ರಿಕ ಸಿದ್ಧಿಗಳಿಗೆ ಸಾಂಕೇತಿಕವಾಗಿ ಕೆತ್ತಿರುವಂತೆ ತೋರುತ್ತವೆ. ಆ ಕಾಲದಲ್ಲಿ ಮೇಲ್ತರಗತಿಯ ಪ್ರಭಾವಿ ಜನರೊಂದಿಗೆ ಗುಟ್ಟಾಗಿ ತಾಂತ್ರಿಕರ ಸಹವಾಸವಿದ್ದುದು ಗೋಚರವಾಗುತ್ತದೆ. ಈ ಅಂಶವೂ ಕೂಡ ತಾಂತ್ರಿಕ ಕಲೆಯಾಗಿ ಶೃಂಗಾರ ಶಿಲ್ಪಗಳು ಅನೇಕ ದೇವಾಲಯಗಳಲ್ಲಿ ಮೂಡಿಬಂದಿವೆ.[೭]

6

ಶೃಂಗಾರ ಶಿಲ್ಪಗಳು ಎಲ್ಲ ಪಂಥಗಳಿಗೆ–ಉಪಪಂಥಗಳಿಗೆ ಸೇರಿರುವ ಎಲ್ಲಾ ದೇವ–ದೇವತೆಯರ ದೇವಾಲಯಗಳಲ್ಲಿ ಇರುವುದು ಕಂಡುಬರುತ್ತದೆ. ಈ ಅರ್ಥದಲ್ಲಿ ಶೃಂಗಾರ ಶಿಲ್ಪಗಳು ಜಾತ್ಯತೀತವಾಗಿರುವಂತಹ ಕಲ್ಪನಾ ಸೃಷ್ಟಿಗಳು. ಒಟ್ಟಾರೆ ಭಾರತೀಯ ದೇವಾಲಯಗಳಲ್ಲಿ ಶೃಂಗಾರ ಶಿಲ್ಪಗಳು ವಿಷಯ ವೈವಿಧ್ಯತೆಯನ್ನು ಸೌಂದರ್ಯ ಪ್ರಜ್ಞೆಯನ್ನು ಒಳಗೊಂಡು ಶಿಲ್ಪಶಾಸ್ತ್ರದ ಸಂಪ್ರದಾಯಕ್ಕೆ ತಮ್ಮದೇ ಆದ ಮಹತ್ವದ ಕಾಣಿಕೆ ನೀಡಿವೆ ಮತ್ತು ಭಾರತೀಯ ಕಲೆಗೆ ಅನೇಕ ಆಯಾಮಗಳನ್ನು ತಂದುಕೊಟ್ಟಿವೆ.

ಕರ್ನಾಟಕದಲ್ಲಿ ಶೃಂಗಾರ ಶಿಲ್ಪಗಳು

ಈ ಹಿನ್ನೆಲೆಯಲ್ಲಿ ಕರ್ನಾಟಕದ ಕಲಾ ಪರಂಪರೆಯನ್ನು ಗಮನಿಸಿದಾಗ ಇಲ್ಲಿಯೂ ಕೂಡ ಶೃಂಗಾರ ಶಿಲ್ಪಗಳು ಅನೇಕ ದೇವಾಲಯಗಳಲ್ಲಿ ಕಂಡುಬರುತ್ತವೆ. ಪ್ರಪ್ರಥಮವಾಗಿ ಹಾಗೂ ವಿಸ್ತೃತವಾಗಿ ಈ ಪ್ರಕಾರದ ಶಿಲ್ಪಗಳನ್ನು ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ನೋಡಬಹುದು. ಬಾದಾಮಿ ಚಾಲುಕ್ಯರ ನಂತರ ಬಂದ ರಾಜವಂಶಗಳು ಕಟ್ಟಿಸಿರುವ ದೇವಾಲಯಗಳಲ್ಲಿಯೂ ಕೂಡ ಶೃಂಗಾರ ಶಿಲ್ಪಗಳು ಕೆತ್ತಲ್ಪಟ್ಟಿವೆ. ಹೊಯ್ಸಳರ ಕಾಲದಲ್ಲಿ ಇವು ಹೇರಳವಾಗಿಯೂ ಹಾಗೂ ಸೂಕ್ಷ್ಮ ಕುಸುರಿ ಕೆಲಸದಿಂದ ಅಲಂಕಾರಿಕಗಳಾಗಿ ಕೆತ್ತಿರುವುದು ಕಂಡು ಬರುತ್ತದೆ.

ಚಾಲುಕ್ಯರ ಕಾಲದ·ಬಾದಾಮಿ ಗುಹಾಂತರ ದೇವಾಲಯಗಳು ಹಾಗೂ ಐಹೊಳೆ, ಪಟ್ಟದಕಲ್ಲಿನಲ್ಲಿನ ದೇವಾಲಯಗಳಲ್ಲಿ ಕಂಡುಬರುವ ಶೃಂಗಾರ ಶಿಲ್ಪಗಳು ತಾಂತ್ರಿಕವಾಗಿಯೂ, ಪ್ರಮಾಣಬದ್ಧವಾಗಿಯೂ ಮತ್ತು ಸೃಜನಾತ್ಮಕವಾಗಿಯೂ ಕೆತ್ತಲ್ಪಟ್ಟಿವೆ. ಬಾದಾಮಿಯ ಗುಹಾಂತರ ದೇವಾಲಯಗಳಲ್ಲಿ ಮಿಥುನ ಶೃಂಗಾರ ಶಿಲ್ಪಗಳು ಮತ್ತು ವಿವಿಧ ಭಂಗಿಗಳಲ್ಲಿರುವ ಅಪ್ಸರಾ (ನಾಯಿಕಾ) ಶೃಂಗಾರ ಶಿಲ್ಪಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ದೇವಾಲಯದ ಕಂಬಗಳ ಮೇಲೆ ಹಾಗೂ ಭಾವಣಿಯ ಮೇಲೆ ಈ ರೀತಿಯ ಶಿಲ್ಪಗಳನ್ನು ಕೆತ್ತಲಾಗಿದೆ. ಕಂಬಗಳ ಮೇಲೆ ವೃತ್ತಾಕಾರದ ಅಲಂಕಾರಿಕದಲ್ಲಿ ರಚಿತವಾದ ಮಿಥುನ ಶಿಲ್ಪಗಳಿವೆ. ವೃತ್ತಾಕಾರವು ಬಹುಶಃ ಸಾಂಕೇತಿಕವಾಗಿ ಜೀವನ ಚಕ್ರವನ್ನು ಪ್ರತಿನಿಧಿಸುತ್ತದೆ. ಬಾದಾಮಿಯ ಮಿಥುನ ಶೃಂಗಾರ ಶಿಲ್ಪಗಳಲ್ಲಿ ಕಂಡುಬರುವ ಮತ್ತೊಂದು ವಿಶೇಷತೆಯೆಂದರೆ ಮಿಥುನ ದಂಪತಿಗಳ ಜೊತೆಗೆ ಸೇವಕಿ–ಸೇವಕರನ್ನೂ ಕೆತ್ತಲಾಗಿದೆ.

ಸಹಜತೆಯನ್ನು ಮೂಡಿಸಲು ಸೇವಕ-ಸೇವಕಿಯರ ಕೈಯಲ್ಲಿ ಮಧುಪಾತ್ರೆ ಅಥವಾ ಹೂ ಗೊಂಚಲನ್ನು ತೋರಿಸಲಾಗಿದೆ ಮತ್ತು ಸೇವಕಿಯರು ಲಜ್ಜೆಯಿಂದ ಮುಖ ತಿರುವಿರುವಂತೆ ಚಿತ್ರಿಸಿ ಶಿಲ್ಪದಲ್ಲಿ ಜೀವಂತಿಕೆಯನ್ನು ಮತ್ತು ಶೃಂಗಾರದ ಸಾಂದರ್ಭಿಕ ತೀವ್ರ ಭಾವನೆಯನ್ನು ಉದ್ದೀಪನಗೊಳಿಸಲಾಗಿದೆ. ಬಾದಾಮಿಯ ಮೂರನೆಯ ಗುಹೆಯಲ್ಲಿ ಚಿತ್ರಿತವಾಗಿರುವ ಅಪ್ಸರ ಶಿಲ್ಪವೊಂದು, ಸುಂದರ ಸ್ತ್ರೀಯೊಬ್ಬಳ ಪ್ರಮಾಣ ಬದ್ಧ ಹಾಗೂ ಲಾಲಿತ್ಯಪೂರ್ಣವಾಗಿರುವಂತಹ ಭಂಗಿಯಲ್ಲಿ ನಿಂತಿರುವಂತೆ ಕೆತ್ತಲಾಗಿದೆ ಮತ್ತು ಆಕೆಯು ತಾಡಪತ್ರವನ್ನು ಓದುತ್ತಿರುವಂತೆಯೂ ಚಿತ್ರಿತವಾಗಿದೆ. ಸಹಜವಾಗಿ ಆ ಪತ್ರವು ಆಕೆಯ ಪ್ರಿಯಕರನೆಂದು ಊಹಿಸಬಹುದಾಗಿದೆ. ಹೀಗಾಗಿ ಈ ಶಿಲ್ಪದಲ್ಲಿ ಶೃಂಗಾರದ ಭಾವವನ್ನು ಬಹಳ ರಸಿಕತೆಯಿಂದ ಚಿತ್ರಿಸಲಾಗಿದೆ. ಕಾಮಸೂತ್ರದಲ್ಲಿ ವಿವರಿಸಿರುವ ಶೃಂಗಾರದ ಪ್ರಥಮ ಹಂತದ ಶಿಲ್ಪಗಳು ಬಾದಾಮಿಯ ದೇವಾಲಯಗಳಲ್ಲಿ ಕಂಡುಬರುತ್ತವೆ. ನೇರವಾದ ಮೈಥುನದಲ್ಲಿ ತೊಡಗಿರುವ ಶಿಲ್ಪಗಳು ಅಷ್ಟಾಗಿ ಕಂಡುಬರುವುದಿಲ್ಲ. ಬಾದಾಮಿಯ ದೇವಾಲಯಗಳಲ್ಲಿ ವಿಷ್ಣು-ಲಕ್ಷ್ಮೀ, ಶಿವ-ಪಾರ್ವತಿ, ಕಾಮ-ರತಿ ಮುಂತಾದ ದೇವ-ದೇವತೆಯರ ಶೃಂಗಾರ ಶಿಲ್ಪಗಳಿವೆ. ಗಂಧರ್ವ ಮತ್ತು ವಿದ್ಯಾಧರರನ್ನು ಮೋಡಗಳಲ್ಲಿ ತೇಲುತ್ತಿರುವಂತೆ ತೋರಿಸಲಾಗಿದೆ. ಇದರಿಂದ ದೇವ ದಂಪತಿಗಳೂ ಕೂಡಾ ಕಲಾವಿದನ ಕಲ್ಪನೆಯಲ್ಲಿ ಮಿಥುನ ಶಿಲ್ಪಗಳೇ ಆಗಿ ಬಿಂಬಿಸಲ್ಪಟ್ಟಿವೆ.

ಬಾದಾಮಿಯಿಂದ ಹತ್ತು ಮೈಲು ದೂರದಲ್ಲಿ ಇರುವ ಪಟ್ಟದಕಲ್ಲು ಕೂಡ ಚಾಲುಕ್ಯರ ವಾಸ್ತು ಮತ್ತು ಶಿಲ್ಪ ಶೈಲಿಗಳಿಗೆ ಹೆಸರುವಾಸಿಯಾಗಿದೆ. ಪಾಪನಾಥ ದೇವಾಲಯ, ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಅನೇಕ ಶೃಂಗಾರ ಶಿಲ್ಪಗಳನ್ನು ಚಾಲುಕ್ಯ ರೂವಾರಿಗಳು ಕೆತ್ತಿದ್ದಾರೆ. ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳ ಸಭಾಮಂಟಪದಲ್ಲಿ ಅನೇಕ ಮಿಥುನ ಶೃಂಗಾರ ಶಿಲ್ಪಗಳನ್ನು ನೆಲದ ಹಂತದಲ್ಲಿಯೇ ಕೆತ್ತಲಾಗಿದೆ. ಮೇಲ್ತರಗತಿಯಲ್ಲಿರುವಂತೆ ತೋರುವ ಗಂಡು ಹೆಣ್ಣು ಶಿಲ್ಪಗಳ ಮುಖದಲ್ಲಿ ಶೃಂಗಾರದ ಭಾವವು ವ್ಯಕ್ತವಾಗುತ್ತದೆ ಮತ್ತು ಅರೆ ಕಾಮುಕತೆಯನ್ನು ಬಿಂಬಿಸುತ್ತವೆ. ಚಾಲುಕ್ಯರ ಮತ್ತೊಂದು ಪ್ರಮುಖ ಪ್ರದೇಶ ಮಲಪ್ರಭಾ ನದಿಯ ದಡದಲ್ಲಿ ಇರುವ ಐಹೊಳೆ. ಐಹೊಳೆಯ ದುರ್ಗಾ ದೇವಾಲಯದ ಕಂಬಗಳ ಮೇಲೆ ಗಂಧರ್ವ ದಂಪತಿಯರನ್ನು ಹಾಗೂ ಸ್ತ್ರೀ ಶಿಲ್ಪಗಳನ್ನು ಸೊಗಸಾಗಿ ಮತ್ತು ಪ್ರಮಾಣ ಬದ್ಧವಾಗಿ ಕೆತ್ತಲಾಗಿದೆ. ಈ ಆಕೃತಿಗಳು ಹಾರುತ್ತಿರುವ ದೃಶ್ಯಗಳು ಇವರನ್ನು ದೈವೀಕರೆಂದು ತೋರಿಸುತ್ತವೆ. ಕಲಾವಿದನು-

ಈ ಭಾವನೆಯನ್ನು ಅತ್ಯಂತ ನೈಜವಾಗಿ ಆಕೃತಿಗಳನ್ನು ಮೋಡಗಳ ಮಧ್ಯೆ ಇರುವಂತೆಯೂ ಹಾಗೂ ಐಹೊಳೆಯ ಮತ್ತೊಂದು ದೇವಾಲಯ ಹುಚ್ಚಪ್ಪಯ್ಯ ಮಠ ದೇವಾಲಯದಲ್ಲಿ ಕೇವಲ ಶೃಂಗಾರದ ಮೈಥುನ ಶಿಲ್ಪಗಳನ್ನು ಮಾತ್ರ ಕೆತ್ತಲಾಗಿದೆ. ಇವುಗಳನ್ನು ಆಲಿಂಗನದಲ್ಲಿ ಮತ್ತು ಚುಂಬನದಲ್ಲಿರುವಂತೆ ಬಿಂಬಿಸಿರುವುದು ಶಿಲ್ಪಗಳ ನೈಜತೆಗೆ ಹೆಚ್ಚಿನ ಒತ್ತು ನೀಡುತ್ತದೆ. ವಾತ್ಸ್ಯಾಯನನ ಕಾಮಸೂತ್ರದ ಭಂಗಿಗಳನ್ನು ಇಲ್ಲಿ ಕೆತ್ತಲಾಗಿದೆ. ಈ ಶಿಲ್ಪಗಳು ನಂತರದ ಕಲ್ಯಾಣ ಚಾಲುಕ್ಯ ಕಾಲದ ದೇವಾಲಯಗಳಲ್ಲೂ ಕೂಡಾ ರಚನೆಗೊಂಡು ಬೆಳವಣಿಗೆ ಹೊಂದಿವೆ. ದೇವಾಲಯದ ಹೊರಭಿತ್ತಿಯ ಮೇಲೆ-ಕಂಬಗಳ ಕೆಳಭಾಗದಲ್ಲಿ ಇಂತಹ ಶಿಲ್ಪಗಳ ವಿಭಿನ್ನ ವಿನ್ಯಾಸ ಹಾಗೂ ಸಂಯೋಜನೆಯೊಡನೆ ಕಂಡು ಬರುತ್ತವೆ.

ಹೊಯ್ಸಳರ ಕಾಲದ ಶಿಲ್ಪ ವೈಭವವನ್ನು ನಾವು ಪ್ರಮುಖವಾಗಿ ಬೇಲೂರು, ಹಳೇಬೀಡು, ಸೋಮನಾಥಪುರ ಮುಂತಾದ ದೇವಾಲಯಗಳಲ್ಲಿ ಕಾಣಬಹುದು. ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ಕಂಡು ಬರುವ ಅಪ್ಸರ ಶಿಲ್ಪಗಳು ವಾಸ್ತು ವೈವಿಧ್ಯತೆಯಿಂದ ಹಾಗೂ ಸೂಕ್ಷ್ಮ ಅಲಂಕಾರಗಳಿಂದ ಜಗತ್ ಪ್ರಸಿದ್ಧವಾಗಿವೆ. ಈ ಶಿಲ್ಪಗಳನ್ನು ಬಿಂಬಿಸಿರುವ ರೀತಿ ಗಮನ ಸೆಳೆಯುತ್ತಿತ್ತು.

ಅಪ್ಸರ ಶಿಲ್ಪಗಳು ಭರತನ ನಾಟ್ಯ ಶಾಸ್ತ್ರದಲ್ಲಿ ವಿವರಿಸಿರುವ ನಾಟ್ಯ ಭಂಗಿಗಳ ಮೇಲೆ ನಿರ್ಮಿತವಾಗಿವೆ ಮತ್ತು ವಿವಿಧ ರೀತಿಯ ವಸ್ತ್ರ, ಆಭರಣಗಳನ್ನು ಧರಿಸಿರುವಂತೆ ತೋರಿಸಿರುವ ಉತ್ಕೃಷ್ಟ ಕುಸುರಿ ಕೆಲಸವು ಕಂಡುಬರುತ್ತವೆ. ಅಪ್ಸರೆಯರು ಅಥವಾ ನಾಯಕಿ ಶಿಲ್ಪಗಳಲ್ಲಿ ವಸ್ತ್ರ ಆಭರಣಗಳಲ್ಲದೇ ವೃಕ್ಷ, ಬಳ್ಳಿ, ಹೂವುಗಳು, ಹಣ್ಣುಗಳು, ಪಕ್ಷಿ ಮುಂತಾದವುಗಳ ಚಿತ್ರಣವಿದ್ದು ಅತೀ ಸೂಕ್ಷ್ಮಾತಿ ಸೂಕ್ಷ್ಮ ಕೆತ್ತನೆಗಳ ವಿವರಗಳಿವೆ. ಇಲ್ಲಿನ 'ದರ್ಪಣ ಸುಂದರಿ' ಶಿಲ್ಪವು ಅತ್ಯಂತ ಸುಂದರ ಶಿಲ್ಪವಾಗಿದೆ. ಈ ಶಿಲ್ಪದಲ್ಲಿ ಆಭರಣಗಳಿಂದ ಅಲಂಕೃತಗೊಂಡ ಸುಂದರಿಯೊಬ್ಬಳು ತನ್ನ ಸೌಂದರ್ಯವನ್ನು ತನ್ಮಯಳಾಗಿ ಕನ್ನಡಿಯಲ್ಲಿ ನೋಡಿಕೊಳ್ಳುತ್ತಿದ್ದಾಳೆ. 'ಶುಕಭಾಷಿಣಿ' ಎಂಬ ಮತ್ತೊಂದು ಶಿಲ್ಪದಲ್ಲಿ ಗಿಳಿಯೊಂದಿಗೆ ಮಾತನಾಡುತ್ತಿರುವಂತೆ ಸುಂದರ ಸ್ತ್ರೀಯೊಬ್ಬಳನ್ನು ಕೆತ್ತಲಾಗಿದೆ. ಆಕೆ ನಿಂತಿರುವ ಭಂಗಿ ಲಾಲಿತ್ಯ ಪೂರ್ಣವಾಗಿದ್ದು ಹೊಯ್ಸಳ ಶಿಲ್ಪ ಶೈಲಿಗೆ ಅತ್ಯುತ್ತಮ ಉದಾಹರಣೆಯಾಗಿದೆ. ಇನ್ನೊಂದು ಶಿಲ್ಪವೊಂದರಲ್ಲಿ ಅಪ್ಸರೆಯ ವಸ್ತ್ರವನ್ನು ಹಿಡಿದೆಳೆಯುತ್ತಿರುವ ಕಪಿಯ ಕೆತ್ತನೆ ಇದೆ. ಇದು ಶೃಂಗಾರ ರಸದೊಂದಿಗೆ

ಹಾಸ್ಯರಸವನ್ನು ಸಮರ್ಪಕವಾಗಿ ಸಮ್ಮಿಲನಗೊಳಿಸುವ ತಂತ್ರಗಾರಿಕೆಗೆ ಉತ್ತಮ ಉದಾಹರಣೆಯಾಗಿದೆ.

ಹಳೇಬೀಡು ಅಥವಾ ದ್ವಾರಸಮುದ್ರವು ಹೊಯ್ಸಳರ ಕಾಲದ ಮತ್ತೊಂದು ಪ್ರಮುಖ ಕೇಂದ್ರವೂ ಮತ್ತು ಅವರ ರಾಜಧಾನಿಯೂ ಆಗಿದ್ದು ಇಲ್ಲಿ ದೇವಾಲಯಗಳು ನಿರ್ಮಿಸಲ್ಪಟ್ಟಿವೆ. ಕೆತಮಲ್ಲನೆಂಬಾತನು ಕಟ್ಟಿಸಿರುವ ಹೊಯ್ಸಳೇಶ್ವರ ದೇವಾಲಯವು ಪ್ರಮುಖವಾಗಿದ್ದು ಇಲ್ಲಿಯೂ ಕೆಲವು ಮೈಥುನದ, ಶೃಂಗಾರದ ಉಬ್ಬು ಶಿಲ್ಪದ ಪಟ್ಟಿಗಳು ಕಾಣಸಿಗುತ್ತವೆ. ದಂಪತಿಯರು ಮತ್ತು ಅಪ್ಸರೆಯರ ಶಿಲ್ಪಗಳು ಅಸಂಖ್ಯಾತವಾಗಿ ಆಲಂಕಾರಿಕ ಪಟ್ಟಿಯಲ್ಲಿ ಕಂಡುಬರುತ್ತವೆ.

ಹೊಯ್ಸಳ ಕಾಲದ ಮತ್ತೊಂದು ಪ್ರಮುಖ ಕೇಂದ್ರವಾಗಿದ್ದ ಸೋಮನಾಥ ಪುರವು ಮೈಸೂರಿನಿಂದ ಸುಮಾರು ೩೦ ಮೈಲು ದೂರದಲ್ಲಿದೆ. ಇಲ್ಲಿರುವ ದೇವಾಲಯದ ದಕ್ಷಿಣ ಭಾಗದಲ್ಲಿ ಶೃಂಗಾರದ ಶಿಲ್ಪಗಳನ್ನು ಕಾಮಸೂತ್ರದ ಭಂಗಿಯಲ್ಲಿ ಕೆತ್ತಲಾಗಿದೆ. ಆದರೆ ಈ ಶಿಲ್ಪಗಳನ್ನು ಹೊಯ್ಸಳ ಶಿಲ್ಪಗಳಲ್ಲಿ ಇರುವ ಸಹಜವಾದ ಕುಸುರಿ ಕೆಲಸವು ಕಂಡುಬರುವುದಿಲ್ಲ. ಒಟ್ಟಾರೆಯಾಗಿ ನೋಡಿದಾಗ ಹೊಯ್ಸಳರ ಕಾಲದಲ್ಲಿ ದೇವಾಲಯಗಳ ಅಲಂಕಾರಗಳಲ್ಲಿ–ದೇವಾಂಗನಾ, ಅಪ್ಸರಾ, ದಂಪತಿ, ಮಿಥುನ ಶಿಲ್ಪಗಳು ಅಗಾಧ ಸಂಖ್ಯೆಯಲ್ಲಿ ಕಂಡುಬರುತ್ತವೆ. ಈ ಶಿಲ್ಪಗಳು ನಂತರದ ಕಾಲಗಳಲ್ಲಿ ಅಷ್ಟೊಂದು ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಇದಕ್ಕೆ ಹಲವಾರು ಕಾರಣಗಳು ಇದ್ದಿರಬಹುದು. ಆದಾಗ್ಯೂ–ವಿಜಯನಗರದ ಕಲೆಯಲ್ಲಿ ಈ ಶಿಲ್ಪಗಳು–ಬಳಕೆಯಾಗಿರುವುದನ್ನು ಹಲವಾರು ಉದಾಹರಣೆಗಳಿಂದ ಕಾಣಬಹುದು.

ಅಡಿಟಿಪ್ಪಣಿಗಳು

೧. ಮಾತೃ ದೇವತೆ, ಬಹುತೇಕ ಎಲ್ಲ ನಾಗರಿಕತೆಗಳಲ್ಲಿ ಕಂಡುಬಂದಿವೆ.

೨. ಶೃಂಗಾರ ಶಿಲ್ಪಗಳಿಗೆ ಪ್ರೇರಣೆ ಎಂಬಂತೆ ಈ ಶಿಲ್ಪಗಳು ಕಂಡು ಬರುತ್ತವೆ. ಈ ಊಹೆ ನನ್ನದು ಮಾತ್ರ

೩. ದೇವಾಂಗನಾ ದೇಸಾಯಿ Erotic Sculpture in India P. 153

೪. Erotic Sculpture in India P. 158.

೫. ಆರ್ಥಿಕವಾಗಿ ದೇವಾಲಯಗಳು ಪ್ರಾಚೀನ ಕಾಲಗಳಲ್ಲಿ ಸಾಕಷ್ಟು ಪ್ರಮುಖ ಪಾತ್ರ ವಹಿಸುತ್ತಿದ್ದವು. ವಿಶೇಷವಾಗಿ ಮಧ್ಯಕಾಲೀನ ಯುಗದಲ್ಲಿ ದೇವಾಲಯಗಳ ಪರಿಸರದಲ್ಲಿ ಸಂತೆ ಕಟ್ಟಿಸುವುದು, ಅಂಗಡಿ ಹಾಕುವ ಉದಾಹರಣೆಗಳು ಶಾಸನಗಳಲ್ಲಿವೆ.

೬. ಕುಮಾರಸಂಭವ, ಮಾಳವಿಕಾಗ್ನಿ ಮಿತ್ರ, ಕಾಮಸೂತ್ರಗಳು ಉತ್ತಮ ಸಂಸ್ಕೃತ ಕೃತಿಗಳಾದರೆ, ಹರಿಹರನ ಗಿರಿಜಾ ಕಲ್ಯಾಣ–ಪಾರ್ವತಿ, ಪರಮೇಶ್ವರರ ಮದುವೆ, ಶೃಂಗಾರವನ್ನೂ ಬಿಂಬಿಸುತ್ತದೆ. ಇದಕ್ಕೆ ಹಿನ್ನೆಲೆ ಎಂಬಂತೆ, ಬಾದಾಮಿಯ ಮೂರನೇ ಗುಹೆಯಲ್ಲಿ ಕಂಬದಲ್ಲಿ ಬೋದಿಗೆ ಶಿಲ್ಪವಾಗಿ ಮದಿರಾಪಾನ ಮಾಡಿದ ಪಾರ್ವತಿ, ಅವಳನ್ನೂ ಎತ್ತುತ್ತಿರುವ ಶಿವನ ಶಿಲ್ಪ ಗಮನಾರ್ಹವಾಗಿದೆ.

೭. ದೇವಾಂಗನ ದೇಸಾಯಿ. ಪೂರ್ವೋಕ್ತ.

೮. ರಂಧವಾ ಎಂ.ಎಸ್. Indian Sculpture P. 280.

೭. ಭಾರತದಲ್ಲಿ ಸಾವಯವ ಕೃಷಿಯ ಮೂಲಕ ನಿರಂತರ ಕೃಷಿ ಅಭಿವೃದ್ಧಿ

– ಸಿದ್ದರಾಜು ವಿ.ಜಿ.*
– ಡಾ. ಎಂ. ಇಂದಿರಾ**

ಬಾಹ್ಯಾಕಾಶ, ನ್ಯೂಕ್ಲಿಯರ್, ಕಂಪ್ಯೂಟರ್ ಇತ್ಯಾದಿ ಕ್ಷೇತ್ರಗಳಲ್ಲಿ ಕಾಣುತ್ತಿರುವ ಗಣನೀಯ ವೈಜ್ಞಾನಿಕ ಬೆಳೆವಣಿಗೆಯನ್ನು ನಾವು ಕೃಷಿ ಕ್ಷೇತ್ರದಲ್ಲಿಯೂ ಕಾಣಬಹುದಾಗಿದೆ. ಭಾರತದಲ್ಲಿ ಕೃಷಿ ಉತ್ಪಾದನೆಯಲ್ಲಿ ಆಹಾರೋತ್ಪನ್ನಗಳ ಉತ್ಪಾದನೆ ಕಳೆದ ದಶಕದಿಂದೀಚೆಗೆ ಹೆಚ್ಚಾಗಿರುವುದನ್ನು ನಾವು ಕಾಣಬಹುದು. ಈ ಉತ್ಪಾದನೆಯು ಸುಧಾರಿತ ತಳಿಗಳನ್ನು ಆಧುನಿಕ ಕೃಷಿ ಪದ್ಧತಿಯಲ್ಲಿ ಬಳಕೆ ಮಾಡುವುದರ ಮೂಲಕ ಸಾಧಿಸಲಾಗಿದೆ. ಹೀಗಿದ್ದರೂ ಸಹಾ ಈ ವಿಧಾನಗಳ ಫಲಿತಾಂಶವು ನಿರಂತರ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಿಲ್ಲ. ತದನಂತರದಲ್ಲಿ ರಾಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿಕೀಟನಾಶಕಗಳನ್ನು ಬಳಸುವುದರಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುವುದು. ಪರಿಸರ ಮಾಲಿನ್ಯ ಮತ್ತು ಕೃಷಿ ಉತ್ಪಾದನೆಯಲ್ಲಿನ ಹೆಚ್ಚಳದಲ್ಲಿನ ಕೊರತೆ ಕಳೆದ ದಶಕದಿಂದೀಚೆಗೆ ಕಳವಳಕ್ಕೆಡೆಮಾಡಿಕೊಡುತ್ತಿದೆ. ಇದಕ್ಕೋಸ್ಕರ ಆಧುನಿಕ ಕೃಷಿಗೆ ಬದಲಾಗಿ ಪರ್ಯಾಯ ಕೃಷಿಗಾಗಿ ಸಂಶೋಧನೆ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ ಆಧುನಿಕ ಕೃಷಿಯಿಂದ ಸಾವಯವ ಕೃಷಿಗೆ ಬದಲಾವಣೆಗೊಳ್ಳುತ್ತಿರುವುದನ್ನು ಕಾಣಬಹುದು.

* ಸಂಶೋಧಕರು, ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು. Email : - sidduecon@yahoo.co.in
** ಪ್ರವಾಚಕರು, ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು. Email: mahindira@yahoo.com

ಕೆಲವು ಲೇಖನಗಳು ಸಾವಯವ ಕೃಷಿಯು ಪರಿಸರ ಮತ್ತು ಉತ್ಪಾದನ ಪ್ರಮಾಣದ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಅಧ್ಯಯನ ಮಾಡಿವೆ. ಬೆಳೆಗಳ ಉತ್ಪಾದನೆಯಲ್ಲಿ ಸುಸ್ಥಿರತೆ ಕಾಪಾಡಲು ಸಾವಯವ ಕೃಷಿಯು ಒಂದು ಉತ್ತಮ ಮಾರ್ಗವಾಗಿದೆ ಎಂದು ಬೊರ್ ಮತ್ತು ಸಂಗಡಿಗರು (೨೦೦೩) ಅಭಿಪ್ರಾಯ ಪಟ್ಟಿದ್ದಾರೆ. ದಾವನ್ ಮತ್ತು ದೇಶಮುಖ್ (೨೦೦೫) ರವರ ಪ್ರಕಾರ ಕೃಷಿ ಉತ್ಪಾದನೆಯಲ್ಲಿ ರಾಸಾಯನಿಕ ಗೊಬ್ಬರಗಳ ಅವಲಂಬನೆಯನ್ನು ಕಡಿಮೆ ಮಾಡಿ ಪರಿಸರ ಸಂರಕ್ಷಣೆ, ಮಣ್ಣಿನ ಫಲವತ್ತತೆ, ಮಣ್ಣಿನಲ್ಲಿರುವ ಸಾವಯವ ಅಂಶಗಳನ್ನು ಕಾಪಾಡಿಕೊಂಡು ಹೋಗಲು ಸಾವಯವ ಕೃಷಿಯ ಮೂಲಕ ಸಾಧ್ಯ ಎಂದು ಹೇಳಿದ್ದಾರೆ. ತಾಕೂರ್ ಮತ್ತು ಶರ್ಮ (೨೦೦೫) ರವರ ಪ್ರಕಾರ ಆಧುನಿಕ ಕೃಷಿಯು ಹೆಚ್ಚು ವೆಚ್ಚ, ಕಠಿಣತೆ, ಆರ್ಥಿಕ ಸಾಮರ್ಥ್ಯ ಕಡಿಮೆ ಮತ್ತು ಪರಿಸರದಲ್ಲಿ ಅಸ್ಥಿರತೆ ಕಂಡುಬರುತ್ತದೆ. ಆದ್ದರಿಂದ ಸಾವಯವ ಕೃಷಿಯ ಮೂಲಕ ಮಣ್ಣಿನ ಫಲವತ್ತತೆ, ಉತ್ಪಾದನೆಯನ್ನು ಹೆಚ್ಚಿಸಲು, ಆದಾಯ ಮತ್ತು ಬೆಳೆಗಳಲ್ಲಿ ಸುಸ್ಥಿರತೆ ಕಾಪಾಡಲು ಸಾಧ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ಉತ್ಪಾದನೆ ಮತ್ತು ಪರಿಸರ ಮುಂತಾದ ಅಂಶಗಳಲ್ಲಿ ಸುಸ್ಥಿರತೆ ಅಥವಾ ನಿರಂತರ ಅಭಿವೃದ್ಧಿ ಸಾಧಿಸಲು ಸಾವಯವ ಕೃಷಿಯು ಒಂದು ಉತ್ತಮ ಮಾರ್ಗವಾಗಿದೆ.

ನಿರಂತರ ಅಭಿವೃದ್ಧಿ ಎಂದರೆ ಭವಿಷ್ಯದ ಪೀಳಿಗೆಯ ಅಗತ್ಯತೆಗಳ ಬಗ್ಗೆ ಯಾವುದೇ ರಾಜೀ ಅಥವಾ ಸಂಧಾನ ಮಾಡಿಕೊಳ್ಳದೆ ಈಗಿನ ಪೀಳಿಗೆಯ ಅಗತ್ಯತೆಗಳನ್ನು ಪೂರೈಸುವುದಾಗಿದೆ. ಈ ದೃಷ್ಟಿಯಲ್ಲಿ ಈಗಿನ ಪೀಳಿಗೆಗೆ ಅಗತ್ಯವಾಗಿ ಬೇಕಾಗಿರುವ ಆಹಾರ, ನೀರು, ಶಕ್ತಿ, ವಸತಿ ಮುಂತಾದವನ್ನು ಒದಗಿಸಿಕೊಡುವುದರ ಜೊತೆಗೆ ಭವಿಷ್ಯದ ಪೀಳಿಗೆಗೂ ಅಸ್ತಿತ್ವದಲ್ಲಿರುವಂತೆ ಮಾಡುವುದು. ಆದ್ದರಿಂದ ಪ್ರಸ್ತುತ ಪೀಳಿಗೆಗೆ ನೈಸರ್ಗಿಕ ಸಂಪನ್ಮೂಲಗಳು ಮತ್ತು ಪರಿಸರ ಸಂರಕ್ಷಣೆಗೋಸ್ಕರ ನಿರಂತರ ಅಭಿವೃದ್ಧಿ ಸಾಧಿಸುವುದು ಅಗತ್ಯವಾಗಿದೆ. ಹೀಗಾಗಿ 'ಸುಸ್ಥಿರ ಕೃಷಿ' ಕುರಿತಾದ ಚಿಂತನೆ ಕಳೆದ ಕಾಲು ಶತಮಾನದಿಂದ ತೀವ್ರಗೊಂಡಿದ್ದು 'ಸುಸ್ಥಿರ ಕೃಷಿಗಾಗಿ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ' ಕುರಿತು ಪ್ರಥಮ ಅಂತರರಾಷ್ಟ್ರೀಯ ಸಮ್ಮೇಳನವನ್ನು ಕೂಡ ೧೯೯೦ರಲ್ಲಿ ನವದೆಹಲಿಯಲ್ಲಿ ಆಯೋಜಿಸಲಾಗಿತ್ತು. ತದನಂತರ ಕೃಷಿ ಸಂಬಂಧಿತ ಅನೇಕ ವಿಷಯಗಳ ಮೇಲೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಭೆ, ಸಮ್ಮೇಳನಗಳು ನಡೆಯುತ್ತ ಬಂದಿವೆ. ನೈಸರ್ಗಿಕ ಸಂಪನ್ಮೂಲಗಳ ಉತ್ಪಾದನಾ ಸಾಮರ್ಥ್ಯದ ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನಾಧರಿಸಿ

ಲಾಭದಾಯಕವೂ ಹೆಚ್ಚಿನ ಮತ್ತು ಸ್ಥಿರವಾದ ಉತ್ಪಾದನೆಯೇ ಸುಸ್ಥಿರ ಕೃಷಿಯ ಉದ್ದೇಶವಾಗಿದೆ, ನಾಗರಿಕತೆಯ ಯಾವ ಹಂತದಲ್ಲಿ ಮಾನವನು ಕೃಷಿಯನ್ನು ಸುರಕ್ಷಿತವಾದ ಜೀವನೋಪಾಯ ಕ್ರಮವೆಂದು ಅನುಸರಿಸತೊಡಗಿದನೋ ಆ ಕ್ಷಣದಿಂದ ಜನಸಂಖ್ಯೆಯು ಹೆಚ್ಚಾಗತೊಡಗಿತಲ್ಲದೆ ನೈಸರ್ಗಿಕ ಸಂಪನ್ಮೂಲಗಳ ಬಳಕೆ ಅತಿಯಾಗತೊಡಗಿತು. ಸಮಯ ಗತಿಸಿದಂತೆ ಸಂಪನ್ಮೂಲಗಳ ಹರಣಕ್ರಿಯೆ ಮಿತಿಮೀರಿದ ವೇಗದಲ್ಲಿ ಮುಂದುವರೆದಿದ್ದು ಪ್ರಗತಿಪರ ರಾಷ್ಟ್ರಗಳಲ್ಲಿ ಈ ಪ್ರಕ್ರಿಯೆಯು ಈಗ ಹೆಚ್ಚು ವಿನಾಶಕಾರಿ ಮತ್ತು ಗಂಭೀರ ಸ್ವರೂಪ ತಾಳುತ್ತಿದೆ.

"ನಿರಂತರತೆ" ಎಂಬ ಪರಿಕಲ್ಪನೆಯನ್ನು ೧೯೯೨ ಮತ್ತು ೨೦೦೨ರ ಭೂ ಶೃಂಗಾ ಸಮ್ಮೇಳನಗಳಲ್ಲಿ ಚರ್ಚಿಸಲಾಗಿದೆ. ಇತ್ತೀಚೆಗೆ ಅಂದರೆ ೨೦೦೨ರ ಆಗಸ್ಟ್ ೨೪ ರಿಂದ ಸೆಪ್ಟೆಂಬರ್ ೪ರ ವರೆಗೆ ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ನಡೆದ 'ಸುಸ್ಥಿರ ಅಭಿವೃದ್ಧಿ' ಕುರಿತ ಜಾಗತಿಕ ಸಮ್ಮೇಳನದಲ್ಲಿ ವಿಶ್ವದ ನೂರಾರು ಪ್ರಮುಖ ರಾಷ್ಟ್ರಗಳ ನಾಯಕರು ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಗಳ ಸಮತೋಲನಕ್ಕಾಗಿ ನೀರು, ಶಕ್ತಿ, ಆರೋಗ್ಯ, ಕೃಷಿ ಮತ್ತು ಜೈವಿಕ ವೈವಿಧ್ಯತೆ ವಿಷಯಗಳಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ಕುರಿತು ಚರ್ಚಿಸಿದರು. ಈ ಸಮ್ಮೇಳನವು ಜಾಗತಿಕ ಸಮುದಾಯಕ್ಕೆ ಸುಸ್ಥಿರ ಕೃಷಿ ಸಾಧಿಸುವುದು, ಬಡತನ ಮತ್ತು ಹಸಿವು ಕಡಿಮೆ ಮಾಡುವುದು, ಸಂಪನ್ಮೂಲಗಳ ರಕ್ಷಣೆ ಕುರಿತು ಮಾಡುವುದರ ಕುರಿತು ಮಾಹಿತಿ ನೀಡಿತು. ನಿರಂತರತೆ ಪರಿಕಲ್ಪನೆಯು ಮೂರು ಅಂಶಗಳನ್ನು ಒಳಗೊಂಡಿದೆ. ಅವುಗಳೆಂದರೆ ಆರ್ಥಿಕ ನಿರಂತರತೆ, ಪರಿಸರ ನಿರಂತರತೆ ಮತ್ತು ಸಾಮಾಜಿಕ ನಿರಂತರತೆ.

ಸಾವಯವ ಕೃಷಿ ಎಂದರೆ ಕೃಷಿ ಉತ್ಪಾದನೆಯಲ್ಲಿ ಯಾವುದೇ ರೀತಿಯ ರಾಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿಕೀಟನಾಶಕಗಳನ್ನು ಬಳಸದೇ ಉತ್ಪಾದನೆ ಮಾಡುವುದಾಗಿದೆ. ಸಾವಯವ ಕೃಷಿ ಪದ್ಧತಿಯು ರಾಸಾಯನಿಕ ಗೊಬ್ಬರಗಳ ಬಳಕೆಯ ಬದಲಿಗೆ ತೋಟದ ಸಂಪನ್ಮೂಲಗಳು, ಕಡಿಮೆ ಬೆಲೆಯ ಸಾವಯವ ಮತ್ತು ಜೈವಿಕ ವಿಧಾನಗಳನ್ನು ಬಳಸಿಕೊಂಡು ಉತ್ಪಾದನೆ ಮಾಡುವುದಾಗಿದೆ.

ವಿವಿಧ ಕೃಷಿ ಪದ್ಧತಿಯ ಲಕ್ಷಣಗಳು

ವಿವಿಧ ಕೃಷಿ ಪದ್ಧತಿಯ ಪ್ರಮುಖ ಲಕ್ಷಣಗಳನ್ನು ಗಮನಿಸಿದಾಗ ಹಲವಾರು ಅಂಶಗಳಲ್ಲಿ ಸಾವಯವ ಕೃಷಿಯು ಹೆಚ್ಚು ಉತ್ತಮವಾಗಿದೆ. ಅಲ್ಲದೆ ಆಹಾರ

ಸಂರಕ್ಷಣೆ, ಪರಿಸರ ಸಂರಕ್ಷಣೆ ಮತ್ತು ಪರಿಸರದಲ್ಲಿ ಏಕತೆ ಸಾಧಿಸಲು ಸಾಧ್ಯವಾಗಿದೆ. ಹೀಗೆ ವಿವಿಧ ಕೃಷಿ ಪದ್ಧತಿಯ ಪ್ರಮುಖ ಲಕ್ಷಣಗಳನ್ನು ಕೆಳಗಿನ ಪಟ್ಟಿಯ ಮೂಲಕ ತಿಳಿಯಬಹುದಾಗಿದೆ.

ಕೃಷಿ ಪದ್ಧತಿಗಳು			
ಅಂಶಗಳು	ಆಧುಸಿಕ	ಸಾಂಪ್ರದಾಯಿಕ	ಸಾವಯವ (ಸುಸ್ಥಿರ)
ಉತ್ಪನ್ನ	ಹೆಚ್ಚಾಗಿರುತ್ತದೆ	ಕಡಿಮೆಯಾಗಿರುತ್ತದೆ	ಹೆಚ್ಚಾಗಿರುತ್ತದೆ
ಸುಸ್ಥಿರತೆ	ಕಡಿಮೆಯಾಗಿರುತ್ತದೆ	ಮಿತವಾಗಿರುತ್ತದೆ	ಹೆಚ್ಚಾಗಿರುತ್ತದೆ
ಉತ್ಪಾದನೆಯ ಉದ್ದೇಶ	ಮಾರುಕಟ್ಟೆ	ಸ್ವಬಳಕೆ	ಸ್ವಬಳಕೆ/ಮಾರುಕಟ್ಟೆ
ಆಧಾನ-ಬೀಜಗಳು	ಹೆಚ್ಚು ಇಳುವರಿ ನೀಡುವ ಬೀಜಗಳು	ಸ್ಥಳೀಯ ಬೀಜಗಳು	ಸುಧಾರಿತ/ಸ್ಥಳೀಯ ಬೀಜಗಳು
ರಾಸಾಯನಿಕ ಗೊಬ್ಬರ	ಹೆಚ್ಚಾಗಿರುತ್ತದೆ	ಕಡಿಮೆಯಾಗಿರುತ್ತದೆ	ಇಲ್ಲ

ಸಂಗ್ರಹ: ವಾರ್ಪ ಮತ್ತು ನಾರಾಯಣ (೧೯೯೮)

ಈ ಮೇಲಿನ ಪಟ್ಟಿಯು ತಿಳಿಸುವುದೇನೆಂದರೆ ಬಾಹ್ಯ ಆಧಾನಗಳಾದ ರಾಸಾಯನಿಕ ಗೊಬ್ಬರಗಳು, ತೋಟದ ಸಂಕೀರ್ಣತೆ ಉತ್ಪಾದನೆ ಮುಂತಾದ ವಿಷಯಗಳಲ್ಲಿ ಸಾವಯವ ಕೃಷಿಯನ್ನು ಇತರೆ ಕೃಷಿಯ ಪದ್ಧತಿಗೆ ಹೋಲಿಸಿದಾಗ ಹೆಚ್ಚು ಉತ್ತಮವಾಗಿದೆ. ಅಲ್ಲದೆ ಸುಸ್ಥಿರತೆಯು ಸಾವಯವ ಕೃಷಿಯಲ್ಲಿ ಅಧಿಕವಾಗಿದ್ದು ಇತರೆ ಕೃಷಿ ಪದ್ಧತಿಯಲ್ಲಿ ಕಡಿಮೆಯಿದೆ.

ಇಂದು ಆಧುನಿಕ ಕೃಷಿ ಪದ್ಧತಿಯಲ್ಲಿ ಪರಿಕರಗಳ ಅತಿಯಾದ ಬಳಕೆ ಮತ್ತು ದುರ್ಬಳಕೆಯಿಂದ ಉತ್ಪಾದನಾ ಮತ್ತು ಪರಿಸರ ಸಮತೋಲನದ ಮೇಲೆ ದುಷ್ಪರಿಣಾಮಗಳು ಉಂಟಾಗಿವೆ. ರಾಸಾಯನಿಕ ಗೊಬ್ಬರ, ಕೀಟನಾಶಕ ಮತ್ತು ಕಳೆನಾಶಕಗಳ ಬಳಕೆ ಹೆಚ್ಚುತ್ತಾ ಸಾಗಿವೆ ಆದರೆ ಭೂ ಫಲವತ್ತತೆಯನ್ನು ಕಾಪಾಡುವಲ್ಲಿ ಸಾವಯವ ಗೊಬ್ಬರಗಳ ಬಳಕೆಯ ಬಗ್ಗೆ ಹೆಚ್ಚಿನ ಮಹತ್ವ ನೀಡಿಲ್ಲ. ಇದರಿಂದ ಮಣ್ಣಿನ ಆರೋಗ್ಯ ಹದಗೆಟ್ಟು ಫಲವತ್ತತೆ ಕಡಿಮೆಯಾಗಿ ಉತ್ಪಾದನೆ ಕುಂಠಿತವಾಗುತ್ತಿದೆ. ಸಾವಯವ ಪದಾರ್ಥಗಳನ್ನು ಉಪಯೋಗಿಸಿ ಇದನ್ನು ಸರಿದೂಗಿಸಿಕೊಳ್ಳ ಬಹುದಾಗಿದೆ. ಪರಿಸರ ಮಾಲಿನ್ಯ ಉಂಟು ಮಾಡುವ ಕೀಟನಾಶಕಗಳ ಬದಲಾಗಿ ಜೈವಿಕ ವಿಧಾನ ಹಾಗೂ ಸಾವಯವ ಮೂಲದ ಕೀಟ ನಾಶಕಗಳ ಬಳಕೆಗೆ ಒತ್ತು ನೀಡಬೇಕಾಗಿದೆ.

ಸಾವಯವ ಕೃಷಿಯ ಉದ್ದೇಶಗಳು

* ಸ್ಥಳೀಯ ಸಂಪನ್ಮೂಲಗಳ ಸಂಪೂರ್ಣ ಬಳಕೆ.
* ದೀರ್ಘಾವಧಿಯಲ್ಲಿ ಮಣ್ಣಿನ ಫಲವತ್ತತೆಯನ್ನು ಕಾಪಾಡುವುದು.
* ಉತ್ತಮ ಗುಣಮಟ್ಟದ ಪೌಷ್ಟಿಕ ಆಹಾರವನ್ನು ಸಾಕಷ್ಟು ಪ್ರಮಾಣದಲ್ಲಿ ದೊರೆಯುವಂತೆ ಮಾಡುವುದು.
* ಆಧುನಿಕ ಕೃಷಿಯಿಂದ ಉಂಟಾಗಬಹುದಾದ ಪರಿಸರ ಮಾಲಿನ್ಯವನ್ನು ತಡೆಗಟ್ಟುವುದು.
* ಜಾನುವಾರುಗಳ ದೇಹದ ಅವಶ್ಯಕತೆಗೆ ಅನುಗುಣವಾಗಿ ಗುಣಮಟ್ಟದ ಆಹಾರ ಒದಗಿಸುವುದು.
* ಮಣ್ಣಿನ ಆರೋಗ್ಯ ಮತ್ತು ಉತ್ಪಾದನೆ ಅಭಿವೃದ್ಧಿಪಡಿಸುವುದು.
* ಅವಶ್ಯಕತೆಗೆ ಪೂರಕವಾಗಿ ಪೀಡೆ/ಕಳೆಗಳ ನಿರ್ವಹಣೆ ಮೂಲಕ ಸುಸ್ಥಿರ ಕೃಷಿಯನ್ನು ಕಾಯ್ದುಕೊಳ್ಳುವುದು.

ಸಾವಯವ ಕೃಷಿಯ ವಿವಿಧ ಅಂಶಗಳು

* ಅಗತ್ಯಕ್ಕೆ ತಕ್ಕಂತೆ ಉಳುಮೆ ಮಾಡುವುದರಿಂದ ಮಣ್ಣಿನಲ್ಲಿ ಸಸ್ಯವರ್ಗ ಮತ್ತು ಪ್ರಾಣಿವರ್ಗಗಳ ಅಭಿವೃದ್ಧಿಗೆ ಪೂರಕವಾಗುವುದು.
* ಮಣ್ಣಿನ ಫಲವತ್ತತೆ ಕಾಪಾಡಲು ಪೋಷಕಾಂಶಗಳು ಪೋಲಾಗುವುದನ್ನು ತಡೆಗಟ್ಟಲು ಮತ್ತು ಪೀಡೆಗಳ ಹಾವಳಿಯನ್ನು ನಿಯಂತ್ರಿಸಲು ಬೆಳೆ ಪರಿವರ್ತನೆ ಅತಿ ಮುಖ್ಯ. ಏಕದಳ ಬೆಳೆಗಳ ನಂತರ ದ್ವಿದಳ ಧಾನ್ಯ ಬೆಳೆಗಳನ್ನು ಬೆಳೆಯುವುದು. ಸಮೃದ್ಧಿಯಾದ ಕಾಂಪೋಸ್ಟ್ ಗೊಬ್ಬರವನ್ನು ಮಣ್ಣಿಗೆ ಸೇರಿಸುವುದರಿಂದ ಮಣ್ಣಿನ ಭೌತಿಕ ಹಾಗೂ ರಾಸಾಯನಿಕ ಗುಣಗಳಲ್ಲಿ ಸುಧಾರಣೆಯಾಗುತ್ತದೆ. ಭೂ ಫಲವತ್ತತೆ, ಉತ್ಪಾದನೆಯಲ್ಲಿ ಹೆಚ್ಚಳವಾಗುತ್ತದೆ.
* ಎರೆಹುಳುವಿನ ಗೊಬ್ಬರದಲ್ಲಿ ಸಸ್ಯ ಪೋಷಕಾಂಶಗಳು, ಬೆಳೆವರ್ಧಕಗಳು ಇರುತ್ತವೆ. ಇದು ಉತ್ತಮ ಗುಣಮಟ್ಟದ ಉತ್ಪನ್ನಕ್ಕೆ ಅಗತ್ಯ.
* ಹಸಿರೆಲೆ ಗೊಬ್ಬರ ಮಣ್ಣಿನಲ್ಲಿ ಸೇರುವುದರಿಂದ ಮಣ್ಣಿನ ರಚನೆ ಮತ್ತು ಫಲವತ್ತತೆ ಹೆಚ್ಚುತ್ತದೆ.
* ಸಸ್ಯ ಪೋಷಕಾಂಶ ಹೆಚ್ಚಿರುವ ಸೇಂಗಾ, ಹೊಂಗೆ, ಹರಳು ಬೇವು ಹಿಪ್ಪೆ ಹಿಂಡಿಗಳನ್ನು ಹೆಚ್ಚಾಗಿ ಬಳಸಿ ಉತ್ತಮ ಇಳುವರಿ ಪಡೆಯಬಹುದು.

ಸಾವಯುವ ಕೃಷಿಯಿಂದಾಗುವ ಪ್ರಯೋಜನಗಳು

* ಕೃಷಿ ಉತ್ಪಾದನೆಯನ್ನು ಅಧಿಕಗೊಳಿಸಲು, ಮಣ್ಣಿನ ಆರೋಗ್ಯವನ್ನು ಉತ್ತಮಗೊಳಿಸಲು ಸಹಾಯಕಾರಿ.
* ಪರಿಸರ ಆರೋಗ್ಯ ರಕ್ಷಣೆ ಮಾಡಿ ಮನುಕುಲ ಮತ್ತು ಪ್ರಾಣಿ ವರ್ಗಕ್ಕೆ ಆಗಬಹುದಾದ ಅನಾಹುತವನ್ನು ತಡೆಗಟ್ಟಬಹುದು.
* ಕೃಷಿ ಉತ್ಪಾದನಾ ಖರ್ಚನ್ನು ಕಡಿಮೆಗೊಳಿಸಬಹುದು.
* ಅಂತರ್ಜಲ ಮಾಲಿನ್ಯವನ್ನು ತಡೆಗಟ್ಟಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಬಹುದು.
* ಸಾವಯುವ ಕೃಷಿ ಪದ್ಧತಿಯನ್ನು ಅನುಸರಿಸಿ ಬೆಳೆದ ಉತ್ಪನ್ನಗಳಿಗೆ ಅತಿ ಹೆಚ್ಚಿನ ಬೇಡಿಕೆ ಇದ್ದು ಉತ್ತಮ ಆದಾಯ ದೊರೆಯುತ್ತದೆ.
* ಸಾವಯುವ ಕೃಷಿ ಪದ್ಧತಿಯಲ್ಲಿ ಬೆಳೆದ ಆಹಾರವು ಹಾನಿಕಾರಕ ರಾಸಾಯನಿಕಗಳಿಂದ ಮುಕ್ತವಾಗಿದ್ದು ಉತ್ತಮ ಗುಣಮಟ್ಟವಾಗಿರುತ್ತದೆ.

ಪರಿಸರ ಸಂರಕ್ಷಣೆಯ ನಡವಳಿಕೆಯಲ್ಲಿ ಬದಲಾವಣೆ, ಮಣ್ಣಿನ ಸಂರಕ್ಷಣೆ, ಸ್ಥಳೀಯ ಸಂಪನ್ಮೂಲಗಳ ಪುನರ್ ಬಳಕೆ, ಮಣ್ಣು ಮತ್ತು ಜಲಮಾಲಿನ್ಯ ಕಡಿಮೆ ಮಾಡುವುದು, ಜೈವಿಕ ವೈವಿಧ್ಯತೆ ಮತ್ತು ಅರಣ್ಯಗಳ ಬೆಳೆವಣಿಗೆಯೇ ನಿರಂತರ ಅಭಿವೃದ್ಧಿಯಾಗಿದೆ. ಈ ಎಲ್ಲಾ ಅಂಶಗಳನ್ನು ಪ್ರೋತ್ಸಾಹಿಸಲು ಸಾವಯುವ ಕೃಷಿಯು ಸಹಾಯ ಮಾಡುತ್ತದೆ. ಸಾವಯುವ ಕೃಷಿ ಸುಸ್ಥಿರತೆ ಪಡೆಯಬೇಕಾದರೆ ಗಮನ ಕೊಡಬೇಕಾದ ಮುಖ್ಯ ಅಂಶವೆಂದರೆ ತೋಟದಲ್ಲಿ ವೈವಿಧ್ಯತೆ. ಅಂದರೆ ಒಂದೋ, ಎರಡೋ ಬೆಳೆಗಳನ್ನು ಬೆಳೆಯುವುದರ ಬದಲು ಅಲ್ಲಿನ ಮಣ್ಣು ಮತ್ತು ಹವಾಗುಣಕ್ಕೆ ಹೊಂದಿಕೊಳ್ಳುವ ಮತ್ತು ಹೆಚ್ಚು ಬೇಡಿಕೆ ಇರುವ ಬೆಳೆಗಳನ್ನು ಅದರಲ್ಲೂ ಒಂದೆರಡು ಬಹುವಾರ್ಷಿಕ ಬೆಳೆಗಳನ್ನು ಬೆಳೆದುಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳುವುದು ಅವಶ್ಯಕ. ಬೆಳೆಯುತ್ತಿರುವ ಪ್ರತಿ ಬೆಳೆಯಲ್ಲೂ ಒಂದೇ ತಳಿಯ ಬದಲು ತಳಿಗಳ ಮಿಶ್ರಣ ಅಥವಾ ಹಲವು ತಳಿಗಳನ್ನು ಉಪಯೋಗಿಸಿಕೊಳ್ಳುವುದು ಸೂಕ್ತ. ಯಾರು ಮಣ್ಣಿನ ಫಲವತ್ತತೆ ಬಗ್ಗೆ ಗಮನ ಮತ್ತು ರಕ್ಷಣೆ ಮಾಡಲು ರಾಸಾಯನಿಕ ಮತ್ತು ಕ್ರಿಮಿಕೀಟನಾಶಕಗಳ ಬದಲಿಗೆ ಹಸಿರೆಲೆ ಗೊಬ್ಬರ, ಎರೆಹುಳು ಗೊಬ್ಬರ ಮತ್ತು ಕೊಟ್ಟಿಗೆ ಗೊಬ್ಬರವನ್ನು ಉಪಯೋಗಿಸುವರೋ ಅವರೇ ಸಾವಯುವ ಕೃಷಿಕರಾಗಿದ್ದಾರೆ. ಬೇರೆ ಕಡೆಗಳಿಂದ ಸಾವಯುವ ವಸ್ತುಗಳನ್ನು ತರುವ ಬದಲು ತಮ್ಮ ತೋಟಗಳಲ್ಲಿಯೇ ಜೀವ ದ್ರವ್ಯ ಉತ್ಪಾದಿಸುವ ಗಿಡಗಂಟೆಗಳನ್ನು ಬೆಳೆದು

ಸಾವಯವ ಗೊಬ್ಬರ ತಯಾರಿಸಿಕೊಳ್ಳುವುದು ಸುರಕ್ಷಿತ ಹಾಗೂ ಲಾಭಕರ ಕೂಡ. ಈ ದಿಸೆಯಲ್ಲಿ ಪ್ರಕೃತಿದತ್ತವಾದ ಸಾವಯವ ಮೂಲದ ಗೊಬ್ಬರಗಳಾದ ಕೃಷಿ ತ್ಯಾಜ್ಯಗಳು, ಪ್ರಾಣಿ ತ್ಯಾಜ್ಯಗಳು, ಹಸಿರೆಲೆ ಗೊಬ್ಬರಗಳು ಕೃಷಿಯಲ್ಲಿ ಬಳಸುವುದರ ಮೂಲಕ ಪ್ರಕೃತಿಗೆ ರಾಸಾಯನಿಕ ಗೊಬ್ಬರ, ಕೀಟನಾಶಕಗಳಿಂದಾಗಬಹುದಾದ ಹಾನಿಯನ್ನು ತಡೆಗಟ್ಟಬಹುದು. ಆದ್ದರಿಂದ ರೈತರು ಸಾವಯವ ಕೃಷಿ ಅಳವಡಿಸಿ ಮಣ್ಣಿನ ಆರೋಗ್ಯವನ್ನು ರಕ್ಷಿಸಬೇಕು, ಪರಿಸರ ಮಾಲಿನ್ಯವನ್ನು ತಡೆಗಟ್ಟಬೇಕು.

ಉಪಸಂಹಾರ

ಕೃಷಿ ಬೆಳೆಗಳಿಗೆ ಅತಿಯಾದ ರಾಸಾಯನಿಕ ಗೊಬ್ಬರಗಳಿಂದ ಬರೀ ಹೊಲದ ಮೇಲೆ ಮಾತ್ರವಲ್ಲ, ಜೀವಿಗಳ ಮತ್ತು ಪರಿಸರದ ಮೇಲೂ ವ್ಯತಿರಿಕ್ತ ಪರಿಣಾಮಗಳು ಆಗುತ್ತದೆ. ಹೀಗೆ ಹತ್ತಾರು ಮಾನವ ನಿರ್ಮಿತ ಕಾರಣಗಳಿಂದಾಗಿ ಪ್ರಕೃತಿಯ ಸಂಪನ್ಮೂಲಗಳ ನಾಶದ ಜೊತೆಗೆ ಉತ್ಪಾದನೆಯಲ್ಲಿ ಅಸ್ಥಿರತೆ ಹೆಚ್ಚಾಗುತ್ತದೆ. ಅಲ್ಲದೆ ಭೂಮಿಯು ತನ್ನ ಯೋಗ್ಯ ಪರಿಸರವನ್ನು ಕಳೆದುಕೊಳ್ಳುತ್ತಿರುವುದು ತುಂಬಾ ವಿಷಾದದ ಸಂಗತಿ. ಸಾವಯವ ಕೃಷಿಯು ಮಣ್ಣಿನ ಫಲವತ್ತತೆ, ಪರಿಸರ ಸಂರಕ್ಷಣೆ ಮತ್ತು ಉತ್ಪಾದನೆಯಲ್ಲಿ ಸ್ಥಿರತೆ ಕಾಪಾಡಲು ಉತ್ತಮ ಮಾರ್ಗವಾಗಿದೆ. ಪ್ರಸ್ತುತ ಮತ್ತು ಮುಂದಿನ ಪೀಳಿಗೆಯ ಅಗತ್ಯತೆಗಳನ್ನು ಸಾವಯವ ಕೃಷಿಯು ನಿರಂತರ ಕೃಷಿ ಅಭಿವೃದ್ಧಿ ಸಾಧಿಸುವುದರ ಮೂಲಕ ಪೂರೈಸಬಹುದಾಗಿದೆ. ಸಾವಯವ ಕೃಷಿಯನ್ನು ಅಳವಡಿಸಿಕೊಂಡರೆ ರೈತನಿಗೂ ಲಾಭ, ಪರಿಸರಕ್ಕೂ ಒಳ್ಳೆಯದು. ಸಾವಯವ ಕೃಷಿ ಹೊಲಕ್ಕೆ ಕಸಿ ರೈತರಿಗೆ ಖುಷಿ. ಆದ್ದರಿಂದ ಸಾವಯವ ಕೃಷಿಯ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಸಾಧಿಸಲು ಯುದ್ಧೋಪಾದಿಯಲ್ಲಿ ಯೋಜನೆಗಳನ್ನು ಕೈಗೊಳ್ಳಬೇಕಾದುದು ಅವಶ್ಯಕವು, ಅನಿವಾರ್ಯವು ಆಗಿರುವುದೆಂದು ಹೇಳಬಹುದು.

ಆಧಾರ ಗ್ರಂಥಗಳು

1. Arora (2005), Organic Agriculture: Issues and Prospects, *Kurukshetra, 53(3), Jan 2005, Pp: 41-42.*
2. Bora Sigh Sanjay, Bora TS and PR Rajpur (2003), Organic Farming: A Way to Sustainability, *Indian Farmer's Digest, 36(3), March 2003, Pp: 7-9.*

3. Dhawan A. S. and M.S. Deshmukh (2005), Organic Farming in Relation to Environment Pollution, *Kisan World, 32 (2) February 2005, Pp: 27-28.*

4. Rajendran S. and S.M. Basavaraj (2005), Relevance of Indigeneous Knowledge Systems for Sustainable Agriculture, *Ed. A Southern Economist Publication, Pp: 358-361.*

5. Thakur and Sharma K.D. (2005), Organic Farming for Sustainable Agriculture and Meeting the Challenges of Food Security in 21st Century: An Economic Analysis, *Indian Journal of Agriculture Economics*, 60 (2), April-June 2005, Pp: 205-219.

6. Werf E van der and B Narayan (1998), A Socio-Economic Study of Ecological Agriculture in South India, *AME and ICSIM*, Bangalore.

7. ಎ.ಎಸ್. ಹೂಲಗೇರಿ, ವಿಜಯ ಕರ್ನಾಟಕ, ೦೬-೦೯-೨೦೦೬

೮. ಮಹಿಳಾ ಸಬಲೀಕರಣದಲ್ಲಿ ಶಿಕ್ಷಣದ ಪಾತ್ರ

-ರತ್ನಮ್ಮ . ಜಿ.

ಒಂದು ದೇಶದ ಅಭಿವೃದ್ಧಿಯಲ್ಲಿ ಆ ದೇಶದ ನೈಸರ್ಗಿಕ ಸಂಪನ್ಮೂಲಗಳ ಜೊತೆಗೆ ಮಾನವ ಸಂಪನ್ಮೂಲ ಕೂಡ ಅಷ್ಟೇ ಪ್ರಮುಖವಾದುದಾಗಿದೆ. ಅಲ್ಲಿನ ಜನಸಂಖ್ಯೆ ಅದರಲ್ಲಿಯೂ ಸಹ ಸುಶಿಕ್ಷಿತ ಜನಸಂಖ್ಯೆ ದೇಶದ ಬೆಳವಣಿಗೆ ಮೇಲೆ ಪ್ರಭಾವ ಬೀರುವಂತಹದ್ದು. ಹಾಗೆಯೇ ಉತ್ತಮ ನಾಗರಿಕ ಸಮಾಜದ ನಿರ್ಮಾಣದಲ್ಲಿ ಆ ದೇಶದ ಸ್ತ್ರೀಯರ ಸ್ಥಾನಮಾನ, ಅವರಿಗೆ ಕೊಡುವಂತಹ ಸವಲತ್ತುಗಳು ಸೌಲಭ್ಯಗಳು ಅವರ ಶಿಕ್ಷಣದ ಗುಣಮಟ್ಟವು ಯಾವುದೇ ರೀತಿಯಲ್ಲಿ ಕಡಿಮೆ ಮಹತ್ವವನ್ನು ಹೊಂದಿಲ್ಲ. "ಮಗುವಿಗೆ ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು" ಎಂಬಂತಹ ನಾಣ್ಣುಡಿಯು ಸ್ತ್ರೀಯರನ್ನು ಪುರುಷರಿಗಿಂತ ಮೊದಲ ಪಂಕ್ತಿಯಲ್ಲಿ ನಿಲ್ಲಿಸಿದೆ. ಮಹಿಳೆಯೊಬ್ಬಳು ಕಲಿತರೆ ಆಕೆಯಿಂದ ಜನಿಸುವ ಎಲ್ಲಾ ಮಕ್ಕಳೂ ಕಲಿಯುವುದರಲ್ಲಿ ಸಂಶಯವೇ ಇಲ್ಲ. ಆದರೆ ಐತಿಹಾಸಿಕವಾಗಿ ಮತ್ತು ಸಾಮಾಜಿಕ-ಸಾಂಸ್ಕೃತಿಕ, ರಾಜಕೀಯ ಕಾರಣಗಳಿಂದ ನಮ್ಮ ಸಮಾಜದ ಮಹಿಳೆಯರು ಕಡೆಗಣಿಸಲ್ಪಟ್ಟಿದ್ದಾರೆ. ಪುರುಷರಿಗೆ ಹೋಲಿಸಿದರೆ ಶಿಕ್ಷಣ, ಆರೋಗ್ಯ, ಉದ್ಯೋಗ, ಆರ್ಥಿಕ, ಆಡಳಿತ, ರಾಜಕೀಯ ರಂಗಗಳಲ್ಲಿ ಅವರ ಸ್ಥಿತಿಗತಿಗಳು ನಿರಾಶಾದಾಯಕವೆಂದು ಅನೇಕ ಸ್ಥೂಲ ಸೂಚಿಗಳಿಂದ ಕಂಡುಬಂದಿದೆ.

ಸ್ತ್ರೀಯರ ಸ್ಥಾನಮಾನ

ಸ್ತ್ರೀ-ಪುರುಷ ತಾರತಮ್ಯವಿದ್ದುದು ಶತಮಾನಗಳ ಇತಿಹಾಸ. ಪುರುಷ ಪ್ರಧಾನ ಸಮಾಜದಿಂದಾಗಿ ಮಹಿಳೆ ಅನೇಕ ಅವಕಾಶಗಳಿಂದ ವಂಚಿತಳಾಗಿ ದ್ವಿತೀಯ ದರ್ಜೆಯ ಪ್ರಜೆಯಂತೆ ಬದುಕುತ್ತಾ ಬಂದಿದ್ದಾಳೆ. ತನ್ನದೇ ಆದ ಬದುಕಿನ

ನಿರ್ಣಯಗಳನ್ನು ತೆಗೆದುಕೊಳ್ಳಲಾಗದಂಥ ಸಮಾಜದ ಕಟ್ಟು-ಪಾಡುಗಳಲ್ಲಿ ಬಂಧಿಯಾಗಿದ್ದಾಳೆ. ಪ್ರತಿಯೊಂದಕ್ಕೂ ಪುರುಷರನ್ನೇ ಅವಲಂಬಿಸಿ ಪರಾವಲಂಬಿಯಾಗಿಯೇ ಬದುಕುವ ಅವಳು ರಾಜಕೀಯ ಚುಕ್ಕಾಣಿ ಹಿಡಿಯುವುದು ಅಪರೂಪದ ವಿಷಯವಾಯಿತು. ಮತದಾನದ ಹಕ್ಕಿಗಾಗಿ ಜಗತ್ತಿನಾದ್ಯಂತ ಎಷ್ಟೆಲ್ಲಾ ಹೋರಾಟ ನಡೆಸಬೇಕಾಗಿ ಬಂದದ್ದನ್ನು ಗಮನಿಸಿದಾಗ ಇದರ ಅರ್ಥ ಇನ್ನೂ ವ್ಯಾಪಕವಾಗುತ್ತದೆ. ಸುಮಾರು ೧೮೪೮ ರ ಸಮಯದಲ್ಲಿ ನ್ಯೂಯಾರ್ಕ್‌ನಲ್ಲಿ ಮತದಾನದ ಹಕ್ಕಿಗಾಗಿ ಮಹಿಳೆಯರು ಧ್ವನಿ ಎತ್ತಿದರೂ ೧೯೩೦ರ ಹೊತ್ತಿಗೆ ಕೇವಲ ೧೫ ರಾಷ್ಟ್ರಗಳಲ್ಲಿ ಮಾತ್ರ ಆಕೆಗೆ ಮತದಾನ ಮಾಡುವ ಹಕ್ಕು ದೊರೆಯಿತು.

ಸ್ವಾತಂತ್ರ್ಯ ಬಂದು ೬ ದಶಕಗಳು ಕಳೆದರೂ ಮಹಿಳೆಯರ ಸ್ಥಿತಿಗತಿಗಳಲ್ಲಿ ಹೆಚ್ಚೇನೂ ಬದಲಾವಣೆಗಳಾಗಿಲ್ಲ. ಹೀಗೆ ಮಹಿಳೆಯರು ಹತ್ತು ಹಲವು ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಈ ಎಲ್ಲಾ ಸಮಸ್ಯೆಗಳ ಮೂಲ ಬೇರು ಅವರಲ್ಲಿರುವ ಶಿಕ್ಷಣದ ಕೊರತೆ. ಆದ್ದರಿಂದ ಮಹಿಳಾ ಸಬಲೀಕರಣ ಸಾಧಿಸಬೇಕಾದರೆ, ಆರ್ಥಿಕ ಸ್ವಾಯತ್ತತೆಯನ್ನು ಸಾಧಿಸಲು ಅವರಿಗೆ ರಾಜಕೀಯದಲ್ಲಿ ಅವಕಾಶ ಮಾಡಿಕೊಡಬೇಕು ಮತ್ತು ಸರಿಯಾದ ಶಿಕ್ಷಣವು ದೊರಕುವಂತೆ ನೋಡಿಕೊಳ್ಳಬೇಕು.

ಸ್ತ್ರೀ ಶಿಕ್ಷಣದ ಮಹತ್ವ

ಮಾನವನ ಹಾಗೂ ದೇಶದ ಸರ್ವಾಂಗೀಣ ಪ್ರಗತಿಯಲ್ಲಿ ಶಿಕ್ಷಣದ ಪಾತ್ರ ಅತ್ಯಂತ ಪ್ರಮುಖವಾಗಿದೆ. ಶಿಕ್ಷಣವು ಸ್ತ್ರೀ–ಪುರುಷರಿಬ್ಬರ ಮಧ್ಯದ ಭೇದ ಭಾವಗಳನ್ನು ಅಳಿಸಿ ಅವರ ಸಾಮಾಜಿಕ, ಆರ್ಥಿಕ ಜೀವನ ಮಟ್ಟವನ್ನು ಸುಧಾರಿಸಿ ಹಲವಾರು ಸಾಮಾಜಿಕ ಅನಿಷ್ಟಗಳಾದ ಜಾತೀಯತೆ, ಬಡತನ, ಮೂಢನಂಬಿಕೆ, ಶೋಷಣೆ ಇತ್ಯಾದಿಗಳನ್ನು ಹೊಡೆದೋಡಿಸುತ್ತದೆ. ಆರ್ಥಿಕ ಪ್ರಗತಿಯ ಸಿದ್ಧಾಂತಗಳು ಸಹ ಸ್ತ್ರೀ ಶಿಕ್ಷಣ ಹಾಗೂ ಆರ್ಥಿಕ ಪ್ರಗತಿಯ ಮಧ್ಯೆ ಧನಾತ್ಮಕ ಸಂಬಂಧವನ್ನು ಕಲ್ಪಿಸಿವೆ. ಆದುದರಿಂದಲೇ ೧೯೮೬ ರ ರಾಷ್ಟ್ರೀಯ ಶಿಕ್ಷಣ ನೀತಿಯು, "ಶಿಕ್ಷಣವು ಸ್ತ್ರೀಯರ ಸ್ಥಾನಮಾನಗಳನ್ನು ಹೆಚ್ಚಿಸಬೇಕು, ಅವರಿಗೆ ಸರಿಯಾದ ತರಬೇತಿ ಕೊಡಬೇಕು ಹಾಗೂ ಅದಕ್ಕಾಗಿ ಹಲವಾರು ರೂಪರೇಷೆಗಳನ್ನು ಹಾಕಿಕೊಳ್ಳಬೇಕೆಂದು ಒತ್ತಾಯಿಸಿತು." ಮಹಿಳಾ ಶಿಕ್ಷಣವು ಸ್ತ್ರೀಯರ ಸ್ಥಾನಮಾನಗಳನ್ನು ವೃದ್ಧಿಸಲು ಜೊತೆಗೇನೆ, ಶಿಶು ಮರಣದ ಪ್ರಮಾಣವನ್ನು ನಿಯಂತ್ರಿಸುತ್ತದೆ. ಮಹಿಳೆಯರಲ್ಲಿ ಧನಾತ್ಮಕ ಚಿಂತನೆಗಳಿಂದ ಮನಸ್ಸನ್ನು ಪ್ರಚೋದಿಸಿ ಸ್ವಾವಲಂಬನೆ, ಸ್ವಾಯತ್ತತೆಗೆ

ಪ್ರೇರೇಪಿಸುತ್ತದೆ. ಮಕ್ಕಳ ಹಾಗೂ ಸ್ವತಃ ತಮ್ಮ ಮೂಲಭೂತ ಹಕ್ಕುಗಳ ಬಗ್ಗೆ ಹೋರಾಡಲೂ, ಚಿಂತಿಸಲೂ ಹುರಿದುಂಬಿಸುತ್ತದೆ. ಇವೆಲ್ಲದಕ್ಕಿಂತ ಹೆಚ್ಚಾಗಿ ಆರ್ಥಿಕ ಚಟುವಟಿಕೆಯಲ್ಲಿ ಸಹಕಾರಿ ಮನೋಭಾವನೆ ಬೆಳೆಸಿಕೊಂಡು ತೀವ್ರಗತಿಯ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಸಹಕಾರಿಯಾಗಿದೆ.

ಸ್ತ್ರೀ ಶಿಕ್ಷಣದ ಸಮಸ್ಯೆಗಳು

ಸ್ತ್ರೀ ಶಿಕ್ಷಣದ ಸಮಸ್ಯೆಗಳೆಂದರೆ, ಲಿಂಗ ತಾರತಮ್ಯ, ಮನೆಯಲ್ಲಿಯೇ ಗಂಡು ಮಕ್ಕಳನ್ನು ಪ್ರೋತ್ಸಾಹಿಸಿ, ಹೆಣ್ಣು ಮಕ್ಕಳನ್ನು ನಿರ್ಲಕ್ಷಿಸುವುದು ಸಾಮಾನ್ಯವಾದಂತಹದ್ದು. ಈ ಪ್ರವೃತ್ತಿಯು ಪಟ್ಟಣದವರಿಗಿಂತ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹೆಣ್ಣು ಮಕ್ಕಳನ್ನು ಬೇಗನೇ ಶಾಲೆ ಬಿಡಿಸಿ ಮನೆಗೆಲಸಕ್ಕೊ ಅಥವಾ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲಿಕ್ಕೂ ಬಳಸುವುದು. ಮನೆಯಲ್ಲಿ ಬಡತನವಿರುವುದರಿಂದ ಹೆಣ್ಣು ಮಕ್ಕಳನ್ನು ಶಾಲೆ ಬಿಡಿಸಿ, ಕೇವಲ ಗಂಡು ಮಕ್ಕಳನ್ನು ಶಾಲೆಗೆ ಕಳುಹಿಸಿ ಸ್ವಲ್ಪ ಮಟ್ಟಿಗೆ ಖರ್ಚನ್ನು ನಿಯಂತ್ರಿಸಲು ಯತ್ನಿಸುವುದು. ಹೆಣ್ಣು ಮಕ್ಕಳನ್ನು ಶಾಲೆ ಬಿಡಿಸಿ ಬೇಗನೇ ಮದುವೆ ಮಾಡಿಕೊಡುವುದು. ಸಾಮಾಜಿಕ, ಆರ್ಥಿಕ ಶೋಷಣೆ ಅಂದರೆ, ಹೆಣ್ಣು ಮಗು ಹೆಚ್ಚು ಕಲಿಯಬಾರದು, ಹೆಚ್ಚು ಕಲಿತರೆ, ಅವಳಿಗೆ ಉತ್ತಮ ಉದ್ಯೋಗ ಸಿಕ್ಕರೆ ವಿದ್ಯಾವಂತ ಗಂಡನನ್ನು ಹುಡುಕುವ ಸಮಸ್ಯೆ ಮತ್ತು ಅವಳಿಗೆ ಆರ್ಥಿಕ ಸ್ವಾತಂತ್ರ್ಯ ಸಿಕ್ಕರೆ, ಅವಳನ್ನು ನಿಯಂತ್ರಿಸುವುದು ಕಷ್ಟ ಎನ್ನುವ ದುರಾಲೋಚನೆ, ತಂದೆ-ತಾಯಿಯರಲ್ಲಿ ಶಾಲೆ ಮತ್ತು ಮನೆಯ ಹೊರಗಿನ ಪರಿಸರದಲ್ಲಿ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವಾಗಬಹುದೆಂಬ ಅಂಜಿಕೆ, ಧಾರ್ಮಿಕ ಕಟ್ಟಳೆಗಳು, ಅಂದರೆ ಕೆಲ ಧರ್ಮಗಳಲ್ಲಿ ಹೆಣ್ಣನ್ನು ಪುರುಷರಿಗಿಂತ ಕೆಳ ಮಟ್ಟದಲ್ಲಿ ಕಾಣುವುದು ಸರಿಯಾದ ಶಾಲೆ, ಶಿಕ್ಷಕ, ಶಿಕ್ಷಕಿಯರು ಇಲ್ಲದಿರುವುದು, ಶಾಲೆಗಳು ದೂರ ಇರುವುದು ಮತ್ತು ಅವುಗಳಿಗೆ ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲದಿರುವುದು, ಶಾಲೆಯ ಅಕ್ಕಪಕ್ಕ ವಿದ್ಯಾರ್ಥಿನಿಯರಿಗೆ ವಸತಿ ನಿಲಯಗಳಿಲ್ಲ ದಿರುವುದು. ಶಾಲೆಯಲ್ಲಿ ಕಲಿಕೆಗೆ ಬೇಕಾದ ಪೂರಕವಾದ ಅಂಶಗಳು ಇಲ್ಲದಿರುವುದು ಇತ್ಯಾದಿ.

ಸ್ತ್ರೀ ಸಬಲೀಕರಣದ ಕೆಲವು ಸಲಹೆಗಳು ಮತ್ತು ಸೂಚನೆಗಳೆಂದರೆ ನಮ್ಮ ದೇಶದಲ್ಲಿ ಕೇವಲ ಭಾಷಣಗಳೇ ಆಗುತ್ತಿವೆಯೇ ಹೊರತು ಕಾರ್ಯರೂಪಕ್ಕೆ ಬರುತ್ತಿಲ್ಲ. ಹಾಗೆ ನೋಡಿದರೆ ಇರುವ ಕಾರ್ಯಕ್ರಮಗಳನ್ನು ಸರಿಯಾಗಿ ಅನುಷ್ಠಾನಕ್ಕೆ

ತಂದರೆ ಸ್ವಯಂ ಆಗಿ ಪಾಲಿಸಿದರೆ ಸ್ತ್ರೀ ಸಬಲೀಕರಣ ಎನ್ನುವ ಪದ ಮಹತ್ವ ಪಡೆಯುತ್ತದೆ. ಜೊತೆಗೆ ಲಿಂಗ ಸಮಾನತೆಗೆ ಅತ್ಯವಶ್ಯಕ ಒತ್ತು ಕೊಡಬೇಕು. ಇದನ್ನು ಕಾನೂನಿಗಿಂತ ಮಿಗಿಲಾಗಿ, ಜನರು ಸ್ವಯಂ ಸ್ಫೂರ್ತಿಯಿಂದ ಬೆಂಬಲಿಸಬೇಕು. ಮಹಿಳೆಯರಿಗೆ ಸಂಬಂಧಿಸಿದಂತೆ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಸಮಾನ ಅವಕಾಶಗಳಿಗಾಗಿ ಹೊರಡಿಸಲಾದ ಕಾನೂನಾತ್ಮಕ ಹಕ್ಕುಗಳು ಅವರಿಗೆ ದೊರೆಯುವ ಹಾಗೆ ಪ್ರಯತ್ನಿಸುವುದು. ಇದಕ್ಕಾಗಿ ಮಹಿಳಾ ಸಂಘಟನೆಗಳನ್ನು ಸದೃಢಗೊಳಿಸುವುದು. ಶಿಕ್ಷಣ ರಂಗದಲ್ಲಿ ಸಂವಿಧಾನಾತ್ಮಕ ಹಕ್ಕುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು. ಹೆಣ್ಣು ಮಕ್ಕಳು ಕಲಿಯಲು ಅನುಕೂಲ ಇರುವ ಹಾಗೆ ಶಾಲೆಗಳನ್ನು ಪ್ರತಿ ಗ್ರಾಮಗಳಲ್ಲಿ ತೆರೆಯುವುದು, ಸರಿಯಾದ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವುದು, ಮಹಿಳಾ ಶಿಕ್ಷಕಿಯನ್ನು ನೇಮಿಸಿ ಅವರಿಗೆ ಸರಿಯಾದ ತರಬೇತಿ ಕೊಟ್ಟು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒಲವು ತೋರಿಸಲು ಪ್ರೇರೇಪಿಸುವುದು, ಶಾಲೆ ಬಿಟ್ಟ ಮಕ್ಕಳಿಗಾಗಿ 'ಮರಳಿ ಶಾಲೆಗೆ' ಎನ್ನುವ ಕಾರ್ಯಕ್ರಮವನ್ನು ಜಾರಿಗೊಳಿಸಿ ಯಶಸ್ವಿಗೊಳಿಸುವುದು, ಹಲವಾರು ಪ್ರೋತ್ಸಾಹಕಗಳಾದ ಪುಸ್ತಕ, ಉಪಹಾರ, ಬಸ್‌ಪಾಸ್ ಇತ್ಯಾದಿಗಳಿಂದ ಮಕ್ಕಳನ್ನು ಶಾಲೆಯತ್ತ ಆಕರ್ಷಿಸುವುದು, ಗ್ರಾಮೀಣ ಪ್ರದೇಶದ ಪೋಷಕರಿಗೆ ಸ್ತ್ರೀ ಶಿಕ್ಷಣದ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸುವುದು, ದೂರ ಶಿಕ್ಷಣ ಸಂಧ್ಯಾ ಶಾಲೆ/ಕಾಲೇಜುಗಳ ಮುಖಾಂತರ ಶಿಕ್ಷಣದಿಂದ ವಂಚಿತರಾದವರಿಗ ಶಿಕ್ಷಣ ಪಡೆಯಲು ಪ್ರೇರೇಪಿಸುವುದು, ಉದ್ಯೋಗದಲ್ಲಿರುವ ಅಥವಾ ಬೇಗನೇ ಮದುವೆಯಾಗಿ ಶಿಕ್ಷಣದಿಂದ ದೂರ ಉಳಿದಿರುವ ಸ್ತ್ರೀ-ಪುರುಷರಿಬ್ಬರಿಗೂ ಶಿಕ್ಷಣ ಸಿಗುವಂತಾಗಲು ಸಂಧ್ಯಾ ಶಾಲೆ-ಕಾಲೇಜುಗಳನ್ನು ಸ್ಥಾಪಿಸಿ ಅಲ್ಲಿಯ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳಿಗೆ ಸರಿಯಾದ ತರಬೇತಿ ಕೊಟ್ಟು ಸುಶಿಕ್ಷಿತ ಸಮಾಜ ನಿರ್ಮಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದು.

ಹೀಗೆ ಹಲವಾರು ಕಾರ್ಯಕ್ರಮಗಳಿಂದ ಸ್ತ್ರೀ ಶಿಕ್ಷಣವನ್ನು ಉತ್ತಮಪಡಿಸಿ ಅದರಿಂದ ಸ್ತ್ರೀಯರು ಅಬಲೆಯರಲ್ಲ ಸಬಲೆಯರೆಂದು ಸಾಬೀತುಪಡಿಸ ಬೇಕಾಗಿರುವುದಾಗಿದೆ.

ಮಹಿಳೆಯರ ಶ್ರೇಯೋಭಿವೃದ್ಧಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹತ್ತು-ಹಲವು ಕಾರ್ಯಕ್ರಮಗಳ ಮುಖಾಂತರ, ಯೋಜನೆಗಳ ಮುಖಾಂತರ ಹಾಗೂ ಕಾನೂನಿನ ಮುಖಾಂತರ ಪ್ರಯತ್ನಿಸಿದರೂ ಭಾರತದ ಮಾನಿನಿಯರ

ಸ್ಥಿತಿಗತಿಗಳು ಅಷ್ಟೊಂದು ಸುಧಾರಿಸಿಲ್ಲ. ಇಲ್ಲಿ ಇನ್ನೂ ಸಹ ಲೈಂಗಿಕ ದೌರ್ಜನ್ಯ, ವರದಕ್ಷಿಣೆ ಸಾವುಗಳಿಗೆ ಬರವಿಲ್ಲದಂತಾಗಿದೆ. ಸ್ತ್ರೀಯ ಹಿತಾಸಕ್ತಿ ಕಾಪಾಡಬೇಕಾದ ಸ್ತ್ರೀಯೇ ಕೆಲವೊಮ್ಮೆ ವಿರೋಧಾಭಾಸಕ್ಕೆ ಎಡೆ ಮಾಡಿಕೊಡುತ್ತಿರುವುದು ಸೋಜಿಗದ ಸಂಗತಿ. ಪುರುಷರು ಕೂಡಾ ಭಾಷಣಗಳನ್ನು ಕೊಡುತ್ತಾರೆಯೇ ವಿನಃ ತಮ್ಮ ಮನೆಯ ಹೆಂಗಸರಿಗೇನೇ ಸ್ವಾಯತ್ತತೆ ಕೊಡುವುದಿಲ್ಲ. ಕೆಲವೊಮ್ಮೆ ಪುರುಷರು ಸಹಕರಿಸಿದರೂ ಮಹಿಳೆಯರು ಅದನ್ನು ನಿರಾಕರಿಸುವವರಿದ್ದಾರೆ. ಇದಕ್ಕೆಲ್ಲ ಮುಖ್ಯ ಕಾರಣವೆಂದರೆ ಸಮಾಜದ ಪುರುಷರ ಹಾಗೂ ಕೆಲ ಸಂದರ್ಭಗಳಲ್ಲಿ ಸ್ತ್ರೀಯರ ಮನೋಪ್ರವೃತ್ತಿಗಳು. ಶೇ. ೪೮.೨ ರಷ್ಟಿರುವ ಹೆಣ್ಣು ಮಕ್ಕಳನ್ನು ಸಬಲರನ್ನಾಗಿ ಮಾಡಿದರೆ ಸಮಾಜ ಆರ್ಥಿಕ ಅಭಿವೃದ್ಧಿ ಸಾಧಿಸುವಲ್ಲಿ ಅಸಾಧ್ಯವೇನಿಲ್ಲ. ಇದು ಪ್ರತಿಯೊಬ್ಬರ ಹೃದಯಾಂತರಾಳದಿಂದ ಬಂದರೆ ಇನ್ನೂ ಅನುಕೂಲವಾಗುತ್ತದೆ.

೯. ಪಶ್ಚಿಮ ಏಷ್ಯಾದಲ್ಲಿ ಅಲ್ಪಸಂಖ್ಯಾತರು : ಕೆಲವು ಪ್ರಾಥಮಿಕ ಪರಿಶೀಲನೆ

–ಶಿವಾನಂದ

ಪಶ್ಚಿಮ ಏಷ್ಯಾದಲ್ಲಿನ ವಿವಿಧ ಸಮುದಾಯಗಳ ಸಹಬಾಳ್ವೆ ಒಂದು ಐತಿಹಾಸಿಕ ಅನಿವಾರ್ಯತೆಯಾಗಿದೆ. ಪಶ್ಚಿಮ ಏಷ್ಯಾದ ಬಹುತೇಕ ರಾಜಕೀಯ ಚಿಂತಕರು ಪ್ರಜಾಪ್ರಭುತ್ವ ತತ್ವ ಸಿದ್ಧಾಂತಗಳೊಡನೆ ಅವರ ಇಸ್ಲಾಂ ನಂಬಿಕೆಯ ಪುನರ್ ಮನನಕ್ಕಾಗಿ ಒಂದು ಸೂತ್ರವನ್ನು ಕಂಡುಕೊಂಡಿದ್ದಾರೆ. ಇಸ್ಲಾಂ ಒಂದು ಅತ್ಯಗತ್ಯವಾದ ಪ್ರಜಾಪ್ರಭುತ್ವವೆಂದು ಅಲ್ಪಸಂಖ್ಯಾತರು ತಿಳಿದಿದ್ದಾರೆ. ಆರಂಭದ ಇಸ್ಲಾಂನಲ್ಲಿ ವಿವೇಚನೆಯುಳ್ಳ ಅಂಶಗಳಿದ್ದು, ನಿಜವಾದ ಪ್ರಜಾಪ್ರಭುತ್ವ ಗುಣದಿಂದ ಕೂಡಿತ್ತು. ದೇವರ ಮುಂದೆ ಎಲ್ಲಾ ಪುರುಷರು ಸರಿಸಮಾನರು ಹಾಗೂ ಕಲೀಫರ ಪಟ್ಟಾಭಿಷೇಕವು ಸಹ ಹೆಸರುವಾಸಿಯಾಗಿತ್ತು. ಇಸ್ಲಾಂ ಆರಂಭದ ಸೈದ್ಧಾಂತಿಕ ಹಂತದಲ್ಲಿ ಧರ್ಮ ಸಮುದಾಯ ಮತ್ತು ರಾಷ್ಟ್ರವು ಒಂದೇ ಆಗಿತ್ತು. 'ಬೇತ್-ಇಲ್-ಮಾಲ್ (ಸಾಮಾನ್ಯ ಖಜಾನೆ) ಎಂದು ಕರೆಯಲ್ಪಡುವ ಸಂಸ್ಥೆಯಿಂದ ಎಲ್ಲಾ ಅಗತ್ಯತೆಗಳನ್ನು ಇದು ಪೂರೈಸುತ್ತಿತ್ತು. ಭಿಕ್ಷೆಯನ್ನು ನೀಡಲಾಗುತ್ತಿತ್ತು. ನಂತರ ಧಾರ್ಮಿಕ ದತ್ತಿ ಮತ್ತು ಫಕೀರನ ಆದೇಶಗಳ ವ್ಯವಸ್ಥೆ ಸಮುದಾಯಗಳನ್ನು ಒಟ್ಟಿಗೆ ತರಲು ಸಹಾಯವಾಗಿತ್ತು.

ಕೆಲವು ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಸಂಸ್ಥೆಗಳು ಈಗ ನಾಗರಿಕತೆ ಮತ್ತು ಪ್ರಗತಿಯ ಜೊತೆಗಿರುವುದು ಅತ್ಯಗತ್ಯವಾಗಿದೆ. ಇಸ್ಲಾಮಿಕ್ ರಾಷ್ಟ್ರಗಳ ಒಕ್ಕೂಟದ ಪರಿಕಲ್ಪನೆ ಮೂಲಕ ಕಲ್ಯಾಣಾಧಾರಿತ ಆಧುನಿಕ ರಾಷ್ಟ್ರಗಳ ಪರಿಕಲ್ಪನೆಯು ಆಳವಾಗಿ ಬೇರೂರುತ್ತಿದೆ. ಕಲೀಫ ಎಂಬ ಸರ್ವಾಧಿಕಾರಿ ಕೇಂದ್ರೀಕೃತ ವ್ಯವಸ್ಥೆಯು ಒಂದು ಹುದ್ದೆಯ ವಿಷಯವಾಗಿದೆ.

ನೆಪೋಲಿಯನ್ ಕೋಡ್‌ನ ಒಗ್ಗಟ್ಟಿನ ಪ್ರಭಾವವು ಹಾಗೂ ಸರ್ಕಾರದ ಕಾರ್ಯದ ಪಾಶ್ಚಿಮಾತ್ಯ ಪರಿಕಲ್ಪನೆಯು ಸಮುದಾಯಗಳಿಗೆ ವ್ಯಕ್ತಿಯ ಹಕ್ಕುಗಳನ್ನು ರಕ್ಷಿಸಲು ನೆರವಾದ ಪರಿಸ್ಥಿತಿಯನ್ನು ಸೃಷ್ಟಿಸಲಾಗಿದೆ. ಹಂತ ಹಂತವಾಗಿ ಸರ್ವಾಧಿಕಾರಿ ಪರಿಕಲ್ಪನೆಯು ಕೆಲವು ಸಂವಿಧಾನಗಳಲ್ಲಿ ವೈಯಕ್ತಿಕ ಹಕ್ಕುಗಳನ್ನು ಸಮುದಾಯದ ಒಳಗೆ ಹೊರಗಿನಿಂದ ಆಕ್ರಮಣದ ವಿರುದ್ಧ ಮುಸ್ಲಿಂ ಸಮುದಾಯದ ರಕ್ಷಣೆಯ ಹೊಣೆಗಾರಿಕೆಯ ಸ್ಪಷ್ಟ ವ್ಯಾಖ್ಯಾನವನ್ನು ನೀಡಲಾಗಿದ್ದು, ಪ್ರಜಾಪ್ರಭುತ್ವ ಮತ್ತು ಸಂವಿಧಾನ ಸಂಸ್ಥೆಯು ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಯಾವುದೇ ತೊಂದರೆಯಿಲ್ಲದೆ ನಡೆಯುತ್ತದೆ. ಏಕೆಂದರೆ ಬಹುತೇಕ ರಾಷ್ಟ್ರಗಳಲ್ಲಿ ನೈಸರ್ಗಿಕ ಮೌಲ್ಯಮಾಪನವನ್ನು ಅವರು ಹೊಂದಿಲ್ಲ. ಸುದೀರ್ಘ ಹೋರಾಟದ ನಂತರ ಟರ್ಕಿ ಮತ್ತು ಇರಾನ್‌ಗಳ ಸಂವಿಧಾನಾತ್ಮಕ ಸರ್ಕಾರಗಳನ್ನು ಗಳಿಸಲಾಗಿದೆ. ನಿಜವಾಗಿ ಈ ಹೋರಾಟವು ಮಹತ್ತರವಾಗಿ ಸಮಾಜ ಮತ್ತು ರಾಷ್ಟ್ರವು ಪ್ರಜಾಪ್ರಭುತ್ವವನ್ನಾಗಿಸಿದೆ.

ಪಶ್ಚಿಮ ಏಷ್ಯಾದ ರಾಜಕೀಯದಲ್ಲಿ ಇರುವ ಭ್ರಷ್ಟಾಚಾರ ಮತ್ತು ಮೂಲಭೂತವಾದವನ್ನು ಪುರಾತನ ಇಸ್ಲಾಂಗೆ ಮರಳುವ ಮೂಲಕ ಮಾತ್ರ ತಡೆಯಬಹುದೆಂದು ಕೆಲವು ಇಸ್ಲಾಂ ಸುಧಾರಕರು ಮತ್ತು ಮೂಲಭೂತವಾದಿಗಳು ಒತ್ತಾಯಿಸಿದ್ದಾರೆ. ಇಸ್ಲಾಂ ಧರ್ಮವು ಧಾರ್ಮಿಕ, ನೈತಿಕ, ಸಾಮಾಜಿಕ, ನ್ಯಾಯಿಕ ಮತ್ತು ರಾಜಕೀಯ ಸಂಸ್ಥೆಯ ಪರಿಪೂರ್ಣ ವ್ಯವಸ್ಥೆಯಾಗಿದ್ದು, ರಾಜಕೀಯ ಮತ್ತು ಧಾರ್ಮಿಕ ಚಳುವಳಿ ಸೇರಿದಂತೆ ವಿಶಾಲವಾದ ರೆಕ್ಕೆಯಡಿಯಲ್ಲಿ ತರಲು ಕರೆ ನೀಡಿದೆ. ಇವೆರಡರ ನಡುವೆ ಯಾವುದೇ ಭಿನ್ನತೆಯನ್ನು ಕಾಣಲಾಗಿಲ್ಲ. ಖುರಾನನ್ನು ಪ್ರೀತಿಸುವವರು ಮಹಮದ್ ಮತ್ತು ಮುಸ್ಲಿಂ ಯುವಕರ ಸಂಘಗಳು ಮಧ್ಯ ಏಷ್ಯಾದಲ್ಲಿ ಅನೇಕ ಗುಂಪುಗಳಾಗಿ ಉದ್ಭವಿಸಿವೆ. ಟರ್ಕಿಯಲ್ಲಿ ತಿದ್ಜಾನಿ ಚಳುವಳಿ ಸಹ ಇತ್ತು.

ಇರಾನ್‌ನಲ್ಲಿ ಎರಡು ಗುಂಪುಗಳಿವೆ. ಕಸಾನಿಕ್ಸ್ ಮತ್ತು ಫಿದಾ ಇಯಾನ್-ಇ-ಇಸ್ಲಾಂ. ಇವುಗಳಲ್ಲಿ ಒಂದರ ಪ್ರಕಾರ "ಕುಟುಂಬ ಸಮಾಜದ ಮತ್ತು ರಾಷ್ಟ್ರದ ಜೀವವಿದ್ದಂತೆ, ಒಬ್ಬ ವ್ಯಕ್ತಿಯ ಜೀವನಕ್ಕಾಗಿ ಅಧಿಕಾರವು ಸಂಪೂರ್ಣ ಇಸ್ಲಾಂಗಿರುತ್ತದೆ. ಇದು ಮುಸ್ಲಿಂ ಸೋದರತ್ವದ ಪ್ರಗತಿಯೆಡೆಗೆ ಅತ್ಯುನ್ನತ ಗುರಿಯಾಗಿದೆ.

ಇವುಗಳ ವಿರುದ್ಧವಾಗಿ ನಾವು ಮಾರ್ಕ್ಸ್‌ವಾದಿ ರಾಜಕೀಯ ಮತ್ತು ಸಾಮಾಜಿಕ ಆರ್ಥಿಕ ಪರಿಕಲ್ಪನೆಯನ್ನು ಹೊಂದಿದ್ದೇವೆ. ಮಾರ್ಕ್ಸ್‌ವಾದಿಗಳು ಮಧ್ಯ ಏಷ್ಯಾದ ಭ್ರಷ್ಟ ಆಡಳಿತಗಾರರ ಮತ್ತು ಆರ್ಥಿಕ ಮತ್ತು ಸಾಮಾಜಿಕ ಕ್ರಾಂತಿಯ ಚಾಲನೆಗೆ

ಮಾರ್ಕ್ಸ್‌ವಾದ ಒಂದೇ ಪೂರಕವೆಂದು ಅಭಿಪ್ರಾಯ ಹೊಂದಿದ್ದಾರೆ. ಹೌರಾನಿಯವರ ಪ್ರಕಾರ "ಪಿತ್ರಾರ್ಜಿತ ಧರ್ಮದಿಂದ ಯಾರು ಹಿಡಿತವನ್ನು ಕಳೆದುಕೊಂಡಿದ್ದಾರೋ ಅವರು ಕಮ್ಯುನಿಸಂ ಅನ್ನು ಪ್ರಚಾರ ಮಾಡಬಹುದೆಂದು ಹೇಳಿದ್ದಾರೆ. ಪ್ರೋ. ಆರ್ನಾಲ್ಡ್ ಟಾಯ್ನ್‌ಬಿರವರು ಕಮ್ಯುನಿಸಂ ಅನ್ನು ಪುರಾತನ ಇಸ್ಲಾಂನೊಂದಿಗೆ ಹೋಲಿಸಿ ಇಸ್ಲಾಂ ಒಂದು ಜ್ಯೋತಿಷ್ಯದಂತೆ ಬದಲಾವಣೆಯಾಗಿದ್ದು, ಸಮಕಾಲೀನ ಸಾಂಪ್ರದಾಯಿಕ ಸಮಾಜದ ಹುಳುಕುಗಳನ್ನು ಸೇರಿಸಲು ಗುರಿಹೊಂದಿದೆ ಎಂದಿದ್ದಾರೆ."

ಕಮ್ಯುನಿಸಂ ತನ್ನ ತೀವ್ರ ಪಾಶ್ಚಿಮಾತ್ಯ ವಿರೋಧಿ ಭಾವನೆಯಿಂದ ತನ್ನ ಶಕ್ತಿಯುತ ಮೊರೆಯನ್ನು ಮಾಡಿದ್ದು, ವಸಾಹತುಶಾಹಿ, ಜನಾಂಗ ಮತ್ತು ವರ್ಣಭೇದದ ವಿರುದ್ಧ ತನ್ನ ವಿರೋಧವನ್ನು ಹೊಂದಿದೆ.

ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾತರು

ಒಂದು ರಾಷ್ಟ್ರದ ಪರಿಕಲ್ಪನೆಯು ಒಂದೇ ಭಾಷೆ, ಸಂಸ್ಕೃತಿ ಹಂಚಿಕೊಂಡಿರುವ ನಾಗರಿಕರನ್ನು ಒಳಗೊಂಡ ರಾಷ್ಟ್ರ ಹಾಗೂ ನಂಬಿಕೆಯುಳ್ಳ ಸಮುದಾಯವು. ಕ್ರಿಶ್ಚಿಯನ್ನರಲ್ಲಿ ಅಥವಾ ಯಹೂದಿಗಳಲ್ಲಾಗಲಿ ಮುಸ್ಲಿಮೇತರ ಗುಂಪುಗಳಿಂದ ರಕ್ಷಿತಗೊಂಡ ಸಾರ್ವಜನಿಕ ಜೀವನದ ಎಲ್ಲಾ ರಂಗಗಳಲ್ಲಿ ಅತ್ಯುನ್ನತ ಸ್ಥಾನಗಳನ್ನು ಹಿಡಿದುಕೊಂಡಿರುವುದು ಆಯ್ಕೆಯಾದ ಬಹುಸಂಖ್ಯಾತರಲ್ಲಿ 'ಸಂಪ್ರದಾಯಸ್ಥ' ಮುಸ್ಲಿಂರಿಂದ ಬಹಳಷ್ಟು ವಿಭಿನ್ನವಾಗಿ ಐತಿಹಾಸಿಕ ಸಂಪ್ರದಾಯಗಳಿಂದ ಕೂಡಿದೆ.

ಪ್ರತಿಯೊಂದು ಮುಸ್ಲಿಮೇತರರು ಹೆಚ್ಚು ಕಡಿಮೆ ಸ್ವಯಂ-ಗುರುತಿನ ಕಲೀಫನಿಗೆ ಹೊಣೆಗಾರನಾದ ಒಬ್ಬನೇ ಧಾರ್ಮಿಕ ಗುರುವಿನ ನಾಯಕತ್ವದಡಿ ಸಂಘಟಿತರಾಗಿದ್ದವರು ಮುಸ್ಲಿಮೇತರರಿಗಾಗಿ ಮದುವೆ, ವಿಚ್ಛೇದನೆ, ಪೋಷಕತ್ವ, ಉತ್ತರದಾಯಿತ್ವ ಮತ್ತು ಶಿಕ್ಷೆಗಳು ಎಲ್ಲಾ ವೈಯಕ್ತಿಕ ಸ್ಥಾನ-ಮಾನಗಳನ್ನು ಸಮುದಾಯ ಪಂಚಾಯಿತಿಗಳು ನಿರ್ಧರಿಸಲ್ಪಡುತ್ತವೆ. ಈ ಎಲ್ಲಾ ತೀರ್ಮಾನಗಳು ನಾಗರಿಕ ಸಮಿತಿಯಿಂದ ಕಾರ್ಯನಿರ್ವಹಿಸಲ್ಪಡುತ್ತವೆ. ಧಾರ್ಮಿಕ ದತ್ತಿಗಳ ಆಡಳಿತ, ಚರ್ಚ್ ಆಸ್ತಿಯ ನಿಯಂತ್ರಣ, ಸಮುದಾಯ ಶಾಲೆಗಳ ರಕ್ಷಣೆ ಹಾಗೂ ಎಲರ್ಜಿಯ ಮೇಲ್ವಿಚಾರಣೆಯಂತಹ ಎಲ್ಲಾ ದೈವ ವಿಚಾರಗಳಿಗೂ ಸಮುದಾಯ ಕೌನ್ಸಿಲ್‌ಗಳು ಹೊಣೆಯಾಗಿರುತ್ತವೆ. ಕ್ರಿಶ್ಚಿಯನ್ನರು ಮತ್ತು ಯಹೂದಿಗಳು ಒಬ್ಬ ವ್ಯಕ್ತಿಯ ರಕ್ಷಣೆಯ ಕಲ್ಪನೆಯನ್ನು ಬಹಳ ಪುರಾತನ ಇಸ್ಲಾಂ ಧರ್ಮದಲ್ಲಿ ನೀಡಲಾದ ಹಾಗೂ

ಸಂಪ್ರದಾಯಗಳಲ್ಲಿ ಒಳಗೊಂಡಿರುವ ನಿರ್ದಿಷ್ಟವಾಗಿ ಸ್ಪಷ್ಟಪಡಿಸಲಾದ ಹಕ್ಕುಗಳೊಡನೆ ಹೋಲಿಸಲಾಗುತ್ತದೆ.

ಅಲ್ಪಸಂಖ್ಯಾತರ ರಕ್ಷಣೆಯ ಸ್ಪಷ್ಟನೆಗಾಗಿ ೧೯ನೇ ಶತಮಾನದಲ್ಲಿ ಕೆಲವು ನಿರ್ಧಿಷ್ಟ ಒಪ್ಪಂದಗಳು ಮತ್ತು ಷರತ್ತುಗಳು ಕೂಡ ಆಗಿವೆ. ಅವುಗಳೆಂದರೆ: ೧೮೩೯ರ ಗುಲ್ಹಾಯಾಸಿ ತೀರ್ಮಾನ, ೧೯೫೬ರ ಹತ್ತಿ ಹಿಮಾಯನ್ ಹಾಗೂ ೧೮೭೬ರ ಸಂವಿಧಾನ.

ಮಧ್ಯ ಏಷ್ಯಾದ ಮುಸ್ಲಿಮೇತರ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನಗಳ ಮೇಲೆ ರಾಷ್ಟ್ರೀಯತೆಯ ಪ್ರಭಾವವು ಪ್ರಜಾಪ್ರಭುತ್ವ ಸಿದ್ಧಾಂತಗಳ ಮೇಲೆ ಕಂಡು ಬಂದಿವೆಯೋ ಅಥವಾ ಧಾರ್ಮಿಕ ಸಿದ್ಧಾಂತಗಳ ಜನಾಂಗೀಯ ಅಥವಾ ಸಾಂಸ್ಕೃತಿಕ ಏಕರೂಪತೆಗಳ ಮೇಲೆ ಅವಲಂಬಿತವಾಗಿವೆಯೋ ಎಂಬುದನ್ನು ಕಂಡುಕೊಳ್ಳಲಾಗಿದೆ.

ಆಧಾರ ಗ್ರಂಥಗಳು

1. A.J. Arbery; Religion in the Middle East - Three Religion in Concord and conflict, Vol-I, Judaism and Christianity, Cambridge University Press, Britain, 1969.
2. A.J. Arbery; Religion in the Middle East - Three Religion in Concord and conflict, Vol.II, Islam, Cambridge University Press, Britain, 1969.
3. Stanford. J. Shaw, International Journal of Middle East Studies, Vol-16, Great Britain, 1975.

೧೦. ಬದ್ಧತೆಯ ನಾಯಕ : ಬಿ. ಬಸವಲಿಂಗಪ್ಪ

-ಎಸ್. ನಾಗರಾಜು

ಕರ್ನಾಟಕದ ರಾಜಕಾರಣದಲ್ಲಿ ಬಿ. ಬಸವಲಿಂಗಪ್ಪ ಅವರು ವಿಭಿನ್ನ ಹಾಗೂ ವಿಶಿಷ್ಟ ಪ್ರಾಮುಖ್ಯತೆ ಪಡೆದಿದ್ದಾರೆ. ಇವರ ಕಾಳಜಿ, ದಿಟ್ಟತನ, ಧೀರ ನಿಲುವು ಇಂದಿಗೂ ಪ್ರಸ್ತುತ. ರಾಜಕೀಯ ಬದುಕಿನ ಸಂದರ್ಭದಲ್ಲಿ ಇವರು ಕಾಂಗ್ರೆಸ್‌ನಲ್ಲಿದ್ದರೂ ಅಂಬೇಡ್ಕರ್ ಅವರ ಚಿಂತನೆಗಳ ದಟ್ಟ ಪ್ರಭಾವ ಅವರು ಸದಾ ಎಚ್ಚರಿಕೆಯಿಂದ ಇರಲು ಕಾರಣವಾಗಿದೆ. ಈ ಕಾರಣದಿಂದಲೇ ದಲಿತ ವಿರೋಧಿ ನೀತಿ ಪರವಾಗಿ ಎಂದಿಗೂ ರಾಜಿಮಾಡಿಕೊಳ್ಳದ ಗುಣವನ್ನು ಬೆಳೆಸಿಕೊಳ್ಳಲು ಸಾಧ್ಯವಾಗಿಸಿದೆ. ಬಸವಲಿಂಗಪ್ಪ ಅವರ ಸಾಮಾಜಿಕ ಬದ್ಧತೆಗೆ ಅಂಬೇಡ್ಕರ್ ಅವರು ಮಾತ್ರವಲ್ಲದೆ ಬುದ್ಧ ಮತ್ತು ಬಸವಣ್ಣ ಅವರ ಬದುಕು ಹಾಗೂ ಸಮಾಜವಾದಿ ಚಿಂತನೆಗಳೂ ಮುಖ್ಯ ಕಾರಣ.

ಜನಪರವಾದ ಚಳುವಳಿಯನ್ನು ಬಸವಲಿಂಗಪ್ಪ ಅವರು ಮಾಡುವುದರ ಮೂಲಕವೇ ಒಂದು ಹೊಸ ಸಮಾಜವನ್ನು ನಿರ್ಮಾಣ ಮಾಡಲಿಕ್ಕೆ ಪ್ರಯತ್ನಪಟ್ಟರು. ಜಾತಿವಾದಿಗಳ, ಕೋಮುವಾದಿಗಳ ಮತ್ತು ಬಂಡವಾಳಶಾಹಿಗಳ ಹುನ್ನಾರವನ್ನು ಪ್ರಗತಿಪರ ಚಳುವಳಿಗಳು ವಿಫಲಗೊಳಿಸಬೇಕು ಎಂದು ಕರೆಕೊಟ್ಟರು. ಇವರು ರಾಜಕೀಯಕ್ಕೆ ಪ್ರವೇಶಿಸುವುದಕ್ಕಿಂತ ಹಿಂದೆ ಕರ್ನಾಟಕದಲ್ಲಿ ದಲಿತ ಜನಾಂಗದ ನಾಯಕತ್ವ ಪರಿಪೂರ್ಣತೆಯನ್ನು ಕಂಡಿರಲಿಲ್ಲ. ಇವರು ಅರ್ಥಪೂರ್ಣವಾದ ಹೋರಾಟವನ್ನು ಪ್ರಾರಂಭಿಸಿ, ಸಮಾಜ ಸುಧಾರಕರಾಗಿ, ದೀನ-ದಲಿತ-ಹಿಂದುಳಿದ ಹಾಗೂ ತುಳಿತಕ್ಕೊಳಗಾದ ಜನಾಂಗಗಳ ಚೈತನ್ಯದ ಚಿಲುಮೆಯಾಗಿ, ಮೇಲ್ವರ್ಗದ ಜಾತಿ ರಾಜಕಾರಣದ ನಡುವೆಯು ಶೋಷಿತರ ಧ್ವನಿಯಾಗಿ, ರಾಜಕೀಯದಲ್ಲಿ

ಹೊರಹೊಮ್ಮಿದರು. ತಮ್ಮ ಇಡೀ ರಾಜಕೀಯ ಜೀವನದಲ್ಲಿ ದಲಿತರಿಗೆ ಆತ್ಮವಿಶ್ವಾಸವನ್ನು ಮೂಡಿಸಿದ ಅವರದು ಬಹುಮುಖೀ ವ್ಯಕ್ತಿತ್ವ

೧. ರಾಜಕಾರಣಕ್ಕೆ ಪ್ರವೇಶ

ಅಂದಿನ ಚಿತ್ರದುರ್ಗ ಜಿಲ್ಲೆ, ಇಂದಿನ ದಾವಣಗೆರೆ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಹರಿಹರದಲ್ಲಿ ಜವಳಿ ಬಸಪ್ಪ ಮತ್ತು ಸಿದ್ಧಲಿಂಗಮ್ಮ ದಂಪತಿಗಳಿಗೆ ಮೊದಲ ಮಗ ಬಿ. ಬಸವಲಿಂಗಪ್ಪ ಅವರು ದಿನಾಂಕ ೨೧-೦೪-೧೯೨೪ರಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಹರಿಹರದಲ್ಲೂ, ಪ್ರೌಢ ಶಿಕ್ಷಣವನ್ನು ಬೆಂಗಳೂರಿನಲ್ಲಿ ಪೂರೈಸಿ, ಮುಂದಿನ ಬಿ.ಎ. ಪದವಿ ಶಿಕ್ಷಣವನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಹಾಗೂ ಕಾನೂನು ಶಿಕ್ಷಣವನ್ನು ಬೆಳಗಾವಿಯ ರಾಜ ಲಕ್ಷ್ಮಣರಾವ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ನಂತರ ಬೆಂಗಳೂರಿನ ಹೈಕೋರ್ಟಿನಲ್ಲಿ ವಕೀಲ ವೃತ್ತಿ ಆರಂಭಿಸಿದರು. ಸಾರ್ವಜನಿಕ ಸೇವಾ ಮನೋಭಾವವಿದ್ದುದರಿಂದ "೧೯೪೯ರಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿ ರಾಜಕಾರಣಿಯಾಗಿ ಹೊರಹೊಮ್ಮಿದರು. ೧೯೫೦ರಲ್ಲಿ ಬೆಂಗಳೂರು ನಗರಸಭೆಗೆ ಅವಿರೋಧವಾಗಿ ಟೌನ್‌ಹಾಲ್ ವಿಭಾಗದಿಂದ ಸದಸ್ಯರಾಗಿ ಆಯ್ಕೆಯಾದರು. ಕರ್ನಾಟಕ ಏಕೀಕರಣ ಚಳುವಳಿಯ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ೧೯೫೬ರಲ್ಲಿ ಕರ್ನಾಟಕ ರಾಜ್ಯ ರಚನೆಯಾಗುವ ತನಕ ಈ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಚೆಲುವ ಕನ್ನಡ ನಾಡಿನ ಉದಯಕ್ಕಾಗಿ ದುಡಿದಿದ್ದಾರೆ".[೧] ೧೯೫೭ರಲ್ಲಿ ಜರುಗಿದ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿಯಿಂದ ವಿಧಾನ ಸಭೆ ಪ್ರವೇಶಿಸಿದರು.

ವಿದ್ಯಾಭ್ಯಾಸ ಮತ್ತು ರಾಜಕೀಯ ಭವಿಷ್ಯವನ್ನು ನಿರ್ಮಾಣ ಮಾಡಿದವರಲ್ಲಿ ಬಸವಲಿಂಗಪ್ಪ ಅವರ ಚಿಕ್ಕಪ್ಪನವರಾದ ಕೊಟ್ಟೂರು ಶ್ರೀ ಹರಿಹರಪ್ಪ ಅವರ ಪಾತ್ರ ಬಹುಮುಖ್ಯವಾಗಿದೆ – ಹರಿಹರಪ್ಪ ಅವರ ಪುತ್ರರಾದ ಶ್ರೀ ಕೆ.ಹೆಚ್. ರಂಗನಾಥ್ ಅವರೂ ಕೂಡ ರಾಜ್ಯದ ಹಿರಿಯ ರಾಜಕೀಯ ಮುತ್ಸದ್ಧಿ – ಹರಿಹರಪ್ಪ ಅವರೇ ಸ್ವತಃ ಅಂಬೇಡ್ಕರ್, ಅವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಕಾರಣ ತಮ್ಮ ಮಕ್ಕಳನ್ನು ಶೈಕ್ಷಣಿಕವಾಗಿ ಬೆಳೆಸಿ, ರಾಜಕೀಯವಾಗಿಯೂ ದಿಟ್ಟ ನಿಲುವುಗಳನ್ನು

---

೧. ಪ್ರೊ. ಶಿವರುದ್ರ ಕಲ್ಲೋಳಿಕರ (ಸಂ) (೨೦೦೨) ಸ್ವಾಭಿಮಾನ ಶಿಲ್ಪಿ, ಬಿ. ಬಸವಲಿಂಗಪ್ಪನವರ ಮೂರ್ತಿ ಪ್ರತಿಷ್ಠಾನ ಸಮಿತಿ, ಹುಬ್ಬಳ್ಳಿ ಧಾರವಾಡ, ಮಹಾನಗರ ಪಾಲಿಕೆ, ಹುಬ್ಬಳ್ಳಿ – ಪುಟ-೧

ತೆಗೆದುಕೊಂಡು ಹಾಗೂ ರಾಜ್ಯ ರಾಜಕಾರಣದಲ್ಲಿ ಅವರು ಬದ್ಧತೆಯ ವ್ಯಕ್ತಿಗಳಾಗಿ ಹೊರಹೊಮ್ಮಲು ಕಾರಣೀಭೂತರಾದರು.

೨. ದಕ್ಷ ಆಡಳಿತಗಾರ

೧೯೫೮ರಲ್ಲಿ ಬಿ.ಡಿ. ಜತ್ತಿ ಅವರ ಮಂತ್ರಿಮಂಡಲದಲ್ಲಿ ಉಪ ಗೃಹಮಂತ್ರಿಯಾಗಿ ನೇಮಕಗೊಂಡಾಗ ರಾಜ್ಯದಾದ್ಯಂತ ಸಂಚರಿಸಿ ದಲಿತರ, ಮಹಿಳೆಯರ ಮೇಲಾಗುವ ದೌರ್ಜನ್ಯವನ್ನು ಮನಗಂಡರು. ಅಲ್ಲದೆ ಮೇಲ್ಜಾತಿಯ ದಬ್ಬಾಳಿಕೆ-ದರ್ಪದ ಸ್ವಭಾವವು ಗೃಹ ಇಲಾಖೆಯಲ್ಲಿರುವುದನ್ನೂ ಕಂಡರು. ಆ ಸಂದರ್ಭದಲ್ಲಿ ದೌರ್ಜನ್ಯಕ್ಕೊಳಗಾಗುವ ದೀನ-ದಲಿತರ ಜನಾಂಗ ದೂರು ಕೊಡಲು ಸಹ ಪೊಲೀಸ್ ಠಾಣೆಗಳಿಗೆ ಹೋಗುತ್ತಿರಲಿಲ್ಲ. ಇದನ್ನರಿತ ಬಸವಲಿಂಗಪ್ಪ ಅವರು ಸಮಾಜದ ಶೋಷಿತ ಜನಾಂಗಗಳಿಗೆ ನ್ಯಾಯ ಸಿಗುವಂತಾಗಬೇಕು, ಪೊಲೀಸ್ ಇಲಾಖೆಯಲ್ಲಿ ನಂಬಿಕೆಯಿಡುವಂತಾಗಬೇಕು ಎಂದು ದಲಿತ ವರ್ಗದ ವಿದ್ಯಾವಂತರನ್ನು ಪೊಲೀಸ್ ಇಲಾಖೆಯಲ್ಲಿ ನೇಮಕ ಮಾಡಿಕೊಂಡು ನ್ಯಾಯದ ಭರವಸೆಯನ್ನು ಮೂಡಿಸಿದಂತಹ ಆಡಳಿತಗಾರರಾಗಿದ್ದಾರೆ. ಇವರು ರಾಜ್ಯದಲ್ಲಿ ಪ್ರವಾಸ ಹೊರಟರೆಂದರೆ ಇಡೀ ಪೊಲೀಸ್ ಇಲಾಖೆಯಲ್ಲಿ ವಿದ್ಯುತ್ ಸಂಚಾರಗೊಂಡ ಅನುಭವ, ಧ್ವನಿ ಇಲ್ಲದವರನ್ನು ಶೋಷಿಸುತ್ತಿದ್ದ ಪಾಳೇಗಾರಿಕೆ ಮನೋಭಾವನೆ ಬಸವಲಿಂಗಪ್ಪ ಅವರ ಹೆಸರು ಕೇಳಿಯೇ ಈ ಸಮಾಜದಿಂದ ಓಟಕೀಳುವಂತಾಯಿತು.

೧೯೭೨ರಲ್ಲಿ ದೇವರಾಜು ಅರಸು ಅವರ ಸಚಿವ ಸಂಪುಟದಲ್ಲಿ ಪೌರಾಡಳಿತ ಮತ್ತು ವಸತಿ ಸಚಿವರಾದಾಗ ಆ ಅವಕಾಶ ಮತ್ತು ಅಧಿಕಾರವನ್ನು ಉಪಯೋಗಿಸಿಕೊಂಡು ದಲಿತರು ತಲೆತಲಾಂತರಗಳಿಂದ ಊರವರು ಮಾಡಿದ ಮಲ-ಮೂತ್ರಗಳನ್ನು ತಲೆಯ ಮೇಲೆ ಹೊರುವ ಅಮಾನವೀಯ ಪದ್ಧತಿಯನ್ನು ಇಡೀ ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ ರದ್ದುಗೊಳಿಸಿದರು. "ಈ ಅಮಾನವೀಯ ವ್ಯವಸ್ಥೆಗೆ ಹಿಂದೂ ಮನುಷ್ಯರು ನಾಚದಿರುವುದು ಅವರ ಕ್ರೂರ ಹೃದಯಗಳ ನಗ್ನ ದರ್ಶನವೇ ಆಗಿದೆ. ಸಮಾಜದ ಎಲ್ಲರೂ ಎಲ್ಲಾ ಪ್ರಸಂಗಗಳಲ್ಲಿ ಈ ಕಾರ್ಯ ಮಾಡುತ್ತಿದ್ದರೆ ಏನೂ ಅನ್ನಿಸುತ್ತಿರಲಿಲ್ಲ, ಮತ್ತೊಬ್ಬರ ಮಲ-ಮೂತ್ರಗಳನ್ನು ಒಂದೇ ಒಂದು ಜನಾಂಗ ಕಾಲಾನುಕಾಲದಿಂದ ತಲೆ ಮೇಲೆ ಹೊತ್ತು ಸಾಗಿಸುವಂತದ್ದು ನಾಚಿಕೆಗೇಡಿನ ಪದ್ಧತಿ"[೨] ಎಂಬುದು ಅವರ ಅಭಿಪ್ರಾಯ. ಬಸವಲಿಂಗಪ್ಪ ಅವರು ರದ್ದುಗೊಳಿಸಿದ ಇಪ್ಪತ್ತು ವರ್ಷಗಳ ಬಳಿಕ ಕೇಂದ್ರ ಸರ್ಕಾರ ಕೂಡ ಪಿ.ವಿ.

ನರಸಿಂಹರಾವ್ ಅವರ ಕಾಲದಲ್ಲಿ ಎಂಪ್ಲಾಯ್‌ಮೆಂಟ್ ಆಫ್ ಮ್ಯಾನುಯಲ್ ಸ್ಕೇವೆಂಜಿಂಗ್ ಅಂಡ್ ಕನ್‌ಸ್ಟ್ರಕ್ಷನ್ ಆಫ್ ಡ್ರೈಲ್ಯಾಟ್ರಿನ್ ಪ್ರೊಹಿಬಿಷನ್ ಆಕ್ಟ್ ೧೯೯೩ ಪ್ರಕಾರ ಈ ಪದ್ಧತಿಯನ್ನು ರದ್ದುಮಾಡುವ ಕಾನೂನು ರೂಪಿಸುವ ಮೂಲಕ ಬಸವಲಿಂಗಪ್ಪ ಅವರಂತಹ ದಕ್ಷ ಆಡಳಿತಗಾರರು ಹಾಕಿಕೊಟ್ಟ ಮಾರ್ಗದಲ್ಲಿ ತಾನೂ ಹೆಜ್ಜೆ ಹಾಕಿತು. ಇದು ಬಸವಲಿಂಗಪ್ಪ ಅವರ ಅತ್ಯಂತ ಕ್ರಾಂತಿಕಾರಕ ಸಾಧನೆಯಾಗಿದೆ.

೧೯೭೮ರಲ್ಲಿ ಕಂದಾಯ ಮಂತ್ರಿಗಳಾದ ಅವಧಿಯಲ್ಲಿ ಭೂ ಸುಧಾರಣಾ ಕಾಯ್ದೆಯನ್ನು ಜಾರಿಗೆ ತಂದು 'ಉಳುವವನೇ ಭೂಮಿಯ ಒಡೆಯ'ನಾಗಲು ಕಾರಣರಾದರು. ಹಾಗೆಯೇ ಗೇಣಿದಾರರ ಜೀವನದಲ್ಲಿ ನೆಮ್ಮದಿಯನ್ನು ತಂದಿದ್ದಾರೆ. ಶಾಸನ ಸಭೆಯಲ್ಲಿ ಮಾತನಾಡುತ್ತ ಅವರು – "ಇವತ್ತು ದೇಶ ಉದ್ಧಾರವಾಗಬೇಕಾದರೆ ಯಾವ ಕೊನೆ ಮನುಷ್ಯನಿದ್ದಾನೆ ಅವನಿಗೆ ಆಸ್ತಿ ಇಲ್ಲ. ಉಳುಮೆ ಮಾಡುವುದಕ್ಕೆ ಜಮೀನು ಇಲ್ಲವೋ ಅಂಥವರಿಗೆ ಆಸ್ತಿ, ಜಮೀನು ಕೊಡುವುದಕ್ಕೆ ನಾವು ಪ್ರಯತ್ನಪಟ್ಟಿದ್ದೇ ಆದರೆ ಆಗ ನಿಜವಾಗಿಯೂ ದೇಶ ಮುಂದುವರಿಯುವುದಕ್ಕೆ ಸಾಧ್ಯವಾಗುತ್ತದೆ"[೩] ಎಂದು ತಿಳಿಸಿದರು. ಒಟ್ಟು ೨ ಲಕ್ಷದ ೮೧ ಸಾವಿರದ ೩೨ ಎಕರೆ ೧೨ ಗುಂಟೆ ಬಗರ್ ಪ್ರದೇಶದಲ್ಲಿ ಪರಿಶಿಷ್ಟರಿಗೆ ೫೧.೨೩೭ ಎಕರೆಗಳು ಮಾತ್ರ ದೊರೆತಿದ್ದು ಸುಮಾರು ೨ ಲಕ್ಷದ ೩೦ ಸಾವಿರ ಎಕರೆ ಭೂಮಿ ದಲಿತೇತರರ ಪಾಲಾಗಿದೆ. ಆದರೂ ದಲಿತರ ಆರ್ಥಿಕ ಸಬಲೀಕರಣದ ಹೆಜ್ಜೆಯಲ್ಲಿ ಇದು ಬಸವಲಿಂಗಪ್ಪನವರಂತಹವರಿಂದ ಭೂ ಸ್ವಾಮ್ಯತೆ ಮುರಿಯುವಲ್ಲಿ ಸಾಧ್ಯವಾಯಿತು.

ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಬಗ್ಗೆ ಶಾಸಕಾಂಗದಲ್ಲಿ ಮಾತನಾಡುತ್ತ "ಹೆಣ್ಣು ಮಕ್ಕಳು ಗಂಡಸರ ಗುಲಾಮರಾಗಿದ್ದಾರೆ. ಅವರಿಗೆ ಸ್ವಾತಂತ್ರ್ಯ ಬರಬೇಕಾದರೆ ನಮ್ಮ ಇನ್‌ಹೆರಿಟೆಂಟ್ ಲಾ ಏನು ಇದೆ ಅದನ್ನು ಬದಲಾವಣೆ ಮಾಡಬೇಕು. ಹೆಣ್ಣು ಮಕ್ಕಳಿಗೂ ತಂದೆ ತಾಯಿಯರ ಆಸ್ತಿಯಲ್ಲಿ ಸಮಾನ ಆಸ್ತಿಯ ಹಕ್ಕನ್ನು ಎಲ್ಲಿಯವರೆಗೆ ಕೊಡುವುದಿಲ್ಲವೋ ಅಲ್ಲಿಯವರೆಗೆ ಇವರ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಇಲ್ಲದಿದ್ದರೆ ಅವರು ದೌರಿಯ ಒತ್ತಡಕ್ಕೆ ಸಿಕ್ಕಿ ಕೊಲೆಯಾಗಬೇಕು, ನರಳಬೇಕು"[೪] ಎಂದು ವಾದಿಸಿ ಮಹಿಳಾ ಪರ ರಕ್ಷಣಾ ಕಾನೂನುಗಳನ್ನು ಜಾರಿಗೆ ತರುವಲ್ಲಿ ಶ್ರಮಿಸಿದವರಾಗಿದ್ದಾರೆ. ಈ ಸಮಸ್ಯೆಗೆ ಇತ್ತೀಚಿನ ದಿನದಲ್ಲಿ ಸ್ವಲ್ಪ ಪರಿಹಾರ ಸಿಕ್ಕಿರುವುದನ್ನು ಗಮನಿಸಬಹುದಾಗಿದೆ.

೧೯೯೨ರಲ್ಲಿ ರಾಜೀವ್‌ಗಾಂಧಿ ಜಾರಿಗೆ ತಂದ ೭೩ನೇ ಸಂವಿಧಾನ ತಿದ್ದುಪಡಿಗೆ ಬಸವಲಿಂಗಪ್ಪ ಅವರ ಪ್ರಭಾವವೇ ಕಾರಣ ಎನ್ನಬಹುದು. ಪಂಚಾಯತ್‌ರಾಜ್ ಮಸೂದೆಗೆ ತಿದ್ದುಪಡಿ ತಂದು ಪರಿಶಿಷ್ಟರು, ಮಹಿಳೆಯರು ಹಿಂದುಳಿದ ವರ್ಗದವರು ಪಂಚಾಯಿತಿಯ ಚೇರ್‌ಮನ್‌ರಾಗುವ ಅವಕಾಶಕ್ಕೆ ಮೀಸಲಾತಿಯನ್ನು ಕಲ್ಪಿಸಿ, ಪ್ರಜಾಪ್ರಭುತ್ವದ ತಳಹದಿಯಲ್ಲಿ ರಾಜಕೀಯ ನಾಯಕತ್ವದ ವ್ಯವಸ್ಥೆ ಜಾರಿಮಾಡಿ ಕ್ರಾಂತಿ ಮಾಡಬಯಸಿದರು. "ನಮ್ಮ ಬಸವೇಶ್ವರರು ಹಿಂದೆ ಒಂದು ಅನುಭವ ಮಂಟಪವನ್ನು ಅಸ್ತಿತ್ವಕ್ಕೆ ತಂದಿದ್ದರು. ಆ ಅನುಭವ ಮಂಟಪದಲ್ಲಿ ಈ ಜಾತಿಯನ್ನು ಅರಿತುಕೊಂಡು ಅವರು ಗಣನೆಗೆ ತೆಗೆದುಕೊಂಡು ಎಲ್ಲಾ ಜಾತಿಗೆ ಸೇರಿರತಕ್ಕ ಶರಣರ, ಮಹಿಳೆಯರ ಸಮೂಹವನ್ನು ಅವರು ನಿರ್ಮಾಣ ಮಾಡಿದ್ದರು. ಅಲ್ಲಿ ಎಲ್ಲರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತಿದ್ದರು" ಎಂದು ಪಂಚಾಯತ್ ರಾಜ್ ತಿದ್ದುಪಡಿಯನ್ನು ಬಸವಲಿಂಗಪ್ಪ ಸಮರ್ಥಿಸಿದ್ದಾರೆ.

೧೯೮೮ರಲ್ಲಿ ಪಶು ಸಂಗೋಪನಾ ಮತ್ತು ಅರಣ್ಯ ಸಚಿವರಾಗಿ ನೇಮಕಗೊಂಡ ಸಂದರ್ಭದಲ್ಲಿಯೂ ಆ ಇಲಾಖೆಯಲ್ಲಿ ಗಣನೀಯ ಬದಲಾವಣೆ ತಂದರು. ಅರಣ್ಯ ಇಲಾಖೆಯಲ್ಲಿ ಸಂರಕ್ಷಿತ ಅರಣ್ಯಕ್ಕೆ ವಿಶೇಷ ಕಾಳಜಿವಹಿಸಿ ಅರಣ್ಯ ಸಂಪತ್ತು ವೃದ್ಧಿಗೊಳಿಸಲು ಕಾರಣರಾದರು. ಸಂಶೋಧನೆ ಹೆಸರಿನಲ್ಲಿ ಹುಲಿಗಳನ್ನು ಹಿಂಸಿಸುತ್ತಿದ್ದ ಕ್ರಮವನ್ನು ರದ್ದುಗೊಳಿಸಿದರು. ಅರಣ್ಯ ಭೂಮಿಯನ್ನು ಅನಧಿಕೃತವಾಗಿ ಆಕ್ರಮಣ ಮಾಡಿಕೊಂಡ ಬಲಾಢ್ಯರಿಗೆ ಕಡಿವಾಣ ಹಾಕುವ ಮುಖಾಂತರ ರಾಜ್ಯದ ಸಂಪತ್ತನ್ನು ರಕ್ಷಿಸುವಂತವರಾಗಿದ್ದರು.

೧೯೯೨ರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿ ನೇಮಕವಾದಾಗ ಪರಿಸರವಾದಿಗಳು ಬಸವಲಿಂಗಪ್ಪ ಅವರ ಪರಿಸರ ಕಾಳಜಿಯನ್ನು ಮೆಚ್ಚಿದರು. ದೊಡ್ಡ ದೊಡ್ಡ ಉದ್ದಿಮೆದಾರರು ನಿಸರ್ಗವನ್ನು ಹಾಳುಗೆಡವುತ್ತಿದ್ದ ಕಳ್ಳದಾರಿಗಳನ್ನು ಬಯಲಿಗೆಳೆದು ಅವರಿಗೆ ಎಚ್ಚರಿಕೆಯ ಪತ್ರವನ್ನು ನೀಡಿದ್ದರು. ಇದರಿಂದ ಕುಪಿತಗೊಂಡ ಉದ್ದಿಮೆದಾರರು ಬಸವಲಿಂಗಪ್ಪ ಅವರ ಖಾತೆಯನ್ನು ಬದಲಿಸುವಂತೆ ಮುಖ್ಯಮಂತ್ರಿಯವರಲ್ಲಿ ಒತ್ತಡ ತಂದಿದ್ದುಂಟು, "ನಮ್ಮ ಪಟ್ಟಣಗಳನ್ನು, ಬೀದಿಗಳನ್ನು, ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳದೇ ಹೋದರೆ, ಪರಿಸರವೇ ನಮ್ಮ ವಿರುದ್ಧವಾಗಿ ಸಿಡಿದೆದ್ದಾಗ ನೀವು ನಾವು ಇರಲು ಸಾಧ್ಯವಾಗುವುದಿಲ್ಲ" ಎನ್ನುವ ಅರಿವನ್ನು ಜನತೆಯಲ್ಲಿ ಮೂಡಿಸುತ್ತ, ಪರಿಸರ ಮಾಲಿನ್ಯ ಕಾಪಾಡಲು ಬಸವಲಿಂಗಪ್ಪ ಅವರುಹೊಸ ಪ್ರಯೋಗ ನಡೆಸುವ ಮೂಲಕ ಪರಿಸರ ಖಾತೆಗೆ ಪ್ರಾಮುಖ್ಯತೆಯನ್ನು

ತಂದುಕೊಟ್ಟು ವಿಶ್ವ ಸಮುದಾಯದ ಕಡೆಗೆ ಎಲ್ಲರ ಗಮನಹರಿಸಿದವರಾಗಿದ್ದಾರೆ. ಎಲ್ಲಾ ಖಾತೆಗಳಲ್ಲೂ ತಮ್ಮದೇ ಆದ ದಕ್ಷತೆ ಮೂಲಕ-ವಿಶಿಷ್ಟ ಛಾಪು ಮೂಡಿಸಿದರು.

೩. ದಲಿತೋದ್ಧಾರದ ಕಾತರ

ಜಗತ್ತಿನಲ್ಲಿ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತವು ಹಲವಾರು ಜಾತಿ, ಬುಡಕಟ್ಟು, ಸಂಸ್ಕೃತಿ, ಧರ್ಮ ಹಾಗೂ ಭಾಷೆಯ ಜನರನ್ನು ಒಳಗೊಂಡಿರುವುದನ್ನು ಕಾಣಬಹುದಾಗಿದ್ದು, ಇಲ್ಲಿನ ರಾಜಕೀಯ ವ್ಯವಸ್ಥೆಯನ್ನು ಗಮನಿಸಿದಾಗ ಪ್ರಬಲ ಜಾತಿಗಳ ಹಿಡಿತದ ರಾಜಕಾರಣವೇ ಆಳವಾಗಿ ಬೇರೂರಿರುವುದು ಗೋಚರವಾಗುತ್ತದೆ. ಶತಮಾನಗಳಿಂದ ಶೋಷಣೆಗೆ ಒಳಗಾದ ನಿಮ್ನವರ್ಗದ ಜನ ರಾಜಕೀಯಕ್ಕೆ ಪ್ರವೇಶಿಸುವುದು ಮತ್ತು ರಾಜಕಾರಣದಲ್ಲಿ ಸಕ್ರಿಯ ಪಾತ್ರವಹಿಸುವುದು ಸುಲಭವಾದ ಕೆಲಸವಾಗಿರಲಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ದಲಿತ ಕುಟುಂಬದಲ್ಲಿ ಜನಿಸಿ ಬಸವಲಿಂಗಪ್ಪ ಅವರು ಮಾಡಿದ ದಲಿತೋದ್ಧಾರದ ಸೇವೆಗಳು ಅವಿಸ್ಮರಣೀಯವಾಗಿವೆ.

ಬಸವಲಿಂಗಪ್ಪ ಅವರ ಕಾರ್ಯವೈಖರಿಯನ್ನು ಕಂಡು ಮನುವಾದಿಗಳು ೧೯೬೨ರ ವಿಧಾನಸಭಾ ಚುನಾವಣೆಯಲ್ಲಿ ಉತ್ತರಹಳ್ಳಿ ಕ್ಷೇತ್ರದಿಂದ ಸೋಲಿಸಿದರು. ಆದರೆ ಬಸವಲಿಂಗಪ್ಪನವರು ಅಧಿಕಾರವೊಂದನ್ನೇ ಗುರಿಯಾಗಿರಿಸಿಕೊಂಡಿರದೆ ದಲಿತರ ಜಾಗೃತಿಗಾಗಿ ರಾಜ್ಯದಾದ್ಯಂತ ಸುತ್ತಿ ಸಭೆ ಸಮಾರಂಭಗಳ ಮೂಲಕ ದಲಿತರ ಸ್ವಾಭಿಮಾನದ ಜಾಗೃತಿಗೆ ಮುಂದಾದರು. ಹಾಗೆಯೇ ೧೯೫೦ರಲ್ಲಿ ಡಾ. ಅಂಬೇಡ್ಕರ್ ಅವರು ದಲಿತರ ಹಿಂದುಳಿದವರ ಏಳಿಗೆಗಾಗಿ ಅವರ ಆತ್ಮೋನ್ನತಿಗಾಗಿ ಶಿಕ್ಷಣದ ಅವಶ್ಯಕತೆಯನ್ನು ಮನಗಂಡು ಮುಂಬಯಿಯಲ್ಲಿ ಪ್ರಾರಂಭಿಸಿದ್ದ ಪೀಪಲ್ಸ್ ಎಜುಕೇಷನ್ ಸೊಸೈಟಿಯತ್ತಲೂ ಗಮನಹರಿಸಿ ಈ ಸೊಸೈಟಿಯ ಟ್ರಸ್ಟಿ ಹಾಗೂ ಸದಸ್ಯರಾಗಿ, ಮುಂದೆ ಈ ಸಂಸ್ಥೆಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು. ಹಾಗೆಯೇ ಧಾರವಾಡದ ವಸತಿನಿಲಯದ ಅಭಿವೃದ್ಧಿಗೆ ಶ್ರಮಿಸಿದರು. ಶಿಕ್ಷಣ ಪ್ರಚಾರಕ್ಕಾಗಿ ಶಿವಮೊಗ್ಗದ ರಾಗಿಗುಡ್ಡದಲ್ಲಿ ೧೭೦ ಎಕರೆ ಜಮೀನು ಪಡೆದು ದಲಿತ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಝಾನ್ಸಿರಾಣಿ ಲಕ್ಷ್ಮೀಬಾಯಿ ವಿದ್ಯಾರ್ಥಿನಿಯರ ವಸತಿ ಶಾಲೆಯನ್ನು ಪ್ರಾರಂಭಿಸಿದರು. ನೌಕರಸ್ಥ ಮಹಿಳೆಯರಿಗಾಗಿ ವಸತಿ ಗೃಹ ಪ್ರಾರಂಭಿಸಿದರು. ಹೀಗೆ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ದಲಿತರು ಶಿಕ್ಷಣ ಪಡೆಯುವಂತೆ ಕ್ರಾಂತಿ ಮಾಡಬಯಸಿದರು. ಇವರ ಅವಧಿಯಲ್ಲಿ ಅನೇಕ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳು ಅಸ್ತಿತ್ವಕ್ಕೆ ಬಂದವು.

ವಸತಿ ಸಚಿವರಾಗಿ ಗ್ರಾಮೀಣ ಪ್ರದೇಶದಲ್ಲಿನ ನಿವೇಶನ ಸಮಸ್ಯೆಯನ್ನರಿತು ೨,೫೦,೦೦೦ ನಿವೇಶನಗಳನ್ನು ಇವರ ಅಧಿಕಾರದ ಅವಧಿಯಲ್ಲಿ ಹಂಚಲಾಯಿತು. ಗೃಹಮಂಡಳಿ ವತಿಯಿಂದ ಮನೆಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ವರ್ಗಗಳಿಗೆ ಮೀಸಲಿಡುವುದಕ್ಕೆ ಕಾರಣಕರ್ತರಾದರು. ಗ್ರಾಮಾಂತರ ಪ್ರದೇಶದಲ್ಲಿ ಜನತಾಗೃಹ ಯೋಜನೆ ಆರಂಭವಾಯಿತು. ಮನೆ ನಿರ್ಮಿಸಲು ಅಸಮರ್ಥರಾದ, ಸಮಾಜದ ವಸತಿ ರಹಿತ ದುರ್ಬಲ ವರ್ಗದವರಿಗಾಗಿ ಸ್ವಾಯತ್ತ ಮಂಡಳಿಗಳಲ್ಲಿ 'ಸೋಷಿಯಲ್ ರೆಸ್ಪಾನ್ಸಿಬಿಲಿಟಿ ಲೆವಿ' ಎಂಬ ಒಂದು ನಿಧಿಯನ್ನು ಪ್ರಾರಂಭಿಸಿದರು. ಹೊಸದಾಗಿ ರಚನೆಗೊಂಡ ಬಡಾವಣೆಗಳಲ್ಲಿ ಶೇ. ೧೮ರಷ್ಟು ನಿವೇಶನಗಳನ್ನು ದಲಿತರಿಗಾಗಿ ಮೀಸಲಿಟ್ಟರು. ಹೀಗೆ ದಲಿತರಿಗೆ ಸೂರೊಂದನ್ನು ಕಲ್ಪಿಸಲು ಬಸವಲಿಂಗಪ್ಪ ಅವರ ದಲಿತಪರ ಬದ್ಧತೆಯೇ ಕಾರಣವೆನ್ನಬಹುದು. ದೇವದಾಸಿ ಪದ್ಧತಿಯ ಅಮಾನವೀಯ ಮಹಿಳಾ ಶೋಷಣೆಯನ್ನು ಕಟುವಾಗಿ ಅಲ್ಲಗಳೆದು ಇಂತಹ ನೀಚ ಪದ್ಧತಿಯನ್ನು ನಿಷೇಧಿಸಲು ಮತ್ತು ಅದರಿಂದ ನೊಂದವರ ಬದುಕಿಗೆ ಸೂಕ್ತ ಬದಲಾವಣೆಗಳನ್ನು ತರುವಲ್ಲಿ ಮುಂದಾದರು. ಹಾಗೆಯೇ ಕರ್ನಾಟಕ ರಾಜ್ಯ ಸೇವೆಯಲ್ಲಿ ಪರಿಶಿಷ್ಟರ ಮೀಸಲಾತಿಯ ಕಡ್ಡಾಯ, ಬಡ್ತಿ, ನೇಮಕಾತಿಯಲ್ಲಿ ಮೀಸಲು, ರೋಸ್ಟರ್ ಹೀಗೆ ದಲಿತಪರ ನಿಯಮವನ್ನು ಜಾರಿಗೊಳಿಸುವಲ್ಲಿ ಸಾಕಷ್ಟು ಶ್ರಮಿಸಿದವರಾಗಿದ್ದಾರೆ. ಕಂದಾಯ ಸಚಿವರಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರಿಗೆ ಸರ್ಕಾರದಿಂದ ಭೂಮಿಯನ್ನು ಕೊಡಿಸಿ ಅವರು ೧೫ ವರ್ಷದವರೆಗೆ ಪರಭಾರೆ ಮಾಡಬಾರದು ಎಂದು ದಲಿತರಿಗೆ ಎಚ್ಚರಿಕೆಯ ಕಾನೂನನ್ನು ಜಾರಿಗೆ ತಂದರು. ಹೀಗೆ ಬಸವಲಿಂಗಪ್ಪ ಅವರು ತಾವು ವಹಿಸಿಕೊಂಡ ಪ್ರತಿಯೊಂದು ಖಾತೆಯಲ್ಲೂ ಸಹ ದಲಿತರ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಿ ಅತ್ಯಂತ ಕಳಕಳಿಯಿಂದ ದುಡಿದಿದ್ದಾರೆ.

೪. ಬೌದ್ಧ ಧಮ್ಮದ ಒಲವು

ದಲಿತರ ಹೀನಾಯ ಸ್ಥಿತಿಗೆ ಕೇವಲ ಬಡತನ, ಅಜ್ಞಾನಗಳಷ್ಟೇ ಕಾರಣವಲ್ಲ. ತಾವಿರುವ ಹಿಂದೂ ಧರ್ಮದ ವ್ಯವಸ್ಥೆಯೇ ಕಾರಣ. ಹಿಂದೂ ಧರ್ಮ ನಿಂತಿರುವುದು, ಪ್ರಚಾರದಲ್ಲಿರುವುದಕ್ಕೆ ಧರ್ಮ ಗ್ರಂಥಗಳು ಮತ್ತು ದೇವರುಗಳೇ ಕಾರಣವೆಂದು ಶೋಧಿಸಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಯನ್ನು ಬಸವಲಿಂಗಪ್ಪ ಅವರು ಚೆನ್ನಾಗಿ ಗ್ರಹಿಸಿದ್ದರು. ಹಿಂದೂ ಧರ್ಮ ಆಘಾತಕ್ಕೊಳಗಾಗುವಂತೆ–

ತಮಿಳುನಾಡಿನ ತಂದೆ ಪೆರಿಯಾರ್‌ರ 'ಸ್ವಾಭಿಮಾನಿ ಚಳುವಳಿ'ಗೆ ಅತಿಯಾಗಿ ಮಾರುಹೋಗಿ– 'ದೇವರುಗಳನ್ನು ಚರಂಡಿಗೆ ಎಸೆಯಿರಿ' ಎಂದು ಕರೆಕೊಟ್ಟರು. ಶಾಲೆಯೊಂದನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಹಿಂದೂ ಧರ್ಮದ ಸೋಂಕು ತಾಕದಂತೆ ಬೆಳೆಸಬೇಕಾದರೆ ಆ ಶಾಲೆಯನ್ನು ಬೌದ್ಧ ಕೇಂದ್ರವನ್ನಾಗಿ ರೂಪಿಸಬೇಕೆಂಬ ಆಶಯ ಅವರದ್ದಾಗಿತ್ತು. ಅದಕ್ಕಾಗಿ ಈ ಹಿಂದೆ ಅಂದರೆ "೧೯೫೫ರಲ್ಲಿ ಅಂಬೇಡ್ಕರ್ ಅವರಿಗೆ ಬೌದ್ಧ ಕೇಂದ್ರವೊಂದನ್ನು ತೆರೆಯುವ ಸದುದ್ದೇಶದಿಂದ ಮೈಸೂರು ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರು ೫ ಎಕರೆ ಭೂಮಿಯನ್ನು ಬೆಂಗಳೂರಿನ ಪ್ರತಿಷ್ಠಿತ ರಾಜಮಹಲ್ ವಿಲಾಸ್ ಬಡಾವಣೆಯಲ್ಲಿ ನೀಡಿದ್ದರು. ಆದರೆ ಅಂಬೇಡ್ಕರ್ ಅವರ ಮಹಾಪರಿನಿರ್ವಾಣದ ನಂತರ ಆ ನಿವೇಶನ ಅನಾಥವಾಗಿತ್ತು. ಬಸವಲಿಂಗಪ್ಪ ಅವರು ಅದನ್ನು ಅಂಬೇಡ್ಕರ್ ಅವರ ಪೀಪಲ್ಸ್ ಎಜುಕೇಷನ್ ಸೊಸೈಟಿಯ ಸೊತ್ತನ್ನಾಗಿಸಿ ಅಲ್ಲಿ ೧೯೮೪ರಲ್ಲಿ ನಾಗಸೇನಾ ವಿದ್ಯಾಲಯ ಪ್ರಾರಂಭಿಸಿ ಬುದ್ಧಭೂಮಿ ಎಂದು ನಾಮಕರಣ ಮಾಡಿದರು".[೧೦] ಇದಲ್ಲದೆ 'ಕರ್ನಾಟಕ ಬುದ್ಧ ಧಮ್ಮ ಸಮಿತಿ' ಸ್ಥಾಪಿಸಿ ಅದಕ್ಕೆ ಅಧ್ಯಕ್ಷರಾಗಿ ರಾಜ್ಯದೆಲ್ಲೆಡೆ ಪ್ರವಾಸವನ್ನು ಕೈಗೊಂಡು ಬುದ್ಧ ಧಮ್ಮದ ಪ್ರಚಾರಕರಾಗಿ ಅಂಬೇಡ್ಕರ್ ನಂತರ ಇವರು ಪುನರ್ ಸ್ಥಾಪನೆಗೆ ಶ್ರಮಿಸಿದವರಾಗಿದ್ದಾರೆ. ಶಾಂತಿಗಾಗಿ ಅಂತರರಾಷ್ಟ್ರೀಯ ನೊಬೆಲ್ ಪ್ರಶಸ್ತಿ ಪಡೆದ ದಲೈಲಾಮಾ ಅವರನ್ನು ಅಭಿನಂದಿಸುವ ಸಲುವಾಗಿ ೦೨-೦೮-೧೯೯೧ರಂದು ಬೆಂಗಳೂರಿನಲ್ಲಿ ಅದ್ದೂರಿಯಾದ ಕಾರ್ಯಕ್ರಮ ಆಯೋಜಿಸಿ, ವಿದೇಶಿ ಅನುಯಾಯಿಗಳೊಡನೆ ತಮ್ಮ ಬೆಂಬಲಿಗರ ಸಂಬಂಧವನ್ನು ಇನ್ನಷ್ಟು ಬೆಸೆದುಕೊಂಡರು. ೧೯೯೨ರ ಜುಲೈ ೨ರಂದು ಬಿಜಾಪುರದಲ್ಲಿ ಬಸವಲಿಂಗಪ್ಪ ಅವರ ನೇತೃತ್ವದಲ್ಲಿ ನಡೆದ ಬೌದ್ಧ ಧಮ್ಮದ ಬೃಹತ್ ಸಭೆ ಯಶಸ್ವಿಯಾಗಿ ನಡೆಯಿತು. ಅಂದು ಸಾವಿರಾರು ಜನರು ಬೌದ್ಧ ಧಮ್ಮದತ್ತ ನಡೆದರು. ದಲಿತರನ್ನು ಸಂಘಟಿಸುತ್ತ ಅವರ ಬಿಡುಗಡೆಗಾಗಿ ಬೌದ್ಧ ಧಮ್ಮದ ಪ್ರವರ್ತಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಹೀಗೆ ಬದುಕಿನುದ್ದಕ್ಕೂ ನಿರಂತರವಾಗಿ ಜನತೆಯ ಕಲ್ಯಾಣಕ್ಕಾಗಿ ದುಡಿದ ಬಸವಲಿಂಗಪ್ಪ ಅವರು ೨೬-೧೨-೧೯೯೨ ರಂದು ಮೆದುಳು ಒತ್ತಡದಿಂದ ಬೆಂಗಳೂರಿನ ಅವರ ಮನೆಯಲ್ಲಿ ಪರಿನಿರ್ವಾಣ ಹೊಂದಿದರು.

ಪ್ರಸ್ತುತ ರಾಜಕೀಯ ವಿದ್ಯಮಾನಗಳನ್ನು ಗಮನಿಸಿದಾಗ, ಅಧಿಕಾರದ ದುರಾಸೆಗಾಗಿ ಏನೆಲ್ಲಾ ನಾಟಕೀಯ ಬೆಳವಣಿಗೆಗಳು ನಡೆದು, ದಿನಕ್ಕೊಂದು ಸ್ವರೂಪವನ್ನು ಪಡೆದುಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ ರಾಜಕೀಯದ

ಪಾವಿತ್ರ್ಯತೆಯನ್ನು ಎತ್ತಿಹಿಡಿದ ಹಾಗೂ ಪ್ರಜಾಪ್ರಭುತ್ವದ ತತ್ತ್ವಗಳ ಉಳಿವಿಗಾಗಿ ಶ್ರಮಿಸಿದ ಬಸವಲಿಂಗಪ್ಪ ಅವರಂತಹ ಬದ್ಧತೆಯ, ನಿಸ್ವಾರ್ಥದ ರಾಜಕಾರಣಿ ಮತ್ತೆ ಮತ್ತೆ ನೆನಪಾಗುತ್ತಾರೆ. ಇವರಂತಹ ಮೇರು ವ್ಯಕ್ತಿತ್ವಗಳ ನೆನಪು ಮತ್ತು ಚಿಂತನೆಗಳು ಮಾತ್ರ ರಾಜಕಾರಣದ ನಿಜ ತತ್ತ್ವಗಳನ್ನು ಸಾಕ್ಷಾತ್ಕಾರಗೊಳಿಸಲು ಇಂದಿಗೂ ಮಾದರಿಯಾಗಿವೆ.

ಪರಾಮರ್ಶನ ಗ್ರಂಥಗಳು

೧. ಪ್ರೊ. ಶಿವರುದ್ರ ಕಲ್ಲೊಳಿಕರ (ಸಂ), ೨೦೦೨, ಸ್ವಾಭಿಮಾನ ಶಿಲ್ಪಿ, ಬಿ. ಬಸವಲಿಂಗಪ್ಪನವರ ಮೂರ್ತಿ ಪ್ರತಿಷ್ಠಾನ ಸಮಿತಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

೨. ಮುಳ್ಳೂರು ನಾಗರಾಜ್ (೧೯೯೪), ಬದನವಾಳು ದುರಂತ, ಮುಳ್ಳೂರ್ ಪತ್ರಿಕೆ, ಗಂಗಾಧರ ನಿಲಯ, ಗೋಡೌನ್ ಹಿಂಭಾಗ, ಶ್ರೀಕಂಠಪುರಿ ಬಡಾವಣೆ, ನಂಜನಗೂಡು.

೩. ಡಾ. ವಿರೂಪಾಕ್ಷ ಪೂಜಾರಹಳ್ಳಿ (ಸಂ), ೨೦೦೫, ದಲಿತರು ಮತ್ತು ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ

೪. ಡಾ. ಅರ್ಜುನ ಗೊಳಸಂಗಿ (ಸಂ), ೨೦೦೩, ಕನ್ನಡ ದಲಿತ ಸಾಹಿತ್ಯ, ಸಮಾಲೋಕನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫. ಪ್ರೊ. ಸಿ.ಪಿ. ಸಿದ್ಧಾಶ್ರಮ (೨೦೦೭), ದೇವನೂರು ಮಹಾದೇವ ಸಾಹಿತ್ಯದ ಒಳನೋಟ, ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು.

೬. ಪ್ರೊ. ಬಿ. ಕೃಷ್ಣಪ್ಪ (೨೦೦೦), ಪ್ರೊ. ಬಿ. ಕೃಷ್ಣಪ್ಪನವರ ಚಳವಳಿಗಳು ಹಾಗೂ ಬರಹಗಳು, ಪ್ರೊ. ಬಿ. ಕೃಷ್ಣಪ್ಪ (ರಿ) ಬೆಂಗಳೂರು.

೭. ಡಾ. ಎಚ್.ಟಿ. ಪೋತೆ, ಡಾ. ಜಗನ್ನಾಥ್ ಸಿಂಧೆ (೨೦೦೫), ಬಿ. ಶ್ಯಾಮಸುಂದರ, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಗುಲ್ಬರ್ಗಾ.

೮. ಡಾ. ಪಿ. ದೇವರಾಜು (೨೦೦೫), ಸ್ವಾಭಿಮಾನಿ ಪೆರಿಯಾರ್ (ಜೀವನ ಮತ್ತು ಸಂಘರ್ಷ) ಜಸ್ಟೀಸ್ ಪಬ್ಲಿಕೇಷನ್, ಮೈಸೂರು.

೯. ಡಾ. ಪಿ. ಮಹಾದೇವಯ್ಯ (ಸಂ) ೨೦೦೫, ದಲಿತರು ಮತ್ತು ಪರ್ಯಾಯ ರಾಜಕಾರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ

೧೦. ೧೯೫೮ ರಿಂದ ೧೯೯೨ ರವರೆಗೆ ವಿಧಾನಸಭಾ ನಡವಳಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.

೧೧. ಲಕ್ಷ್ಮೀನಾರಾಯಣ ನಾಗವಾರ (ಸಂ) ೨೦೦೦, ಬೂಸಾ ಸಾಹಿತ್ಯದ ಕಾಲು ಶತಮಾನ, ಡಿ.ಎಸ್.ಎಸ್. ಬೆಂಗಳೂರು

೧೨. B. Basavalingappa (1992) Glimpses of the Emotional Thoughts of Bharatharathna Dr. B.R. Ambedkar, B. Basavalingappa, President, Karnataka Buddha Dhamma Samithi, Minister, Government of Karnataka.

೧೧. ಜಲಿಯನ್ ವಾಲಿಬಾಗ್ ಹತ್ಯಾಕಾಂಡ – ಒಂದು ನೆನಪು

–ಡಾ. ಕೆ.ಎಂ. ಮಹದೇವಸ್ವಾಮಿ

ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಕ್ರಿ.ಶ. ೧೯೧೯ರಲ್ಲಿ ನಡೆದ ಜಲಿಯನ್ ವಾಲಿಬಾಗ್‌ನಲ್ಲಿ ನಡೆದ ದುರಂತ ಅತ್ಯಂತ ಪ್ರಮುಖವಾದದ್ದು. ಬ್ರಿಟಿಷರ ದಬ್ಬಾಳಿಕೆ, ಕ್ರೂರ ನೀತಿಯನ್ನು ತಿಳಿಯಲು ಈ ಘಟನೆ ಒಂದು ಉದಾಹರಣೆಯಾಗಿದೆ. ರೌಲತ್ ಶಾಸನದ ವಿರುದ್ಧ ಗಾಂಧೀಜಿಯ ಕರೆಯ ಮೇರೆಗೆ ಏಪ್ರಿಲ್ ೬ ರಂದು ದೇಶಾದ್ಯಂತ ಸತ್ಯಾಗ್ರಹ ಚಳುವಳಿ ಪ್ರಾರಂಭವಾಯಿತು. ಈ ಚಳುವಳಿ ಪಂಜಾಬಿನಲ್ಲೂ ಸಹ ಜರುಗಿತು.

ಪಂಜಾಬಿನ ಲೆಫ್ಟಿನೆಂಟ್ ಗೌರ್ನರ್ ಸರ್ ಮೈಕಲ್ ಓ ಡೈಯರ್ ಸ್ವಾತಂತ್ರ್ಯ ಚಟುವಟಿಕೆಗಳನ್ನು ಹತ್ತಿಕ್ಕಲು ಆಗಾಗಲೇ ದಮನೀಯ ನೀತಿಗಳನ್ನು ಅನುಸರಿಸುತ್ತಿದ್ದನು. ಏಪ್ರಿಲ್ ೭ ರಂದು ಅವನು "ಪ್ರಾಂತ್ಯದಲ್ಲಿ ಶಾಂತಿಯನ್ನು ಕದಡುವ ಯಾವುದೇ ಪ್ರಯತ್ನವನ್ನು ಸರ್ಕಾರವು ಸಹಿಸುವುದಿಲ್ಲ" ಎಂದು ಜನರಿಗೆ ಎಚ್ಚರಿಸಿದ್ದನು. ಇವೆಲ್ಲವು ಬಹುಶಃ ಮುಂದಿನ ದುರಂತಗಳಿಗೆ ದಿಕ್ಸೂಚಿಯಾದವು. ಹರತಾಳ ನಡೆದ ಒಂದು ವಾರದ ನಂತರ ಪಂಜಾಬ್‌ನ ಅಮೃತಸರ ಜಿಲ್ಲೆಯ ಜಲಿಯನ್ ವಾಲಿಬಾಗ್ ಎಂಬಲ್ಲಿ ಜನರಿಗೆ ಸಭೆ ಸೇರಲು ಕರೆ ನೀಡಲಾಗಿತ್ತು. ಇದರ ನಾಯಕತ್ವವನ್ನು ಜನಪ್ರಿಯ ನಾಯಕರಾದ ಡಾ. ಸತ್ಯಪಾಲ್ ಮತ್ತು ಡಾ. ಸೈಪುದ್ದೀನ್ ಕಿಚ್ಲು ವಹಿಸಿದ್ದರು.

೧೯೧೯ ರ ಏಪ್ರಿಲ್ ೧೦ ರಂದು ಇವರಿಬ್ಬರನ್ನು ಬಂಧಿಸಿದ ಸುದ್ದಿಯು ಹರಡಿದಂತೆ ಅಮೃತಸರದ ಜನತೆ ಆಕ್ರೋಶಗೊಂಡರು. ಜೊತೆಗೆ

ಗಾಂಧೀಜಿಯವರನ್ನು ಪಂಜಾಬ್ ಪ್ರಾಂತ್ಯವನ್ನು ಪ್ರವೇಶದಂತೆ ನಿರ್ಬಂಧಿಸಿರುವ ವಿಷಯವು ಹರಡಿದಾಗ ಜನತೆ ಮತ್ತಷ್ಟು ಕೆರಳಿದರು. ತಮ್ಮ ಮುಖಂಡರ ಬಿಡುಗಡೆಗಾಗಿ ಒತ್ತಾಯಿಸಲು ಜನರು ಜಿಲ್ಲಾಧಿಕಾರಿಯ ನಿವಾಸದತ್ತ ಮೆರವಣಿಗೆಯಲ್ಲಿ ಸಾಗಿದರು. ಆದರೆ ಈ ಮೆರವಣಿಗೆಯನ್ನು ನಗರದ ರೈಲ್ವೇ ಲೆವಲ್ ಕ್ರಾಸಿಂಗ್ ಬಳಿ ತಡೆಯಲಾಯಿತು. ಜನರನ್ನು ಚದುರಿಸಲು ಪೊಲೀಸರು ಗೋಲಿಬಾರ್ ಮಾಡಿದಾಗ ಹಲವರು ಕೊಲ್ಲಲ್ಪಟ್ಟರು. ತಾಳ್ಮೆಯನ್ನು ಕಳೆದುಕೊಂಡ ಉದ್ರಿಕ್ತ ಜನರು ಸರ್ಕಾರಿ ಕಚೇರಿಗಳ ಮೇಲೆ ದಾಳಿ ನಡೆಸಿದರು. ಬ್ಯಾಂಕುಗಳು ಮತ್ತು ಅಂಚೆ ಕಚೇರಿಗಳು ಜನರ ಆಕ್ರೋಶಕ್ಕೆ ತುತ್ತಾದವು. ತಂತಿ ಸಂಪರ್ಕ ವ್ಯವಸ್ಥೆಯನ್ನು ನಾಶ ಮಾಡಲಾಯಿತು. ಕೆಲವು ಐರೋಪ್ಯರು ಹಲ್ಲೆಗೊಳಗಾಗಿ ಮರಣ ಹೊಂದಿದರು. ಮಿಸ್ ಶೇರ್ ವುಡ್ ಎಂಬ ಆಂಗ್ಲ ಮಹಿಳೆಯು ಹಲ್ಲೆಗೆ ಒಳಗಾದಳು. ಆದರೆ ಆಕೆಯನ್ನು ಸ್ಥಳೀಯ ಜನರೇ ಉದ್ರಿಕ್ತ ಗುಂಪಿನಿಂದ ರಕ್ಷಿಸಿದರು. ನಗರವನ್ನು ಪ್ರವೇಶಿಸಿದ ಸೈನ್ಯದ ಗೋಲಿಬಾರಿಗೆ ೧೦ ಮಂದಿ ಬಲಿಯಾದರು. ಏಪ್ರಿಲ್ ೧೧ ಸಂಜೆಯ ವೇಳೆಗೆ ನಗರವು ಸೈನ್ಯದ ಹತೋಟಿಗೆ ಬಂದು ಜನರಲ್ ಡೈಯರನಿಗೆ ಸೈನ್ಯದ ನಾಯಕತ್ವವನ್ನು ವಹಿಸಲಾಯಿತು.

ಜನರ ಮೇಲೆ ಸೇಡು ತೀರಿಸಿಕೊಳ್ಳಲು ಪಂಜಾಬ್ ಸರ್ಕಾರವು ಜನರಲ್ ಡೈಯರಿನಿಗೆ ಸಂಪೂರ್ಣ ಅಧಿಕಾರ ನೀಡಿತು. ಆತನಿಗೂ ಇದೇ ಬೇಕಾಗಿತ್ತು ಏಪ್ರಿಲ್ ೧೨ ರಂದು ನಗರದಲ್ಲಿ ಸಾರ್ವಜನಿಕ ಸಭೆಗಳನ್ನು ನಿಷೇಧಿಸಿ ಆದೇಶವನ್ನು ಹೊರಡಿಸಲಾಯಿತು. ಆದರೆ ಈ ನಿಷೇಧಾಜ್ಞೆಯನ್ನು ಉದ್ದೇಶಪೂರ್ವಕವಾಗಿಯೇ ನಗರದ ಕೆಲವೇ ಭಾಗಗಳಲ್ಲಿ ಪ್ರಕಟಿಸಲಾಯಿತು ಹಾಗೂ ಈ ಘೋಷಣೆಯು ಇಂಗ್ಲಿಷ್‌ನಲ್ಲಿದ್ದುದರಿಂದ ಹೆಚ್ಚಿನವರಿಗೆ ಅರ್ಥವಾಗಲಿಲ್ಲ.

ಏಪ್ರಿಲ್ ೧೩ ರಂದು ವೈಶಾಖದಿನ ನಗರದ ಜಲಿಯನ್ ವಾಲಿಬಾಗ್ ಮೈದಾನದಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಸಂಘಟಿಸಲಾಯಿತು. ಈ ಸಭೆಯ ವ್ಯವಸ್ಥಾಪಕರಿಗೆ ನಿಷೇಧಾಜ್ಞೆಯ ವಿಷಯ ತಿಳಿದಿರಲಿಲ್ಲ. ವೈಶಾಖದ ಉತ್ಸವದಲ್ಲಿ ಭಾಗವಹಿಸಲು ಸುತ್ತಮುತ್ತಲಿನ ಗ್ರಾಮಗಳ ಜನರು ಆಗಮಿಸಿದರು. ಈ ಸಭೆಯಲ್ಲಿ ೧೦,೦೦೦ ಮಂದಿ ಭಾಗವಹಿಸಿದ್ದರು. ನಗರದ ಮಧ್ಯಭಾಗದಲ್ಲಿನ ಈ ಮೈದಾನ ಪ್ರವೇಶಕ್ಕೆ ಮೂರು ಕಡೆ ಎತ್ತರವಾದ ಕಟ್ಟಡಗಳಿದ್ದು ಒಂದೇ ಒಂದು ಕಿರಿದಾದ ಪ್ರವೇಶ ದ್ವಾರವಿತ್ತು. ಸಂಜೆ ೪.೩೦ ಕ್ಕೆ ಸಭೆಯನ್ನು ಪ್ರಾರಂಭಿಸಿ ಸ್ಥಳೀಯ ಮುಖಂಡರಾದ ಲಾಲಾ ಹಂಸರಾಜ್ ಮಾತನಾಡುತ್ತಿದ್ದಾಗ ಜನರಲ್ ಡೈಯರ್

೫೦ ಆಂಗ್ಲ ಮತ್ತು ೧೦೦ ಭಾರತೀಯ ಸೈನಿಕರೊಂದಿಗೆ ಆಗಮಿಸಿ ಯಾವ ಮುನ್ಸೂಚನೆಯನ್ನು ಕೊಡದೆ ನಿರಾಯುಧರಾಗಿದ್ದ ಜನರ ಮೇಲೆ ಸುಮಾರು ೧೦೦ ಗಜ ಅಂತರದಿಂದ ೧೦ ನಿಮಿಷಗಳ ಕಾಲ ೧೬೫೦ ಸುತ್ತು ಗುಂಡುಗಳನ್ನು ಹಾರಿಸಿದನು. ಜನರು ಬೋನಿಗೆ ಬಿದ್ದ ಇಲಿಗಳಂತೆ ತತ್ತರಿಸಿದರು. ಇಕ್ಕಟ್ಟಾದ ದಾರಿಗಳಲ್ಲಿ ತಪ್ಪಿಸಿಕೊಳ್ಳುವ ವ್ಯರ್ಥ ಪ್ರಯತ್ನ ಮಾಡಿ ಮರಣ ಹೊಂದಿದ್ದರು. ಎಲ್ಲಿ ಜನಸಂದಣಿ ದಟ್ಟವಾಗಿತ್ತೋ ಅಲ್ಲಿಗೆ ಕೈ ತೋರಿಸಿ ಗುಂಡು ಹಾರಿಸುವಂತೆ ಡೈಯರ್ ಸೂಚಿಸುತ್ತಿದ್ದನು. ೧೦ ನಿಮಿಷಗಳ ನಂತರ ಗುಂಡುಗಳು ಮುಗಿದ ಮೇಲೆ ಬಂದ ದಾರಿಯಲ್ಲೇ ತನ್ನ ಸಿಪಾಯಿಗಳನ್ನು ಮೆರವಣಿಗೆ ಮಾಡಿಸಿಕೊಂಡು ಹೊರಟು ಹೋದನು.

ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ವಿಚಾರಣಾ ಸಮಿತಿಯ ವರದಿಯ ಪ್ರಕಾರ ೧೦೦೦ ಮಂದಿ ಸ್ಥಳದಲ್ಲೇ ಕೊಲ್ಲಲ್ಪಟ್ಟರು ಮತ್ತು ಸುಮಾರು ೨೦೦೦ ಮಂದಿ ತೀವ್ರವಾಗಿ ಗಾಯಗೊಂಡರು. ಆದರೆ ಸರ್ಕಾರವು ತನ್ನ ವರದಿಯಲ್ಲಿ ಗುಂಡಿನ ದಾಳಿಯಲ್ಲಿ ಕೇವಲ ೩೭೯ ಮಂದಿ ಕೊಲ್ಲಲ್ಪಟ್ಟರು ಎಂದು ತಿಳಿಸಿತು. ಡೈಯರನ ಮಾತಿನಲ್ಲೇ ಹೇಳುವುದಾದರೆ ಗುರಿ ಪಸಂದಾಗಿತ್ತು.

ಜನರಲ್ ಡೈಯರ್‌ನ ಕ್ರೌರ್ಯದ ಅಟ್ಟಹಾಸ ಅಲ್ಲಿಗೆ ಮುಗಿಯಲಿಲ್ಲ. ಗಾಯಗೊಂಡವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಕರೆದೊಯ್ಯಲು ಸಾಧ್ಯವಾಗದಂತೆ ಮಾಡಲು ಏಪ್ರಿಲ್ ೧೩ ರಂದು ನಗರದಲ್ಲಿ ಕರ್ಫ್ಯೂ ಜಾರಿಗೊಳಿಸಿದನು. ರಾತ್ರಿ ಎಂಟು ಗಂಟೆಯ ನಂತರ ಬೀದಿಗಳಲ್ಲಿ ತಿರುಗಾಡಿದರೆ ಕಂಡಲ್ಲಿ ಗುಂಡು ಎಂಬ ಶಿಕ್ಷೆಯನ್ನು ಜಾರಿಗೆ ತಂದಿದ್ದರಿಂದ ಗಾಯಗೊಂಡಿದ್ದ ಜನರು ಇಡೀ ರಾತ್ರಿ ಚಿಕಿತ್ಸೆ ಇಲ್ಲದೆ ಅಲ್ಲಿಯೇ ನರಳಬೇಕಾಯಿತು. ಐರೋಪ್ಯ ಮಹಿಳೆ ಹಲ್ಲೆಗೊಳಗಾದ ಬೀದಿಯಲ್ಲಿ ಹೋಗುವ ಪ್ರತಿಯೊಬ್ಬರು ನೆಲದ ಮೇಲೆ ಹೊಟ್ಟೆಯಲ್ಲಿ ತೆವಳಿಕೊಂಡು ಹೋಗುವ ಶಿಕ್ಷೆ ವಿಧಿಸಿದನು.

ಬೇಸಿಗೆಯ ರಾತ್ರಿಯಲ್ಲಿ ಗಾಯಗೊಂಡವರು ನೋವಿನಿಂದ ನರಳುತ್ತಿದ್ದರೆ, ಸತ್ತವರ ಶವಗಳು ಕೊಳೆತು ನಾರುತ್ತಿದ್ದರೆ, ಆ ಭೀಕರ ಅನಾಹುತಕ್ಕೆ ಬಲಿಯಾದವರ ದೇಹದ ಮಾಂಸಗಳನ್ನು ನರಿ ತೋಳಗಳು ಎಳೆದಾಡುತ್ತಿದ್ದರೆ ರಣ ಹದ್ದುಗಳು ಕುಕ್ಕಿ ಕುಕ್ಕಿ ತಿನ್ನುತ್ತಿದ್ದರೆ ಅವರ ಬಂಧುಗಳು ಮನೆಯೊಳಗಿಂದ ಹೊರ ಬರಲಾಗದ ಅಸಹಾಯಕ ಸ್ಥಿತಿಯಲ್ಲಿದ್ದರು. ನಗರದ ಜನತೆಯನ್ನು ಸಂಕಷ್ಟಕ್ಕೀಡುಮಾಡಲು ವಿದ್ಯುಚ್ಛಕ್ತಿ ಮತ್ತು ನೀರಿನ ಪೂರೈಕೆಯನ್ನು ಸ್ಥಗಿತಗೊಳಿಸಿದನು.

ಪಂಜಾಬಿನಲ್ಲಿ ಸೈನಿಕ ನ್ಯಾಯಾಲಯವು ಒಟ್ಟು ೨೯೮ ಮಂದಿಯನ್ನು ವಿಚಾರಣೆಗೆ ಗುರಿಪಡಿಸಿತು. ಅದರಲ್ಲಿ ೫೧ ಮಂದಿಗೆ ಮರಣ ದಂಡನೆ ಶಿಕ್ಷೆ ಮತ್ತು ೪೬ ಮಂದಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿತು. ೧೦ ಮಂದಿಗೆ ೫ ವರ್ಷ ಸೆರೆವಾಸಕ್ಕೆ ಗುರಿಪಡಿಸಲಾಯಿತು. ೧೩ ಮಂದಿಗೆ ೩ ವರ್ಷಗಳ ಸೆರೆವಾಸ ಶಿಕ್ಷೆಯನ್ನು ವಿಧಿಸಲಾಯಿತು. ಈ ವಿಷಯ ತಿಳಿದ ದೇಶಪ್ರೇಮಿಗಳೆಲ್ಲ ಸಹಜವಾಗಿಯೇ ದಿಗ್ಭ್ರಾಂತರಾದರು. ಎಲ್ಲೆಡೆ ಅಶಾಂತಿಯ ಹೊಗೆಯಾಡಲಾರಂಭಿಸಿತು. ಈ ದುರಂತವನ್ನು ಪ್ರತಿಭಟಿಸಿ ರವೀಂದ್ರನಾಥ ಠಾಗೋರರು ಸರ್ಕಾರವು ತಮಗೆ ನೀಡಿದ್ದ ನೈಟ್ ಹುಡ್ ಪದವಿಯನ್ನು ಹಿಂತಿರುಗಿಸಿದರು. ಗಾಂಧೀಜಿಯವರು ತಮಗೆ ನೀಡಿದ್ದ ಕೈಸರ್-ಇ-ಹಿಂದ್ ಪದವಿಯನ್ನು ತಿರಸ್ಕರಿಸಿದರು. ರವೀಂದ್ರನಾಥ ಠಾಗೂರ್, ಗಾಂಧೀಜಿ, ನೆಹರೂ ಆಂಡ್ರೂಸ್ ಅಮೃತಸರಕ್ಕೆ ಭೇಟಿ ಕೊಟ್ಟರು. ಮಹದೇವ ದೇಸಾಯಿಯವರು ಅಲ್ಲಿಗೆ ಭೇಟಿ ಕೊಟ್ಟ ನಂತರ "ಅದೊಂದು ಕಗ್ಗೊಲೆ ಪೈಶಾಚಿಕವಾದ ಕೊಲೆಗಡುಕುತನ" ಎಂದು ಬಣ್ಣಿಸಿದರು.

ಜಲಿಯನ್ ವಾಲಿಬಾಗ್ ದುರಂತಕ್ಕೆ ಅಲ್ಲಿಯ ಗೋಡೆಗಳು ಇಂದಿಗೂ ಜ್ವಲಂತ ಸಾಕ್ಷಿಯಾಗಿ ನಿಂತಿವೆ.

೧೨. ಎರಡು ಚಿಂತನೆಗಳು

–ಪ್ರೊ. ವಿ.ಎನ್. ಶೇಷಗಿರಿರಾವ್

೧. ಅನುದಿನವೂ ಹೊಸತಿನೆಡೆಗೆ

ನಮ್ಮ ಜೀವನ, ನಮ್ಮ ಸಮಾಜ ಅನುದಿನವೂ ಹೊಸತಿನೆಡೆಗೆ ಮುನ್ನುಗ್ಗುತ್ತಿದೆ. ಹೊಸತು, ಹೊಸತನಗಳಿಗೆ ಮತ್ತೊಂದು ಹೆಸರೇ ಬದಲಾವಣೆ. ಬದಲಾವಣೆ, ಅದರ ನೆರಳಿನಂತೆ ಹಿಂಬಾಲಿಸುವ ಹೊಸತನ – ಇವು ಸಮಾಜದ ಗುಣಧರ್ಮ. ಬದಲಾವಣೆ–ಹೊಸತನಗಳು ಒಂದು ಸೃಜನಶೀಲ ಸಮಾಜದ ಹೆಗ್ಗುರುತು. ಬಹುಮುಖಿ ಜೀವನದ ಜೀವರಸ, ಜೀವಂತಿಕೆ. ಬದಲಾವಣೆಯ ಸಂಭ್ರಮ ಅಂದರೆ ಅದರ ಹೊಸತನ, ಸಮಾಜದ ಎಲ್ಲೆಡೆಯೂ ಕಂಡುಬರುತ್ತದೆ. ಯಾವುದೇ ಕ್ಷೇತ್ರದಲ್ಲಿ ಒಬ್ಬ ಕ್ರಾಂತಿಕಾರಿ ಉದಯಿಸಿ ಬಂದಾಗ, ಅವನು ಸಮಾಜಕ್ಕೆ ಹೊಸತನದ ಸ್ಪರ್ಶಕೊಟ್ಟ ಎಂದು ಹೇಳುವುದುಂಟು. ಬದಲಾವಣೆ ಅಥವಾ ರೂಪಾಂತರ ಸಾಮಾಜಿಕ ಸನ್ನಿವೇಶಗಳನ್ನು ಬದಲಾಗಿಸುತ್ತದೆ; ಅದರೊಂದಿಗೇ ಹೊಸತನ ಅಸ್ತಿತ್ವಕ್ಕೆ ಬರುತ್ತದೆ. ಜೀವನದಲ್ಲಿ ಬದಲಾವಣೆ ಇಲ್ಲದಿದ್ದರೆ ಹೊಸತನವೂ ಇಲ್ಲ. ಜೀವನದಲ್ಲಿ ಹೊಸತನವಿಲ್ಲದಿದ್ದರೆ, ನಾವು ಏನನ್ನೋ ಕಳೆದುಕೊಳ್ಳುತ್ತಿದ್ದೇವೆ ಎಂದು ಅನಿಸದೆ ಇರದು. ಜೀವನದಲ್ಲಿ ಬದಲಾವಣೆ ಹೊಸತನಗಳಿಲ್ಲದಿದ್ದರೆ ಸಾಂಸ್ಕೃತಿಕ ಶೂನ್ಯತೆ ಉಂಟಾಗುವ ಸಂಭವ ಉಂಟು. ಜೀವನದ ಯಾಂತ್ರಿಕತೆಗೆ ದೊಡ್ಡ ಮದ್ದು ಬದಲಾವಣೆ–ಹೊಸತನಗಳು ಎಂದರೆ ತಪ್ಪೇನಿಲ್ಲ.

ಬದಲಾವಣೆ, ಅದರ ಸಂಗಾತಿಯಾದ ಹೊಸತನ – ಇವೇ ಜೀವನದ ಪರಮಸತ್ಯ ಎಂದು ಅನೇಕ ತತ್ವಜ್ಞಾನಿಗಳು ಪ್ರತಿಪಾದಿಸಿದ್ದಾರೆ. ಕ್ರಿಸ್ತಪೂರ್ವದಲ್ಲಿ ಹೆರಾಕ್ಲೈಟಸ್ ಎಂಬ ಗ್ರೀಕ್ ತತ್ವಜ್ಞಾನಿಯು, ಜಗತ್ತು, ಹೊಸತನದೆಡೆಗೆ ಪಯಣಿಸುತ್ತಿದೆ,

ನಿರಂತರವೂ ರೂಪಾಂತರ ಹೊಂದುತ್ತಿದೆ ಎಂದು ಹೇಳಿದ್ದಾನೆ. ಅವನ ಮಾತಂತೂ ಜನಜನಿತ. ಅದೇನೆಂದರೆ "ಹರಿಯುವ ನದಿಯಲ್ಲಿ ಎರಡು ಬಾರಿ ಕಾಲಿಡಲಾಗುವುದಿಲ್ಲ" ಎಂಬ ಉಕ್ತಿ. ಅಂದರೆ ಒಂದು ಬಾರಿ ನದಿಯಲ್ಲಿ ಕಾಲಿಟ್ಟು ತೆಗೆದು ಮತ್ತೆ ಇಡುವಷ್ಟರಲ್ಲಿ ಹೊಸ ನೀರು ಬಂದಿರುತ್ತದೆ. ಇದೇ ಅಭಿಪ್ರಾಯವನ್ನು ಬುದ್ಧನೂ ಕ್ರಿಸ್ತಪೂರ್ವದಲ್ಲಿಯೇ ವ್ಯಕ್ತಪಡಿಸಿದ್ದಾನೆ. ಅವನ ಪ್ರಕಾರ ಸತ್ಯ, ಎಲ್ಲ ಬಗೆಯ ಬದಲಾವಣೆಗಳಿಂದ ಮುಕ್ತವಾದದ್ದಲ್ಲ; ನಿರಂತರ ರೂಪಾಂತರಗಳನ್ನು ಗತಿಯನ್ನೂ ಹೊಂದುತ್ತಿರುವುದೇ ಸತ್ಯ; ಆ ಬದಲಾವಣೆ ಕ್ಷಣಮಾತ್ರದ್ದೂ ಆಗಿರಬಹುದು.

ಬೀಜ, ಬೀಜವಾಗಿಯೇ ಇದ್ದರೆ, ಅದರಲ್ಲಿ ಸ್ವಾರಸ್ಯವಿಲ್ಲ, ಹೊಸತನವಿಲ್ಲ; ಅದು ಮೊಳೆತು, ಮೊಳಕೆಯೊಡೆದು, ಗಿಡವಾಗಿ ಮರವಾಗಿ ಹೊಸತನವನ್ನು ಪ್ರಕಾಶಿಸುತ್ತದೆ; ಆಗ ಮಾತ್ರ ಅದಕ್ಕೆ ಸಾರ್ಥಕತೆ ಬರುತ್ತದೆ. ಹೀಗೆ ಒಂದು ವಸ್ತುವಿನ ಸಾರ್ಥಕ್ಯ ಅದು ಹೊಸ ಹೊಸ ರೂಪಗಳನ್ನು ಧರಿಸುವುದರಲ್ಲಿದೆ ಎಂದು ಗ್ರೀಕ್ ತತ್ತ್ವಜ್ಞಾನಿ ಅರಿಸ್ಟಾಟಲ್ ಹೇಳುತ್ತಾನೆ. ಎಣ್ಣೆ ಬೀಜದಲ್ಲಿ, ಸಸ್ಯದಲ್ಲಿ ಅವ್ಯಕ್ತವಾಗಿರುವ ಎಣ್ಣೆ, ಗಾಣ ಆಡಿಸಿದ ಮೇಲೆ, ಅರೆದ ಮೇಲೆ, ಉಪಯೋಗಕ್ಕೆ ಬರುವ ಎಣ್ಣೆ ಆದಾಗ ಅದರ ಹೊಸತನ ವ್ಯಕ್ತವಾಗುತ್ತದೆ. ಹೀಗೆ ಅವ್ಯಕ್ತವಾದದ್ದು ವ್ಯಕ್ತವಾಗುವುದೇ, ಸಾಧ್ಯವಾದುದು ಸಿದ್ಧವಾಗುವುದೇ ಹೊಸತನ, ಹೊಸತು ಎನಿಸುವುದು. ಮಗುವಿನಲ್ಲಿ ಸುಪ್ತವಾಗಿರುವ ವಯಸ್ಕತನ, ನವತರುಣ ನವತರುಣಿ ರೂಪದಲ್ಲಿ ವ್ಯಕ್ತವಾಗುವುದೇ ಹೊಸತನವೆನಿಸುವುದು. ಇದೊಂದು ನಿರಂತರ ಪ್ರಕ್ರಿಯೆ ಎಂದು ಅರಿಸ್ಟಾಟಲ್ ಪ್ರತಿಪಾದಿಸುತ್ತಾನೆ.

ಹರಿಯುವ ನೀರಿನ ತರಹ, ಬದಲಾವಣೆ ಹಾಗೂ ಹೊಸತನವಿಲ್ಲದಿದ್ದರೆ ಜೀವನ ರಾಡಿಯಾಗಿ ಬರಡಾಗುತ್ತದೆ, ನಿರರ್ಥಕವಾಗುತ್ತದೆ, ಶೂನ್ಯವಾಗುತ್ತದೆ. ಹೊಸತನ ನವನವೋನ್ಮೇಷಣತೆ ಇರಬೇಕಾದರೆ, ಜೀವನದಲ್ಲಿ ಬಹುತ್ವವಿರಬೇಕು. ಒಬ್ಬ ವ್ಯಕ್ತಿ ಇದ್ದಹಾಗೆ ಮತ್ತೊಬ್ಬ ವ್ಯಕ್ತಿ ಇಲ್ಲ; ಒಂದು ವಸ್ತುವಿದ್ದ ಹಾಗೆ ಮತ್ತೊಂದು ವಸ್ತುವಿಲ್ಲ; ಪ್ರತಿಯೊಂದು ವಿಶಿಷ್ಟವಾದುದು; ಅನೇಕತೆ ಜೀವನಕ್ಕೆ ಸೊಬಗನ್ನೂ ಸೌಂದರ್ಯವನ್ನೂ ನೀಡುತ್ತದೆ. ಜೀವನದಲ್ಲಿ ನವೋತ್ಸಾಹ ಹುರುಪು ಹುಮ್ಮಸ್ಸುಗಳನ್ನು ಉಂಟುಮಾಡುತ್ತದೆ ಎಂದು ಶ್ರೀ ಮಧ್ವಾಚಾರ್ಯರೂ ಸಾರುತ್ತಾರೆ. ಆಧುನಿಕ ಕಾಲದಲ್ಲಿ ಲಾಯ್ಡ್ ಮಾರ್ಗನ್, ಬರ್ಗ್‌ಸನ್, ಅಲೆಕ್ಸಾಂಡರ್ ಮುಂತಾದ ಪಾಶ್ಚಾತ್ಯ ತತ್ವಜ್ಞಾನಿಗಳೂ ಕೂಡ, ವಿಶ್ವ ಪ್ರತಿಕ್ಷಣವೂ ಬದಲಾವಣೆ ಹೊಂದುವುದರ ಮೂಲಕ

ಹೊಚ್ಚ ಹೊಸತನವನ್ನು ಪ್ರಕಟಪಡಿಸುತ್ತಿದೆ ಎಂದು ಉದ್ಘೋಷಿಸುತ್ತಾರೆ. ವರಕವಿ ಬೇಂದ್ರೆ ದನಿಗೂಡಿಸುತ್ತಾರೆ. "ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ; ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ" ಉಪನಿಷತ್ತು ಸಾರುತ್ತದೆ.

"ಮೊದಲು ಅದೊಂದೇ ಇತ್ತು; ಅದು ಅನೇಕವಾಗಬೇಕೆಂದು ಯೋಚಿಸಿತು; ಅದು ಅನೇಕವಾಯಿತು". ಹೊಸತನ ಬದುಕಿನ ಶೂನ್ಯತೆಯನ್ನು ಕಳೆಯುವ ಹೊಂಗಿರಣ.

೨. ಪಾಪವನ್ನು ದ್ವೇಷಿಸುವ, ಪಾಪಿಯನ್ನಲ್ಲ

'ಪಾಪವನ್ನು ದ್ವೇಷಿಸುವ, ಪಾಪಿಯನ್ನಲ್ಲ' ಎಂಬ ಮಾತು ಬಹಳ ಅರ್ಥಪೂರ್ಣವಾದುದು. ಮುಂದುವರಿದ ಸಮಾಜದ ಹೆಗ್ಗುರುತು ಏನೆಂದರೆ ಸತ್ಯನಿಷ್ಠೆ, ಅಹಿಂಸಾಪರತೆ, ಶೀಲ, ಕರ್ತವ್ಯನಿಷ್ಠೆ ; ತ್ಯಾಗಮನೋಭಾವ ಹಾಗೂ ಭೌತಿಕ ಸುಖದ ವಿಮುಖತೆ. ಮಹಾಭಾರತ ಸಾರುತ್ತದೆ : 'ಸತ್ಯವನ್ನು ನುಡಿಯುವುದು ನೂರು ಅಶ್ವಗಳನ್ನು ತ್ಯಾಗ ಮಾಡುವುದಕ್ಕಿಂತ ಹೆಚ್ಚಿನದು' ಎಂದು. ಕಾಯಾ ವಾಚಾ ಮನಸಾ ಮತ್ತೊಂದು ಜೀವಿಗೆ ಹಾನಿ ಮಾಡದಿರುವುದೇ, ನೋವನ್ನು ಉಂಟುಮಾಡದಿರುವುದೇ ಅಹಿಂಸೆ. ಅಹಿಂಸೆಗಿಂತ ಹೆಚ್ಚಿನದಾದ ಧರ್ಮವಿಲ್ಲ. ಕರ್ತವ್ಯವಿಲ್ಲ. 'ಅಹಿಂಸಾ ಪರಮೋಧರ್ಮಃ. 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು' ಎಂದು ಸರ್ವಜ್ಞ ಕವಿ ಹೇಳಿದ್ದಾನೆ. 'ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ' ಎಂಬ ನಾಣ್ಣುಡಿಯುಂಟು. 'ತಾನೂ ಬದುಕಬೇಕು, ಇತರರನ್ನು ಬದುಕಲು ಬಿಡಬೇಕು' ಎಂಬ ಉದಾರ ತತ್ವದ ಮೇಲೆ ಸಮಾಜ ರೂಪುಗೊಳ್ಳಬೇಕು. ಈ ದೇಹ ಎಷ್ಟು ದಿನ ಇರುತ್ತೆ? ಅದು ಗತಿಸುವುದು ಖಡಾಖಂಡಿತ. ಅದು ಬಿದ್ದು ಹೋಗುವಷ್ಟರಲ್ಲಿ ಪರೋಪಕಾರವನ್ನು ಮಾಡಬೇಕು. 'ಪರೋಪಕಾರಾರ್ಥಂ ಇದಂ ಶರೀರಂ' ಎನ್ನುತ್ತಾರೆ ವ್ಯಾಸ ಮಹರ್ಷಿ. ತಾನು ಚಕ್ರವರ್ತಿಯಾಗಬೇಕೆಂಬ ಮಹದಾಸೆಗೆ ಬಲಿಯಾಗಿ ಭರತ, ಎದುರಾಳಿಯಾದ ತನ್ನ ತಮ್ಮ ಬಾಹುಬಲಿಯೊಡನೆ ಸ್ಪರ್ಧೆಗಿಳಿದು ದೃಷ್ಟಿಯುದ್ಧ, ಜಲಯುದ್ಧ ಮುಂತಾದವುಗಳನ್ನು ಮಾಡುತ್ತಾನೆ. ಬಾಹುಬಲಿಯದೇ ಎಲ್ಲದರಲ್ಲೂ ಮೇಲುಗೈ ಆಗುತ್ತದೆ. ಕೊನೆಯದಾದ ಮಲ್ಲಯುದ್ಧ ಪ್ರಾರಂಭವಾಗುತ್ತದೆ. ಭರತನು ಸೋಲುವ ಚಿನ್ಹೆಗಳು ಕಾಣಿಸುತ್ತವೆ. ಅಪ್ರತಿಮ ಶೌರ್ಯಪರಾಕ್ರಮಗಳಿಂದ ಕೂಡಿದ ಬಾಹುಬಲಿ, ಭರತನನ್ನು ಮೇಲಕ್ಕೆ ಎತ್ತಿ ನೆಲಕ್ಕೆ ಅಪ್ಪಳಿಸಲು ಮುಂದಾಗಿದ್ದಾನೆ.

ತಕ್ಷಣವೇ ಅವನಲ್ಲಿ ವಿವೇಕ ಉದಯಿಸುತ್ತದೆ; 'ನಾನೆಂತಹ ನೀಚ ಕೆಲಸವನ್ನು ಮಾಡುತ್ತಿದ್ದೇನೆ! ಒಡಹುಟ್ಟಿದ ಅಣ್ಣನನ್ನೇ ಸಾಯಿಸಲು ಹೊರಟಿದ್ದೇನಲ್ಲ; ಇದು ಕೂಡದು' ಎಂದು ಬಗೆದು ಅಪ್ಪಳಿಸಲು ಮೇಲಕ್ಕೆ ಎತ್ತಿದ್ದ ಅಣ್ಣ ಭರತನನ್ನು ಹೂವಿನಂತೆ ಕೆಳಗೆ ಇಳಿಸಿ, ಸಕಲವನ್ನೂ ಅಣ್ಣನಿಗೆ ಬಿಟ್ಟು ತನ್ನ ತ್ಯಾಗ ಮನೋಭಾವವನ್ನು ಬಾಹುಬಲಿ ಮೆರೆಯುತ್ತಾನೆ, ಹೊರಸೂಸುತ್ತಾನೆ. ಹೀಗೆ ಸತ್ಯ, ತ್ಯಾಗ, ದಯೆ, ಕರುಣೆಗಳು ಸಮಾಜ ಯಾವ ದಿಕ್ಕಿನಲ್ಲಿ ಸಾಗಬೇಕು ಎನ್ನುವ ದಿಕ್ಸೂಚಿಗಳಾಗಿವೆ. ವ್ಯಕ್ತಿಗಳು ಎಲ್ಲಿಯ ತನಕ ಇಂತಹ ಮೌಲ್ಯ ಮನೋಭಾವನೆಯನ್ನು, ಮನವರಿಕೆಯನ್ನು ಹೊಂದಿರುತ್ತಾರೋ ಅಲ್ಲಿಯ ತನಕ ಸಮಾಜದಲ್ಲಿ ಪಾಪ ಎಂಬುದು ಅನಿಷ್ಟ ಎಂಬುದು ಇಲ್ಲ. ಉಂಟಾಗುವುದೂ ಇಲ್ಲ. ಯಾವಾಗ ಮಾನವ ಈ ಶಿಷ್ಟಾಚಾರವನ್ನು ಉಲ್ಲಂಘಿಸುತ್ತಾನೋ ಆಗ ಸಮಾಜದಲ್ಲಿ ಪಾಪಗಳು ತಲೆ ಎತ್ತುತ್ತವೆ. 'ಸತ್ಯಮೇವ ಜಯತೆ ನ ಅನೃತಂ' (ಸತ್ಯವು ಮಾತ್ರ ಗೆಲ್ಲುತ್ತದೆ, ಸುಳ್ಳಲ್ಲ) ಎಂದು ಉಪನಿಷತ್ತು, ಸುಳ್ಳು ಹಾಗೂ ಸುಳ್ಳಾಡುವುದರ ವಿರುದ್ಧ ಎಚ್ಚರಿಸುತ್ತದೆ. ಆದರೂ ಸಮಾಜದಲ್ಲಿ ಸುಳ್ಳು, ಮೋಸ, ದಗ, ದ್ರೋಹ, ಹಿಂಸೆ, ಹಾದರ, ಕಳ್ಳತನ, ಸ್ವಾರ್ಥಪರತೆ ತಾಂಡವವಾಡುತ್ತಿವೆಯಲ್ಲ ಏಕೆ? ಅವುಗಳನ್ನು ಮಾಡುವವರನ್ನು ಪಾಪಿಗಳು, ನೀಚರು ಎನ್ನುವುದೇ? ಅವರನ್ನು ದ್ವೇಷಿಸುವುದೇ? ಎಂಬ ಪ್ರಶ್ನೆ ಉದಯಿಸುತ್ತದೆ. ಆಳವಾಗಿ ಆಲೋಚಿಸಿದರೆ ಅದು ಸರಿಯಲ್ಲ ಎಂದು ತೋರುತ್ತದೆ. ಪಾಪವನ್ನು ಕುರಿತು, ದ್ವೇಷವಿರಬೇಕೇ ಹೊರತು, ಪಾಪಿಯನ್ನಲ್ಲ. ಭಾರತೀಯ ತತ್ವಶಾಸ್ತ್ರದ ಪ್ರಕಾರ ಪ್ರತಿಯೊಬ್ಬ ಮಾನವನ ಅಂತಃಸತ್ವವೇ ಆತ್ಮ. ಅದು ಅತ್ಯಂತ ಪರಿಶುದ್ಧವಾದುದು. ಅದು ಸತ್, ಚಿತ್, ಆನಂದ (ಸಚ್ಚಿದಾನಂದ). ಅದಕ್ಕೆ ಯಾವ ದೋಷವೂ ತಟ್ಟುವುದಿಲ್ಲ. ಆದರೆ ಅದು ದೇಹದೊಡನೆ ತನ್ನನ್ನು ತಾನು ಮಿಳಿತಗೊಳಿಸಿಕೊಂಡಿರುವುದರಿಂದ ಮಾನವ, ತಾನು ಶುದ್ಧನಾಗಿದ್ದರೂ ಅಶುದ್ಧನೆಂದು ಭಾವಿಸುತ್ತಾನೆ. ಆತ್ಮ ಸರ್ವದೋಷ ರಹಿತವಾಗಿದ್ದರೂ ಮಾನವ ಅಜ್ಞಾನದಿಂದ ತನ್ನನ್ನು ತಾನು ಪಾಪಿ, ಯಕಶ್ಚಿತ್ ಕ್ಷುದ್ರಜಂತು, ತಾನು ದುಃಖಿ, ತಾನು ಭೋಗಿ, ತಾನು ಕರ್ತೃ ಜ್ಞಾತೃ ಎಂದು ತಪ್ಪಾಗಿ ಭಾವಿಸುತ್ತಾನೆ; ಅನೇಕ ಪಾಪಕಾರ್ಯಗಳನ್ನು ಮಾಡಲು ಮುಂದಾಗುತ್ತಾನೆ. ಇದೆಲ್ಲ ಅವಿವೇಕದ ಫಲ. ಅಜ್ಞಾನ, ಅವಿವೇಕದಿಂದ ಅನೇಕ ರೋಗರುಜಿನಗಳಿಗೆ ಬಲಿಯಾಗುತ್ತಾನೆ. ನಾವು ಅಜ್ಞಾನ, ಅವಿವೇಕಗಳನ್ನು ರೋಗರುಜಿನಗಳನ್ನು ದ್ವೇಷಿಸಿ ನಿರ್ಮೂಲನ ಮಾಡಬೇಕೇ ಹೊರತು, ಅಜ್ಞಾನಿಗಳನ್ನು ಅವಿವೇಕಿಗಳನ್ನು ದ್ವೇಷಿಸುವುದಲ್ಲ; ಏಡ್ಸನ್ನು ದ್ವೇಷಿಸಬೇಕೇ

ವಿನಹ ಏಡ್ಸ್ ರೋಗಿಯನ್ನಲ್ಲ. ಅನ್ಯಾಯವನ್ನು ದ್ವೇಷಿಸಿ ಕಿತ್ತುಹಾಕಬೇಕೇ ಹೊರತು ಅನ್ಯಾಯಕಾರಿಯನ್ನಲ್ಲ ; ತಪ್ಪನ್ನು ದ್ವೇಷಿಸಬೇಕೇ ಹೊರತು ತಪ್ಪಿತಸ್ಥನನ್ನು ಅಲ್ಲ. ತಪ್ಪಿತಸ್ಥನಿಗೆ ತನ್ನ ತಪ್ಪಿನ ಅರಿವಾಗುವಂತೆ ಮಾಡಿ, ಅವನನ್ನು ಒಳ್ಳೆಯ ದಾರಿಗೆ ತರಬೇಕು; ಕೀರ್ತಿಶನಿಯನ್ನು ದ್ವೇಷಿಸಬೇಕೇ ವಿನಹ ಕೀರ್ತಿವಂತರನ್ನಲ್ಲ. ಅಸಂಸ್ಕೃತಿಯನ್ನು ದ್ವೇಷಿಸಬೇಕೇ ಹೊರತು ಅನಾಗರಿಕ ಕಾಡು ಜನರನ್ನಲ್ಲ; ದಾರಿದ್ರ್ಯವನ್ನು ದ್ವೇಷಿಸಬೇಕೇ ವಿನಹ ದರಿದ್ರರನ್ನಲ್ಲ; ಸುಳ್ಳು ಕಪಟಗಳ ತಟವಟಗಳನ್ನು ದ್ವೇಷಿಸಬೇಕೇ ಹೊರತು ; ಉನ್ನತ ಉದಾತ್ತ ಮಾನವೀಯ ಮೌಲ್ಯ ಪ್ರತಿಪಾದಕರೂ, ನಿಷ್ಠಾವಂತ ಅನುಷ್ಠಾನಿಗಳೂ ಆದ ಭಾಗವತರನ್ನಲ್ಲ; ಶ್ರೀ ಸಾಮಾನ್ಯರನ್ನಲ್ಲ!.

ಸಂಚಿಕೆಯ ಬರಹಗಾರರು

ಡಾ. ಎಸ್. ಶಿವರಾಮು
ಇತಿಹಾಸ ಉಪನ್ಯಾಸಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಪಿರಿಯಾಪಟ್ಟಣ, ಮೈಸೂರು ಜಿಲ್ಲೆ

ಜೆ. ಲೋಹಿತ್
ಅತಿಥಿ ಉಪನ್ಯಾಸಕರು
ಪತ್ರಿಕೋದ್ಯಮ ವಿಭಾಗ
ಮಹಾರಾಜ ಕಾಲೇಜು, ಮೈಸೂರು - ೫

ಲೋಕೇಶ ಸಿ.ಇ.
ಹಿರಿಯ ಶ್ರೇಣಿ ಉಪನ್ಯಾಸಕ
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು-೫

ಡಾ. ಸಿ.ಕೆ. ಪುಟ್ಟಸ್ವಾಮಿ
ಪ್ರವಾಚಕರು
ಪತ್ರಿಕೋದ್ಯಮ ವಿಭಾಗ
ಮಾನಸಗಂಗೋತ್ರಿ, ಮೈಸೂರು-೬

ಅರುಳಪ್ಪ ಪಿ.
ಸಂಶೋಧಕರು
ತತ್ತ್ವಶಾಸ್ತ್ರ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು-೬

ಎ. ಶ್ರೀಧರಮೂರ್ತಿ
ಪಿಎಚ್.ಡಿ. ಬಾಹ್ಯ ಸಂಶೋಧನಾ ಅಭ್ಯರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೬

ಸಿದ್ದರಾಜು ವಿ.ಜಿ

ಡಾ. ಎಂ ಇಂದಿರಾ
ಸಂಶೋಧಕರು
ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗ
ಮಾನಸಗಂಗೋತ್ರಿ, ಮೈಸೂರು-೬

ರತ್ನಮ್ಮ ಜಿ.
ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗ
ಮಾನಸಗಂಗೋತ್ರಿ, ಮೈಸೂರು-೬

ಶಿವಾನಂದ
ಸಂಶೋಧಕ, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು-೬

ಎಸ್. ನಾಗರಾಜು
ಸಂಶೋಧಕರು,
ರಾಜ್ಯಶಾಸ್ತ್ರ ಅಧ್ಯಯನ ವಿಭಾಗ,
ಮಾನಸಗಂಗೋತ್ರಿ, ಮೈಸೂರು-೬

ಡಾ. ಕೆ.ಎಂ. ಮಹದೇವಸ್ವಾಮಿ
ಉಪನ್ಯಾಸಕರು
ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ
ಸುತ್ತೂರು

ಪ್ರೊ. ವಿ.ಎನ್. ಶೇಷಗಿರಿರಾವ್
ಮುಖ್ಯಸ್ಥರು, ತತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು-೬

ಕೆ.ಸಂ. ೬೭೭-ಎಂಯುಪಿಪಿ-೩೦೦ ಪ್ರತಿಗಳು-೧೯-೨-೨೦೧೧